ಜನಪ್ರಿಯ ಗ್ರಂಥಮಾಲೆ

೪೨೮

ಬೇಂದ್ರೆಯವರ ಕಾವ್ಯದ ಮೇಲೆ ಜಾನಪದ ಪ್ರಭಾವ

(ಬೇಂದ್ರೆಯವರ ಕಾವ್ಯದ ಜಾನಪದ ಸತ್ವ)

ಸಿ. ಕೆ. ನಾವಲಗಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಜುಲೈ; ೧೯೯೩

ಉಪನ್ಯಾಸ ಗ್ರಂಥಮಾಲೆ

೪೨೮

ಬೇಂದ್ರೆಯವರ ಕಾವ್ಯದ ಮೇಲೆ ಜಾನಪದ ಪ್ರಭಾವ

(ಬೇಂದ್ರೆಯವರ ಕಾವ್ಯದ ಜಾನಪದ ಸತ್ವ)

ಸಿ. ಕೆ. ಸಾವಲಗಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜುಲೈ, ೧೯೬೩

ಪ್ರಕಾಶಕರು: ಡಾ.ಸಿ.ಆರ್.ಯರವಿನತೆಲಿಮಠ
ಕಾರ್ಯನಿರ್ವಾಹಕ ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ: ೫,೦೦೦ ಪ್ರತಿಗಳು
ಜುಲೈ , ೧೯೯೩

ಬೆಲೆ ರೂ ೧=೦೦

ಮುದ್ರಕರು:
ಶ್ರೀ ಜೆ.ಎ.ಪೆರೇರಾ
ಕಾರ್ಯನಿರ್ವಾಹಕ ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಯಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ. ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸ ಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನೀರಿಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೨೭ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಡಾ.ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ಕರ್ನಾಟಕ ವಿಶ್ವವಿದ್ಯಾಲಯದ ೩೯೭ನೆಯ ಪ್ರಚಾರೋಪನ್ಯಾಸ ಶಿಬಿರವು ವಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಅನುಭಾವಿ ಕವಿ ಮಧುರಚೆನ್ನರ ಊರು ಹಲಸಂಗಿಯಲ್ಲಿ ೧೯೯೨ರ ಮಾರ್ಚ್ ೧೫ ಮತ್ತು ೧೬ ರಂದು ಜರುಗಿತ್ತು. ಪ್ರಸ್ತುತ ಶಿಬಿರದಲ್ಲಿ ಭಾಗಿಯಾದ ನಾನು ದಿನಾಂಕ ೧೬-೩-೯೨ ರಂದು "ಬೇಂದ್ರೆಯವರ ಕಾವ್ಯದ ಮೇಲೆ ಜಾನಪದ ಪ್ರಭಾವ" ಎಂಬ ವಿಷಯವಾಗಿ ನೀಡಿದ ಉಪನ್ಯಾಸದ ಲಿಖಿತರೂಪ ಪ್ರಸ್ತುತ ಕಿರುಗ್ರಂಥ.

ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದೂವರೆಸಾವಿರ ವರುಷಗಳ ಸುದೀರ್ಘ ಇತಿಹಾಸವಿದೆ. ಇಷ್ಟು ಕಾಲಾವಧಿಯಲ್ಲಿ ಜಾನಪದೀಯತೆಯನ್ನು ಸಂಪೂರ್ಣವಾಗಿ ಮೈಗೂಡಿಸಿಕೊಂಡ, ಸತ್ವಶಾಲಿ ಕವಿಗಳು ವಿರಳ, ಅಪರೂಪ. ಅಂಥ ವಿರಳರಲ್ಲಿಯೇ ವಿರಳರು, ಅಪರೂಪದಲ್ಲಿಯೇ ಅಪರೂಪರು, ಹೊಸಗನ್ನಡ ಕಾವ್ಯದ ಮಹತ್ವದ, ಮಹಾಕವಿ ಶ್ರೀ. ದ.ರಾ. ಬೇಂದ್ರೆಯವರು.

ಇಂದು, ಸಾಹಿತ್ಯ, ಜನಸಾಮಾನ್ಯರ ಭಾವಕೋಶಕ್ಕೆ ಅದೆಷ್ಟು ಇಳಿದಿದೆ ಎಂಬುದು ಖೇದಾತ್ಮಕವಾದ ಪ್ರಶ್ನೆ. ಅದಕ್ಕೆ ಬಹುಶಃ ನಕಾರಾತ್ಮಕವಾದ ಉತ್ತರವೇ ಎಂದು ಹೇಳಬಹುದು. ನವೋದಯ ಕವಿಗಳು-ಮುಖ್ಯವಾಗಿ ಜಾನಪದವನ್ನು ಅವಲಂಬಿಸಿದ ಬೇಂದ್ರೆಯಂಥ ಕವಿಗಳು ಮಾತ್ರ ಜನತೆಯ ನರ-ನಾಡಿಗಳನ್ನು ಬಡಿದು ಎಚ್ಚರಿಸಿದರು.

ಜಾನಪದ ಕಾವ್ಯಸತ್ವದಿಂದ ಮೂಲ ಸ್ಫೂರ್ತಿಯನ್ನು ಪಡೆದ ಹೊಸಗನ್ನಡದ, ಜಾನಪದೀಯ ತುಡಿತದ ಕವಿಗಳಲ್ಲೆಲ್ಲ ಶಿಖರಪ್ರಾಯರಾದವರು ಬೇಂದ್ರೆಯವರು. ಜನತಾಂತರ ದೃಷ್ಟಿಯುಳ್ಳ ಬೇಂದ್ರೆ ಕಾವ್ಯದಲ್ಲಿ ಮಡುಗಟ್ಟಿನಿಂತ ಜಾನಪದ ಪ್ರಭಾವ ಒಡೆದು ಕಾಣುವಂಥದು. ಪರಭಾಷೆ ಮತ್ತು ವ್ಯಕ್ತಿಗಳ ಪ್ರಭಾವ ಇವರ ಕಾವ್ಯದ ಮೇಲಾಗಿದ್ದರೂ; ಕನ್ನಡ ಜಾನಪದದಷ್ಟು ಆಳಕ್ಕೆ ಇಳಿದಿಲ್ಲವೆಂದು ತೋರುತ್ತದೆ. ಬೇಂದ್ರೆಯವರ ಕಾವ್ಯದ ಮೇಲೆ ದಟ್ಟವಾಗಿ ಪ್ರಭಾವ ಬೀರಿದ ಜಾನಪದ ವಸ್ತು-ಭಾವ-ಭಾಷೆ-ಛಂದಸ್ಸು-ಲಯ (=ಜಾನಪದ ಸಾಹಿತ್ಯ) ಮೊದಲಾದವುಗಳನ್ನು ಇಲ್ಲಿ ಸ್ಥೂಲವಾಗಿ ಪರಿಶೀಲಿಸಲಾಗಿದೆ. ಪ್ರಭಾವ ಬೀರಿದ ಎಲ್ಲ ಜಾನಪದೀಯ ಅಂಶಗಳನ್ನು ಈ ಕಿರುಹೊತ್ತಿಗೆಯಲ್ಲಿ ಸಂಗ್ರಹಿಸಿ ಚರ್ಚಿಸಲು ಅಸಾಧ್ಯವಾದರೂ ಬೇಂದ್ರೆ ಕಾವ್ಯದ ಜಾನಪದೀಯ ಅಧ್ಯಯನಕ್ಕೆ ಇದು ಒಂದು ತೋರಬೆರಳು. ಈ ನಿಟ್ಟಿನ ಬೇಂದ್ರೆ ಕಾವ್ಯದ ಸಮಗ್ರ ಅಧ್ಯಯನ ನಡೆಯಬೇಕಾದ ಅನಿವಾರ್ಯತೆ ಎಂದಿಗಿಂತಲೂ ಇಂದು ಹೆಚ್ಚಾಗಿದೆ ಎಂದು ಸೂಚಿಸಬಯಸುತ್ತೇನೆ.

ನನ್ನನ್ನು ಉಪನ್ಯಾಸಕ್ಕೆ ಬರಮಾಡಿಕೊಂಡು, ಈಗ ಅದನ್ನು ಬರೆಯಿಸಿ, ಗ್ರಂಥರೂಪದಲ್ಲಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಪ್ರೊ ಶ್ರೀ ಸದಾನಂದ ಕನವಳ್ಳಿ ಅವರನ್ನು ಮತ್ತು ಕಾರ್ಯಸಂಯೋಜಕರಾದ ಶ್ರೀಮತಿ ಲಲಿತಾ ಗವಳಿ ಅವರನ್ನು ತುಂಬ ಕೃತಜ್ಞತೆಯಿಂದ ನೆನೆಯುತ್ತೇನೆ. ನನ್ನ ಹಲಸಂಗಿ ಉಪನ್ಯಾಸದ ಸ್ಫೂರ್ತಿಚೇತನರಾದ ಗುರುದ್ವಯರೂ

ಆದ ಡಾ. ಎಂ. ಎಂ. ಕಲಬುರ್ಗಿ, ಡಾ. ಗುರುಲಿಂಗ ಕಾಪಸೆ ಇವರಿಗೆ ನಮನಗಳು. ಅಂದು ನನ್ನ ಉಪನ್ಯಾಸ ಕೇಳಿ ಸಂತಸ ವ್ಯಕ್ತಪಡಿಸಿದ ದಿ. ಮಧುರಚೆನ್ನರ ಅಳಿಯಂದಿರು-ಮೊಮ್ಮಕ್ಕಳು ಹಾಗೂ ಹಲಸಂಗಿಯ ಜನಸ್ತೋಮವನ್ನು ಮರೆಯಲಾರೆ. ಉಪನ್ಯಾಸ ಕಾರ್ಯಕ್ರಮ ಯಶಸ್ವಿಯಾಗಲು ಶ್ರಮಿಸಿದ ಶ್ರೀ. ಕೆ. ರವೀಂದ್ರನಾಥ ಮತ್ತು ಶ್ರೀ. ಅರವಿಂದ ಪದವಿಪೂರ್ವಕಾಲೇಜಿನ ಶಿಕ್ಷಕ ಸಿಬ್ಬಂದಿಗೆ ಕೃತಜ್ಞತೆಗಳು. ಗ್ರಂಥರಚನೆಗೆ ನೆರವು ನೀಡಿದ ಗ್ರಂಥ ಕರ್ತೃಗಳಿಗೂ ಋಣಿ.

ಜೆ.ಇ.ಎಸ್.ಕಲಾ- ವಾಣಿಜ್ಯ ಮಹಾವಿದ್ಯಾಲಯ, ಗೋಕಾಕ

ಸಿ. ಕೆ. ನಾವಲಗಿ

ಪರಿವಿಡಿ

೧. ಪೀಠಿಕೆ

ಯಾವುದೇ ದೇಶದ ಭಾಷಾಸಾಹಿತ್ಯವನ್ನು ಎರಡು ಪ್ರಮುಖ ಪ್ರಕಾರಗಳಲ್ಲಿ ವಿಂಗಡಿಸಲಾಗುತ್ತದೆ; ಒಂದು ಜನವಾಣಿಯಿಂದ ಹುಟ್ಟಿದ 'ಜನಪದಸಾಹಿತ್ಯ' ಅಥವಾ 'ಪಾಮರ ಸಾಹಿತ್ಯ,' ಇನ್ನೊಂದು ಕವಿವಾಣಿಯಿಂದ ಹುಟ್ಟಿದ 'ಕವಿಸಾಹಿತ್ಯ' ಅಥವಾ 'ಪಂಡಿತಸಾಹಿತ್ಯ'.

ಮಾನವ ಮೊದಲು ತನ್ನ ಸುತ್ತಲಿನ ಪ್ರಕೃತಿ ಪರಿಸರ, ಜೀವನ ಪರಿಸರವನ್ನು ಕಂಡುಂಡು ಅನುಭವಿಯಾದ. ಆ ಸ್ವಾನುಭವವನ್ನೇ, ಪ್ರಕೃತಿದತ್ತ ತನ್ನ ಪ್ರತಿಭಾಬಲದಿಂದ ತೋಡಿಕೊಂಡ, ಹಾಡಿಕೊಂಡ. ಹೀಗೆ ತೋಡಿಕೊಂಡ ಅನುಭವ ಅವನಿಗೇ ಗೊತ್ತಿಲ್ಲದ ಸಾಹಿತ್ಯದ ಯಾವುದೇ ಒಂದು ರೂಪವಾಗಿ ಹೊಮ್ಮಿತು. ಯಾವುದೇ ಸಾಹಿತ್ಯದ ಸಂಸ್ಕಾರವಿಲ್ಲದ ಅನಕ್ಷರಸ್ಥನೊಬ್ಬನ ಹೃದಯದಿಂದ ಅಪ್ರಜ್ಞಾಪೂರ್ವಕವಾಗಿ ಹೊಮ್ಮಿದ ಅನುಭವವಾಣಿಯೇ ಜನಪದ ಸಾಹಿತ್ಯ ಎನಿಸಿಕೊಂಡಿತು. ಇದುವೇ ಕಾಲನಂತರದಲ್ಲಿ ಮಾನವನ ಬುದ್ಧಿ ವಿಕಾಸಗೊಂಡಾಗ, ಸಂಸ್ಕಾರಗೊಂಡು ಪರಿಷ್ಕೃತರೂಪತಾಳಿ ಪ್ರೌಢಸಾಹಿತ್ಯವಾಯಿತು. ಈ ಹಿನ್ನಲೆಯಲ್ಲಿ ಬಿ. ಎಂ. ಶ್ರೀ. ಅವರ "ಜನವಾಣಿ ಬೇರು ಕವಿವಾಣಿ ಹೂವು." [೧]. ಎಂಬ ಪ್ರಸಿದ್ಧವಾದ ಮಾತು ಸಾರ್ಥಕ ಅರ್ಥ ಬಿಂಬಿಸುತ್ತದೆ.

ಕನ್ನಡ ಸಾಹಿತ್ಯಕ್ಕೆ ಸುಮಾರು ಒಂದೂವರೆ ಸಾವಿರ ವರುಷಗಳ ಸುದೀರ್ಘ ಇತಿಹಾಸವಿದೆ; ಆದರೆ ಜನಪದ ಸಾಹಿತ್ಯಕ್ಕೆ ಇತಿಹಾಸವಿಲ್ಲ; ಪರಂಪರೆಯಿದೆ. ಪರಂಪರೆಯ ಮುದ್ರೆಯನ್ನೊತ್ತಿಕೊಂಡೇ, ಬಾಯಿಂದ ಕಿವಿಗೆ, ಕಿವಿಯಿಂದ ಬಾಯಿಗೆ

ಅವಿರತವಾಗಿ ಶಿಷ್ಟಸಾಹಿತ್ಯದ ಜೊತೆಜೊತೆಗೇ ಗುಪ್ತಗಾಮಿನಿಯಾಗಿ ಹರಿದುಬಂದಿದೆ.

ಮಾನವ ಬದುಕಿನಲ್ಲಿ, 'ಜನಪದಸಾಹಿತ್ಯ' ಒಂದು ಅನಿವಾರ್ಯ ಅಂಗವಾಗಿ, ಅರಳಿ ಬೆಳೆದು ಬಂದಿತಾದರೂ, ಆದಿಮಾನವ ಆಧುನಿಕ ನಾಗರಿಕನಾದಂತೆ ಅದು ಮೈಥಳಿ ಬಿಟ್ಟು ಬೆಳೆದು ಬರಲಿಲ್ಲ; ಅವನಿಂದ ದೂರಾಗತೊಡಗಿತು. ಆಗಾಗ್ಗೆ ಕ್ಷೀಣಿಸಹತ್ತಿತ್ತು. ಆದರೂ ಪ್ರಕೃತಿದತ್ತ ಪ್ರಕೃತಸಾಹಿತ್ಯ ತನ್ನ ಸತ್ವದಿಂದ, ನಾಗರಿಕ ಮಾನವನಲ್ಲಿಯೂ ಅಂತರ್‌ವಾಹಿನಿಯಾಗಿ, ಅವನ ಆಚಾರ - ವಿಚಾರ, ರೀತಿ-ನೀತಿ-ನಡವಳಿಕೆ- ಸಂಸ್ಕೃತಿಗಳಲ್ಲಿ ಸೇರಿಕೊಂಡಿತು. ಹೀಗಾಗಿ, ಅತ್ಯಾಧುನಿಕ ಮನುಷ್ಯ ಎಷ್ಟೇ ಮುಂದುವರಿದು, ನವೀನ ವಿಚಾರಗಳನ್ನು ಸ್ವೀಕರಿಸಿ ಬದುಕುತ್ತಿದ್ದರೂ. ಅವನಿಗರಿವಿಲ್ಲದೆಯೇ' ಜಾನಪದೀಯತ ಜೀವನದಲ್ಲಿ ಯಾವುದೋ ರೂಪದಲ್ಲಿ ಅವಿತುಕೊಂಡು ಗೋಚರಿಸುತ್ತಿದೆ. "ಜಾನಪದೀಯತೆ ಮತ್ತು ನಾಗರಿಕತೆಗಳು ಪರಸ್ಪರ ವಿರೋಧಿಗಳಂತೆ ತೋರಿದರೂ ಆಂತರ್ಯದಲ್ಲಿ ಒಂದನ್ನೊಂದು ಆಧರಿಸಿಕೊಂಡು, ನಿರಂತರ ಕೊಳ್ಕೊಡುಗೆಗಳ ಮುಖಾಂತರ ಒಡನಾಡಿಗಳಾಗಿವೆ." [೨.]

ಕೆಲವರು ಶಿಷ್ಟಪದ ಸಾಹಿತ್ಯಗಳು ತಮ್ಮ ಕಾವ್ಯಕೃತಿಗಳಲ್ಲಿ ಜಾನಪದದ ಗಂಧವೂ ಬರಕೂಡದೆಂದು ಮಡಿವಂತಿಕೆಯನ್ನು ಸಾಧಿಸಲು ಪ್ರಯತ್ನಸಿದರಾದರೂ, ಅವರಿಗೆ ಅರಿತೋ ಅರಿಯದೆಯೋ ಅಂತೂ ಹಲವಾರು 'ಜಾನಪದೀಯ ಅಂಶಗಳು' ಅವರ ಕೃತಿಗಳಲ್ಲಿ ನುಸುಳಿಕೊಂಡುದನ್ನು ಕಾಣಬಹುದು. ಮತ್ತೆ ಕೆಲವರು ಜನಪದಸಾಹಿತ್ಯವನ್ನು ಹೀಗಳೆದು. ತಿರಸ್ಕರಿಸಿದರೂ, ಅವರ ಕೃತಿಗಳ ಆಂತರ್ಯದಲ್ಲಿ ಅದು ಬೆರೆತುಕೊಂಡುದು

ಆಶ್ಚರ್ಯವೆನಿಸಿದರೂ ನಿಜ. ನೇಮಿನಾಥ, ರುದ್ರಭಟ್ಟರಂತಹ ಕಟ್ಟಾ ಸಂಸ್ಕೃತಭೂಯಿಷ್ಠ ಕವಿಗಳ ಕಾವ್ಯಗಳಲ್ಲಿ ಜನಪದ ಬೆರೆತು ಕೊಂಡುದನ್ನು ಗಮನಿಸಿದರೆ, ಈ ಸಾಹಿತ್ಯದ ಪ್ರಭಾವದ ಗಹನತೆ ಅರಿವಿಗೆ ಬರುತ್ತದೆ.

ಕನ್ನಡ ಸಾಹಿತ್ಯ ಕೃತಿಗಳನ್ನು ಗಮನಿಸಿದರೆ, 'ಜಾನಪದ' ಒಂದಿಲ್ಲೊಂದು ರೀತಿಯಲ್ಲಿ ತನ್ನ ಪ್ರಭಾವವನ್ನು ಅವುಗಳ ಮೇಲೆ ಬೀರಿದ್ದು ತಿಳಿಯುತ್ತದೆ. ಜನಪದಕಥೆ, ಗಾದೆ, ಒಗಟು, ಹಾಡು, ಒಡಪು-ಒಡಬು, ನುಡಿ, ನುಡಿಗಟ್ಟು, ಭಾಷೆ-ಛಂದಸ್ಸು ಹಾಗೂ ನಂಬಿಕೆ, ವೈದ್ಯ, ಕಲೆ, ಜಾತ್ರೆ-ಉತ್ಸವ, ದೇವರು-ಧರ್ಮ ಇತ್ಯಾದಿ ಸಾಮಾನ್ಯ ಜನಜೀವನಕ್ಕೆ ಸಂಬಂಧಿಸಿದ ವಿಷಯ ಸಂಗತಿಗಳು ಶಿಷ್ಟ ಕೃತಿಗಳ ಮೂಲಕ ಅಭಿವ್ಯಕ್ತಗೊಂಡು, ತಮ್ಮ ಪ್ರಭಾವ ಮುದ್ರೆಯನ್ನು ಅಚ್ಚಳಿಯದೆ ಒತ್ತಿದ್ದು, ಅವುಗಳಲ್ಲಿ ಗೋಚರಿಸುತ್ತದೆ.

ಯಾವ ಭಾಷಾ ಸಾಹಿತ್ಯವಾದರೂ ಜನಪದದ ಸತ್ವ-ಸಾರ, ಸಹಾಯ-ಸಹಕಾರ, ಸ್ಫೂರ್ತಿ-ಪ್ರಭಾವ-ಪ್ರೇರಣೆಗಳಿಂದಲೇ ಪೋಷಣೆ ಪಡೆದು ಬೆಳೆದಿದೆ. ಯಾವುದೇ ದೇಶದ ಮೊದಲ ಸಾಹಿತ್ಯ ಆ ದೇಶದ 'ಜನಪದ ಸಾಹಿತ್ಯ'ವೇ ಆಗಿದೆ. ಹೀಗಾಗಿ, ಶಿಷ್ಟಸಾಹಿತ್ಯದ ಹೂವಿಗೆ ಜನಪದ ಸಾಹಿತ್ಯವೇ ಬೇರಾಗಿ ನಿಂತುದನ್ನು ಬೇರೆ ಹೇಳಬೇಕಾಗಿಲ್ಲ. ತನ್ನ ಬೀಜಾಂಕುರಕ್ಕೆ ಕಾರಣವಾದ ಅದರಿಂದಲೇ ಪಾಲನೆ-ಪೋಷಣೆ ಪಡೆದ, ಶಿಷ್ಟಸಾಹಿತ್ಯ ಯಾವಾಗಲೂ ಎಂದಿನಿಂದಲೂ ಜನಪದ ಸಾಹಿತ್ಯಕ್ಕೆ ಋಣಿ. "ಹೋಮರ್, ವಾಲ್ಮೀಕಿ, ವ್ಯಾಸಾದಿಗಳೆಲ್ಲರೂ ಅಜ್ಞಾತ ಜನಪದ ಕವಿಗಳಿಗೆ ನಾನಾ ರೀತಿಯಲ್ಲಿ ಋಣಿಗಳಾಗಿದ್ದಾರೆನ್ನು

ವುದು ಸರ್ವವೇದ್ಯವಾದ ಸಂಗತಿಯಾಗಿದೆ. ಶಿಷ್ಟಸಾಹಿತ್ಯ ಮಡುಗೊಂಡು, ಪಾಚಿಬೆಳೆದು, ಬಗ್ಗಡಗೊಂಡು ನಾರುವಂತಾದಾಗ, 'ಜನಪದ ಸಾಹಿತ್ಯವಾಹಿನಿ,' ಅದರ ಮೇಲೆ ಹರಿದು ಪಾಚಿಕೊಳಕುಗಳನ್ನು ಕೊಚ್ಚಿ ನೂತನ ಜೀವನವನ್ನು ನೀಡಿದ್ದುಂಟು, ವರ್ಡ್ಸ್‌ವರ್ಥ್, ಬರ್ನ್ಸ್, ಸ್ಕಾಟ್, ಪುಷ್ಕಿನ್, ಕುಮಾರವ್ಯಾಸ, ವಚನಕಾರರು ಈ ಮಾತಿಗೆ ಸಾಕ್ಷಿಯಾಗಿದ್ದಾರೆ."[೩] ಸಾಮಾನ್ಯರ ಮನೆಯ ಅಂಗಳದಲ್ಲಿ ಹುಟ್ಟಿಬೆಳೆದ ಈ 'ಬೀದಿಸಾಹಿತ್ಯ' (ಜನಪದಸಾಹಿತ್ಯ) ತನ್ನನ್ನು ಶಿಷ್ಟಸಾಹಿತ್ಯ ತಿರಸ್ಕರಿಸಿ, ಜಯವಿಮುಖವಾಗಿ ಪ್ರವಹಿಸುವಾಗಲೂ, ಅದಕ್ಕೆ ಸ್ಫೂರ್ತಿ-ಪ್ರೇರಣೆಗಳನ್ನಿತ್ತು ಜನಸಮ್ಮುಖವಾಗಿ ಪ್ರವಹಿಸುವ ದಾರಿಯನ್ನು ತೋರಿಸುತ್ತ ಬಂದಿದೆ. ಇದರ ಈ ಬಗೆಯ ಪರೋಪಕಾರ ಗುಣವನ್ನು ಮನಗಂಡ ಕನ್ನಡದ ವೀರಕವಿ ಪಂಪ, ತನ್ನ ಕಾವ್ಯೋನ್ನತಿಗೆ ಪ್ರೌಢದ ಜೊತೆಗೆ 'ದೇಸಿ'ಯನ್ನು ಸಮೀಕರಿಸಿದ್ದಾನೆ. ಅಲ್ಲದೆ, ಶಿವಶರಣರು ತಮ್ಮ ಹಿಂದಿನ ಚಂಪೂ ಪರಂಪರೆಯನ್ನು ಮುರಿದು, ವಚನ ಪರಂಪರೆಯನ್ನು ಪ್ರತಿಷ್ಠಾಪಿಸಲು ಜನಪದ ಸಾಹಿತ್ಯವನ್ನೇ, ಸೃಷ್ಟಿಸಿದರು. ಈ ಎಲ್ಲ ಸಂಗತಿಗಳನ್ನು ಗಮನಿಸಿದರೆ, 'ಜಾನಪದ' ತನ್ನ ಪ್ರಭಾವವನ್ನು ಶಿಷ್ಟಸಾಹಿತ್ಯದ ಮೇಲೆ ಎಷ್ಟೊಂದು ಬೀರಿದೆ ಎಂಬುದು ತಿಳಿಯುತ್ತದೆ.

ಜನಪದ ಜೀವನ ಹಾಗೂ ಶಿಷ್ಟಪದ ಜೀವನ, ಪರಸ್ಪರ ಪೂರಕಗಳೆಂಬ ಮೂಲಭಾವ ವಿಚಾರದ ಹಿನ್ನೆಲೆಯಲ್ಲಿ ಪರಿಶೀಲಿಸಿದಾಗ, ಈ ಎರಡರ ಕೊಡು-ಪಡೆ ಪ್ರಭಾವ ಅನಿವಾರ್ಯವೆಂಬ ಸತ್ಯ ಹೊರಹೊಮ್ಮುತ್ತದೆ. ಬಹುಸಂಖ್ಯಾತ ಅನಕ್ಷರಸ್ಥರಿಂದ ತುಂಬಿದ ಭಾರತೀಯ ಸಮಾಜ, ಅತ್ಯಂತ ಸುಸಂಸ್ಕೃತವಾಗಿ ಬಾಳುವುದರ ಹಿಂದಿನ ಗುಟ್ಟು ಇಲ್ಲಿದೆ.

ಒಟ್ಟಿನಲ್ಲಿ, ಅತ್ಯಾಧುನಿಕ ಶಿಷ್ಟಸಮಾಜದ ಇಂದಿನ ನಡೆವಳಿಕೆಗಳ ಮೂಲಬೇರು ಮತ್ತು ಕವಿ ಸಾಹಿತ್ಯ ಕೃತಿಗಳ ಮೂಲನೆಲೆ 'ಜಾನಪದ'ವೇ ಆಗಿದೆ. ಹಾಗಾಗಿ, 'ಪಂಪ'ನಿಂದ ಮೊದಲ್ಗೊಂಡು ಇಂದಿನ 'ದಲಿತ', 'ಬಂಡಾಯ' ಸಾಹಿತ್ಯ ದವರೆಗೂ ಬಂದಿರುವ ಎಲ್ಲಾ ಸಾಹಿತ್ಯ ಕೃತಿಗಳ ಮೇಲೂ ಜಾನಪದ ಪ್ರಭಾವವನ್ನು ಗುರುತಿಸಬಹುದು.

೨. ನವೋದಯ ಸಾಹಿತ್ಯ - ಜಾನಪದ

ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮೊದಲಾದ ಕನ್ನಡ ಕಾವ್ಯಘಟ್ಟಗಳಲ್ಲಿ ಅನೇಕ ಏಳು-ಬೀಳುಗಳನ್ನು ಅನುಭವಿಸಿದ 'ಜಾನಪದ'ಹರಿಗಡಿಯದೆ ಸಾಗಿಬಂದುದು ಅದರ ಜಿಗುಟುತನವನ್ನು ರುಜುಪಡಿಸುತ್ತದೆ. ಅಳಿಯುತ್ತ, ಬೆಳೆಯುತ್ತ, ಉಳಿದುಬಂದಿರುವ ತನ್ನ ಜಾನ ಪದೀಯ ಸತ್ವದಿಂದ 'ಕಾವ್ಯಬಂಧ'ದ ಹಂದರವನ್ನು ಸಡಿಲಿಸಿ, ಶೃಂಗರಿಸಿದೆ. ಹೀಗಾಗಿ ಕಾವ್ಯದ ಹಂದರ ಹಂಬು ಬಿಟ್ಟು ಇಂಬಾಗಿ ಹಬ್ಬಿ ಸೊಂಪಾಗಿ ಬೆಳೆದಿದೆ. ಹೀಗೆ, ಕಾವ್ಯಬಂಧದಿಂದ ಬಿಗಿಯಲ್ಪಟ್ಟ, ಕನ್ನಡ ಕಾವ್ಯವನ್ನು ಸ್ವಚ್ಛಂದಸುಂದರಗೊಳಿಸಿದು ದಲ್ಲದೆ, ಹಿಂದೆ ಹೇಳಿದಂತೆ, ಹೊಸಕಾವ್ಯ ತನ್ನ ನೆಲೆಯನ್ನು ಕಂಡುಕೊಳ್ಳುವಲ್ಲಿ ಚಟಪಟಿಸುತ್ತಿರುವಾಗ, ಅದಕ್ಕೆ ದಿಕ್ಸೂಚಿ ಯಾದುದೂ ಜಾನಪದವೇ. ಸಂಪೂರ್ಣ ಸಾವನ್ನು ಕಾಣದ ಇದರ ಪ್ರಭಾವೀ ಗುಣವೇ, ಪಂಪ, ಕುಮಾರವ್ಯಾಸ, ರತ್ನಾಕರವರ್ಣಿ, ವಚನಕಾರರು, ದಾಸರು, ಸರ್ವಜ್ಞ-ಯಾವುದೇ ಕಾಲದ ಕವಿಗಳಿಗೂ ಅವರ ಕೃತಿಗಳಿಗೂ ಜಾನಪದ ಮೂಲ ಮಾತೃಕೆಯಾಯಿತು. ಹಾಗೆಯೇ ಹೊಸಗನ್ನಡದ ಎರಡು ಪ್ರಮುಖ

ಕಾವ್ಯ ಪರಂಪರೆಗಳಾದ 'ನವೋದಯ' ಮತ್ತು 'ನವ್ಯ' ಸಾಹಿತ್ಯಗಳಿಗೂ ಜನಪದ ಸಾಹಿತ್ಯ ಪೋಷಕವಾಯಿತು ಹಾಗೂ ಪ್ರೇರಕವಾಯಿತು.

ಕನ್ನಡ ನವೋದಯ ಸಾಹಿತ್ಯ, ಇಂಗ್ಲೀಷ್ ರೊಮ್ಯಾಂಟಿಕ್ ಕಾವ್ಯದಿಂದ ಬೆಳಕನ್ನು ಪಡೆಯಿತೆಂಬುದೇನೊ ನಿಜ. ಆದರೆ, ಕನ್ನಡ ನವೋದಯದ ಭಾವಗೀತೆಗಳು ಸಾಕಷ್ಟು ವೈವಿಧ್ಯತೆಯಿಂದ ಮೆರೆಯಲು ಹಾಗೂ ಜನಮನಕ್ಕೆ ತಲುಪಲು, ಆ ಸಾಹಿತ್ಯಕ್ಕೆ ಹಿಮ್ಮೇಳವಾಗಿ ದುಡಿದ ಜನಪದ ಸಾಹಿತ್ಯವನ್ನು ಮರೆಯುವ ಹಾಗಿಲ್ಲ. ಇಲ್ಲಿಯವರೆಗೆ ಶಿಷ್ಟಕೃತಿಗಳ ಒಡಲಲ್ಲಿ ಕಂಡೂ ಕಾಣದಂತೆ, ತನ್ನ ಮೈ ಮುದುರಿಕೊಂಡು ಸಾಗಿಬಂದ ಜಾನಪದ, ಈಗ (ನವೋದಯ)ತನ್ನ ನಾಚಿಕೆಗೀಚಿಕೆ ಕಳೆದೊಗೆದಾಚೆಗೆ ಬಿಂಕು-ಬಿಗುಮಾನ, ಒಲವು-ಒಯ್ಯಾರದಿಂದ ನರ್ತಿಸಿತು. ತನ್ನ ನೈಜ ಸ್ವರೂಪವನ್ನು ವಿಶಿಷ್ಟ ರೀತಿಯಲ್ಲಿ ಈ ಕಾಲದ ಕವಿಗಳಲ್ಲಿ ಕಂಡುಕೊಂಡು ಪುನರ್ಜನ್ಮತಾಳಿತು. ನವಚೈತನ್ಯವನ್ನು ಪಡೆಯಿತು. ಜಾನಪದೀಯ ಮನೋಧರ್ಮದ ಕವಿಗಳೆನಿಸಿ ಕೊಂಡವರೂ, ಕನ್ನಡ ದೇಸೀಯ ವಿಶಿಷ್ಟ ಭಾವಶೈಲಿಯಿಂದ ಮೆರೆದರು. ಇಂಗ್ಲೀಷಿನ ಸಾಹಿತ್ಯಿಕ ಹಾಗೂ ಭಾಷಿಕ ಪ್ರಭಾವ ಗಳನ್ನು ಕನ್ನಡ ನೆಲದ ಸಂವೇದನೆಗಳಿಗೆ ಒಗ್ಗಿಸಿಕೊಳ್ಳುವ ಈ ಸಂದಿಗ್ಧ ಪರಿಸ್ಥಿತಿಯಲ್ಲಿ, ಕನ್ನಡದ ಆಧುನಿಕ ಕವಿಗಳಿಗೆ ಜಾನಪದವೇ ಆಧಾರವಾದುದು ಗಮನೀಯ. 'ಪಾಶ್ಚಿಮಾತ್ಯ' 'ರೊಮ್ಯಾಂಟಿಕ್' ಕಾವ್ಯ ಪ್ರಕಾರವನ್ನು ಕನ್ನಡ ನೆಲದಲ್ಲಿ ಸ್ಥಾಪಿಸಲು, ಜಾನಪದ ಪ್ರಭಾವಕ್ಕೆ ಒಳಗಾದ ಕನ್ನಡ ಕವಿಗಳಿಗೆ ಮಾತ್ರ ಸಾಧ್ಯವಾಯಿತು, ಸುಲಭವೂ ಆಯಿತು. ಇಲ್ಲಿಯವರೆಗೆ ಜನವಿಮುಖವಾದ ಕಾವ್ಯವನ್ನು ಜನಸಮ್ಮುಖವಾಗಿ ಪ್ರವಹಿಸುವಂತೆ ಮಾಡಲು, ಕನ್ನಡ ಜಾನಪದೀಯ

ಮನೋಧರ್ಮದ ಕವಿಗಳಿಗೆ ಮಾತ್ರ ಸಾಧ್ಯವಾದುದು ಇನ್ನೂ ಗಮನಾರ್ಹ.

'ತ್ರಿಪದಿ', 'ಚೌಪದಿ'ಯಂತಹ ಕಾವ್ಯ ಜಾತಿಗಳೇ ಜನಪದ ಸಾಹಿತ್ಯದಲ್ಲಿ ಅಧಿಕ. ಈ ಚಿಕ್ಕ ಚಿಕ್ಕ ಪದ್ಯಗಳ ಪ್ರಭಾವ ನವೋದಯ ಸಾಹಿತಿಗಳ ಮೇಲೆ ಮುಖ್ಯವಾಗಿ ಭಾವಗೀತೆಗಳ ರಚಯಿತರ ನೆಲೆ ಆಯಿತು. ಜಾನಪದದ ಪುಟ್ಟ ಪುಟ್ಟ ಪದ್ಯಗಳಿಂತ, ಭಾವಗೀತೆ ಉಳಿದೆಲ್ಲ ಕವಿಗಳಿಗಿಂತ ಹೆಚ್ಚು ಪ್ರಭಾವಿತರಾದವರು ಕವಿ ಬೇಂದ್ರೆ. ಇವರು ಜನಪದರ ನಡೆ-ನುಡಿಗಳಿಂದ ಪ್ರಭಾವಿತರಾಗಿ, ತಮ್ಮ ಭಾವಗೀತಗಳನ್ನೂ ಆ ಸಂಸ್ಕೃತಿಯ ಹಿನ್ನೆಯಲ್ಲಿಯೇ ಸೃಷ್ಟಿಸಿದ್ದಾರೆ. ಹಾಗಾಗಿ ಗ್ರಾಮೀಣ ಸಂಸ್ಕೃತಿ ಬೇಂದ್ರೆಕಾವ್ಯದ ವಿಶೇಷ ಗುಣವಾಗಿದೆ. ಈ ಸಂಸ್ಕೃತಿ ಸಾಹಿತ್ಯಗಳಿಗೆ ಬೇಂದ್ರೆ ತನ್ನನ್ನು ತಾನೇ ಸಮರ್ಪಿಸಿಕೊಂಡಿದ್ದಾರೆ.

೩. ಬೇಂದ್ರೆಯವರ ಕಾವ್ಯದ ಮೇಲೆ ಜಾನಪದ ಪ್ರಭಾವ

ಪರಸ್ಪರ ಪ್ರಭಾವ ಮಾನವ ಜೀವಿಗಳಲ್ಲಿ ಸರ್ವೇಸಾಮಾನ್ಯ; ಕವಿ-ಸಾಹಿತಿಗಳಲ್ಲಿಯೂ ಇದು ಅನಿವಾರ್ಯ. ಇಲ್ಲಿ 'ಪ್ರಭಾವ' ವೆಂದರೆ, ಪ್ರೇರಣೆ, ಸ್ಫೂರ್ತಿ, ಛಾಯೆ, ಪೋಷಣೆ, ಸ್ವೀಕರಣ ಎನ್ನಬಹುದು. ತನ್ನ ಹಿಂದಿನ ಅಥವಾ ತನಗಿಂತ ಶಕ್ತನಾದ ಕವಿಯ ಕೃತಿಯಿಂದ, ಯಾವುದೇ ಮುಚ್ಚುಮರೆಯಿಲ್ಲದೆ, ತೆಗೆದುಕೊಂಡು, ಅದನ್ನು ತನ್ನದಾಗಿಸಿಕೊಂಡು ಸ್ವಪ್ರತಿಭೆಯಿಂದ ಸುಂದರ ಕಲಾಕೃತಿ ಚಿತ್ರಿಸುವುದೇ ಪ್ರಭಾವ-ಪ್ರೇರಣೆ-ಸ್ವೀಕರಣ ಎನಿಸಿಕೊಳ್ಳುತ್ತದೆ. ಇದು ಒಮ್ಮೊಮ್ಮೆ ಕವಿಗೆ ತಿಳಿಯದೆಯೇ ನಡೆಯುವ ಕ್ರಿಯೆ. ಇದರಿಂದ ಹೊರತಾದ

ಕವಿಯೇ ಇಲ್ಲ. ಇದು ಎಲ್ಲ ಕಾಲಕ್ಕೂ ಸ್ವಾಗತಾರ್ಹ. ರಾಮಾಯಣ-ಮಹಾಭಾರತ-ಬೃಹತ್‌ಕಥೆ ಹಾಗೂ ಜಾನಪದಗಳು ನಮ್ಮ ಕವಿಗಳಿಗೆ ಮೂಲ ಆಕರಗಳಿವೆ. ಇಲ್ಲಿಂದ ವಿಷಯ ಸಾಮಗ್ರಿಯನ್ನು ಪಡೆಯುವ ಹಕ್ಕು ಎಲ್ಲರಿಗೂ ಉಂಟು. ಇಲ್ಲಿ 'ಹರಣ'ದ ಪ್ರಶ್ನೆಯೇ ಇಲ್ಲ. ರನ್ನ-ಪಂಪನಿಂದ; ಪಂಪ-ಕಾಳಿದಾಸ. ಭಾರವಿ, ಮಾಘ, ಭಟ್ಟನಾರಾಯಣಾದಿಗಳಿಂದ ಸಾಕಷ್ಟು ಪ್ರಭಾವಿತರಾದುದು ಇಲ್ಲಿ ಸ್ಮರಣೀಯ. ಕನ್ನಡ ಅಲಂಕಾರಿಕ 'ನಾಗವರ್ಮನು-ಕಾವ್ಯವಿದ್ಯಾ ಪ್ರಚಯ ಪರಿಚಯ' ಕವಿಯಾಗ ತಕ್ಕವನಿಗೆ ಇರಲೇಬೇಕಾದುದನ್ನು ಒತ್ತಿಹೇಳುತ್ತಾನೆ. ಕವಿಯಾಗ ಬಯಸಿದವನು, ತನ್ನ ಪೂರ್ವದ ಕವಿಗಳ ಕಾವ್ಯಗಳನ್ನು ಅಧ್ಯಯನ ಮಾಡಿದರೆ ಮಾತ್ರ ಅವನಿಗೆ ಕಾವ್ಯಮಾರ್ಗದ ಅರಿವುಂಟಾಗುತ್ತದೆನ್ನುವ ನಾಗವರ್ಮನ ಅಭಿಪ್ರಾಯದ ಹಿನ್ನೆಲೆಯಲ್ಲಿ ಆಂಗ್ಲ ಕವಿಯ-'ಪ್ರತಿಯೊಬ್ಬ ಕವಿಯೂ ತನ್ನ ಹಿಂದಿನ ಕವಿಯ ಕಿಸೆಯಲ್ಲಿ ಕೈಯಿಟ್ಟಿರುತ್ತಾನೆ' ಎಂಬ ಮಾತು ಸಾರ್ಥಕ ಅರ್ಥ ಪಡೆಯುತ್ತದೆ.

ಮೇಲಿನ ಮಾತುಗಳಿಗೆ ಬೇಂದ್ರೆ ಮತ್ತು ಅವರ 'ಭಾವಗೀತೆ'ಗಳು ಹೊರತಲ್ಲ. ಇವರು ತಮ್ಮ ಕಾವ್ಯರಚನೆಯ ಆರಂಭದ ದೆಸೆಯಲ್ಲಿಯೇ ಕನ್ನಡ ಜಾನಪದದೊಂದಿಗೆ ಮರಾಠಿ ಕಾವ್ಯ ಮತ್ತು 'ಪೋವಾಡ' (=ಲಾವಣಿ)ಗಳಿಂದ ಪ್ರಭಾವಿತರಾದವರು. ಕನ್ನಡ- ಇಂಗ್ಲೀಷ-ಸಂಸ್ಕೃತ ಮೊದಲಾದ ಭಾಷೆಗಳಲ್ಲಿ ಪ್ರಬುದ್ಧರಾದ ಬೇಂದ್ರೆ ಆ ಭಾಷಾಸಾಹಿತ್ಯಗಳಿಂದಲೂ ಪ್ರಭಾವಿತರಾದುದು ಸಾಮಾನ್ಯ. ಆದರೆ, ಆಶ್ಚರ್ಯದ ಸಂಗತಿಯೆಂದರೆ, ಸಂಸ್ಕೃತ- ಇಂಗ್ಲೀಷ ಕಾವ್ಯಗಳ ನೇರ ಅನುಕರಣದಿಂದ ತಪ್ಪಿಸಿಕೊಂಡುದು. ವಚನಕಾರರು-ದಾಸರು-ಕುಮಾರವ್ಯಾಸ, ಲಕ್ಷ್ಮೀಶ, ಪುರಂದರದಾಸ, ಸರ್ವಜ್ಞ, ನಿಜಗುಣಶಿವಯೋಗಿ,

ಶರೀಫ್, ಠಾಗೋರ, ಅರವಿಂದರು, ಸರೋಜಿನಿ ನಾಯಡು ಮೊದಲಾದವರ ಪ್ರಭಾವವೂ ಬೇಂದ್ರೆ ಕಾವ್ಯದ ಮೇಲಿದ್ದುದನ್ನು ಗುರುತಿಸಬಹುದು. ಇವರಲ್ಲಿ ಅರವಿಂದರ ಕಾವ್ಯಕಲ್ಪನೆಯ ಪ್ರಭಾವವು ಗರಿಗೆದರಿ ನಿಂತರೆ, ಕನ್ನಡ ಜಾನಪದದ ಪ್ರಭಾವ ವಂತೂ ಹೆಪ್ಪುಗಟ್ಟಿದೆ. ಇಷ್ಟೆಲ್ಲ ಪ್ರಭಾವಗಳಿಗೆ ಬೇಂದ್ರೆ ಅವರು ತನ್ನನ್ನು ಒಡ್ಡಿಕೊಂಡಿದ್ದರೂ, ಸ್ವಂತಂತ್ರ ಕವಿ; ಕಾರಣ ಆ ಎಲ್ಲ ಪ್ರಭಾವಗಳನ್ನು ಅರಗಿಸಿಕೊಂಡು, ತನ್ನ ಪ್ರತಿಭಾ ಬಲದಿಂದ ನವೀನ ಕಲಾಕೃತಿಯನ್ನು ಸೃಷ್ಟಿಸಿದುದು ಬೇಂದ್ರೆ ಕಾವ್ಯದ ವೈಶಿಷ್ಟ್ಯವೇ ಇದು.

ಜಾನಪದ ಪ್ರಭಾವಕ್ಕೆ ಒಳಗಾದ ಆಧುನಿಕ ಕನ್ನಡ ಕವಿಗಳೆಂದರೆ ದ. ರಾ. ಬೇಂದ್ರೆ, ಮಧುರಚೆನ್ನ, ಆನಂದಕಂದ, ಕೆ. ಎಸ್. ನರಸಿಂಹಸ್ವಾಮಿ, ಜಿ. ಪಿ. ರಾಜರತ್ನಂ, ಚಂದ್ರಶೇಖರ ಕಂಬಾರ, ಚೆನ್ನವೀರಕಣವಿ, ಸೋಮಶೇಖರ ಇಮ್ರಾಪೂರ, ಸಿಂಪಿಲಿಂಗಣ್ಣ ಇವರು ಪ್ರಮುಖರು. ಜಾನಪದೀಯ ತುಡಿತದ ಈ ಕವಿಗಳಲ್ಲೆಲ್ಲ ಶಿಖರಪ್ರಾಯರಾದವರು ಅಂಬಿಕಾತನಯದತ್ತ-ಕಾವ್ಯನಾಮದ ಶ್ರೀ ದ. ರಾ. ಬೇಂದ್ರೆ ಅವರು.

ಆಧುನಿಕ ಸಾಹಿತ್ಯದಲ್ಲಿ, "ಜನಪದ ಸಾಹಿತ್ಯದ ಪ್ರಭಾವ ಕ್ಕೀಡಾದ, ಕನ್ನಡ ಕವಿಗಳಲ್ಲಿ ಎರಡು ಪ್ರಕಾರಗಳನ್ನು ಮಾಡ ಬಹುದು. ಜಾನಪದ ಕವಿಯಾಗಿಯೇ ಮಾರ್ಪಟ್ಟವರು, ಜಾನಪದ ಕವಿಯಂತೆ ತೋರ್ಪಟ್ಟವರು. ಶ್ರೀ ಜಿ.ಪಿ.ರಾಜರತ್ನಂ ಅಂಥ ವರದು ಒಂದು ವರ್ಗವಾದರೆ ಶ್ರೀ ದ. ರಾ. ಬೇಂದ್ರೆ ಅಂಥವ ರದು ಇನ್ನೊಂದು ವರ್ಗವಾಗಿದೆ."[೪] ಇಲ್ಲಿ 'ಸಿಂಪಿಲಿಂಗಣ್ಣ' ಅವರು, ಬೇಂದ್ರೆ ಅವರನ್ನು ಜಾನಪದ ಕವಿಯಂತೆ

ತೋರ್ಪಟ್ಟವರ ವರ್ಗದಲ್ಲಿ ಸೇರಿಸಿದ್ದು ನಿಜವಿದೆ. ಇವರ ಮೇಲಾದ ಜಾನಪದ ಪ್ರಭಾವ ತುಂಬ ವಿಶಿಷ್ಟವಾದುದು ಮತ್ತು ವೈವಿಧ್ಯತೆಯಿಂದ ಕೂಡಿದುದು. ಬೇಂದ್ರೆ ಕಾವ್ಯದ ಜಾನಪದದ ದಟ್ಟಪ್ರಭಾವವನ್ನು ಕಂಡ ಹಲವರು 'ಜಾನಪದ ಕವಿ' ಎಂದು ಕರೆದದ್ದುಂಟು. ಬೇಂದ್ರೆ ಕಾವ್ಯದ ಒಳ-ಹೊರಗನ್ನು ಕಂಡಾಗ ಒಮ್ಮೊಮ್ಮೆ ಹಾಗೆನ್ನಿಸುವುದು ಸಹಜ. ಆದರೆ ಅವರ ಕಾವ್ಯದ ಒಟ್ಟು ಧೋರಣೆ, ಗೊತ್ತು-ಗುರಿ-ಶಕ್ತಿ-ಸಾಮರ್ಥ್ಯಗಳನ್ನು ಪರಿಶೀಲಿಸಿದಾಗ, ಬೇಂದ್ರೆಯವರು ಜಾನಪದ ಕವಿಯೆನಿಸಿ ಕೊಳ್ಳುವುದಿಲ್ಲ; ಶಿಷ್ಟಕವಿಯಾಗಿಯೇ ಸ್ಪಷ್ಟವಾಗಿ ಕಾಣಿಸಿಕೊಳ್ಳು ತ್ತಾರೆ. ಜನಪದ ಸಂಸ್ಕೃತಿ-ನಾಗರಿಕ ಸಂಸ್ಕೃತಿಗಳೆರಡರಿಂದಲೂ ಬೇಂದ್ರೆ ಅವರು ಸಂಸ್ಕಾರಗೊಂಡವರಾದುದರಿಂದ ಈ ಎರಡನ್ನೂ ಕಾವ್ಯದಲ್ಲಿ ತಂದಿದ್ದಾರೆ. ಈ ಎರಡೂ ಬಗೆಯ ಕಾವ್ಯರೀತಿಗಳಲ್ಲಿ ಸಮನ್ವಯ ಕಲ್ಪಿಸಿದಾಗ ಮಾತ್ರ ಬೇಂದ್ರೆ ವ್ಯಕ್ತಿತ್ವದ ನೈಜದರ್ಶನವಾಗುತ್ತದೆ. ಈ ಹಿನ್ನಲೆಯಲ್ಲಿ ಬೇಂದ್ರೆ 'ಜನಪದ ಕವಿಯಲ್ಲ, ಜನಪದ ಕವಿಯಂತೆ ತೋರ್ಪಟ್ಟ ಕವಿ' ಎಂಬ 'ಸಿಂಪಿ'ಯವರ ಮಾತು ಅರ್ಥಪೂರ್ಣವೆನಿಸಿಕೊಳ್ಳುತ್ತದೆ. ಬೇಂದ್ರೆಯವರಂತಹ ಪ್ರತಿಭಾಶಾಲಿ ಕವಿ, ಜಾನಪದಕ್ಕೆ ಹೀಗೆ ಸೋಲುವುದೆಂದರೆ, ಜನಪದದಲ್ಲಿ ಅವರಿಗಿದ್ದ ಶ್ರದ್ಧೆ-ನಿಷ್ಠೆಗಳೇ ಕಾರಣ. ಜೊತೆಗೆ ಜಾನಪದ ಇಂಥ ಮಹಾಕವಿಯ ಕಾವ್ಯಕೃಷಿಗೆ ಸಹಾಯ ನೀಡುತ್ತದೆಂದರೆ ಅದರ ಗಟ್ಟಿಯಾದ ದಟ್ಟಪ್ರಭಾವೀ ಗುಣವೇ ಕಾರಣ. ಇವರ ಮೇಲೆ ಜಾನಪದದ ಗಾಢ ಪ್ರಭಾವವಿದ್ದರೂ, ಅದರ ಅಡಿಯಲ್ಲಿಯೇ ಸಮಾಧಿ ಹೊಂದಿದ ವರಲ್ಲ, ಅದರಾಚೆಗೂ ಹಾರಿ ಸ್ವಂತಿಕೆಯನ್ನು ಪ್ರದರ್ಶಿಸಬಲ್ಲ ಧೀಮಂತ ಕವಿ. ಅಂದರೆ, ಜಾನಪದದ ಪ್ರಭಾವಕ್ಕೆ ಒಳಗಾಗಿದ್ದರೂ, ಒಳಗಾಗದಿದ್ದವರಂತೆ ತಮ್ಮತನದ

ಹೊನಲನ್ನೇ ಕಾವ್ಯದ ತುಂಬೆಲ್ಲ ಹರಿಯಿಸಿದ್ದಾರೆ. ಆದರೆ" ಎಷ್ಟೋ ಸಾರ ಬೇಂದ್ರೆಯವರು ತಮ್ಮ ಕಾವ್ಯವಸ್ತುವನ್ನು ಕೂಡ ಜನಪದದಿಂದ ಆಮದು ಮಾಡಿಕೊಂಡಿದ್ದಾರೆಂಬ ಮಾತೂ ಕೇಳಿ ಬರುತ್ತವೆ. ಆದರೆ ಗಾಳಿಮಾತನ್ನು ಒಡಿಯಲಿಕ್ಕಾಗದು. ನಂಬಲಿಕ್ಕೂ ಬಾರದು. ಅಂದಾಕ್ಷಣಕ್ಕೆ ಸಂಶಯ ಮಾತ್ರ ನಿವಾರಣೆಯಾಗುವುದಿಲ್ಲ. ಕಾಮನಬಿಲ್ಲು ಬಣ್ಣಗಳ ಸಾಮರಸ್ಯ ಹೊಂದಿದ ಕಾವ್ಯಬದುಕು ಅವರದು. ದೂರದಿಂದಲೇ ಬಣ್ಣವಿಂಗಡಿಸಿ ಮಂಜುರೇಖೆ ಕಂಡದ್ದ ನಿಜ. ಒಳಹೊಕ್ಕರೆ ಎಲ್ಲಮಾಯ. ಎಲ್ಲ ಸಮ್ಮಿಶ್ರ. ತಿರುಗಿಸಿ ಬಿಟ್ಟರೆ ಮತ್ತೆ ತೀರ ಶುಭ್ರ."[೫] ಹೀಗಾಗುವುದು ಮಹಾಕವಿಗಳಲ್ಲಿ ಮಾತ್ರವೆಂದು ತೋರುತ್ತದೆ. ಅದೇನೆ, ಇದ್ದರೂ ಕನ್ನಡದ ಹಿರಿಯ ವಿದ್ವಾಂಸರೊಬ್ಬರು ಅಭಿಪ್ರಾಯಿಸಿರುವಂತೆ, "ಶ್ರೀಬೇಂದ್ರೆ ಅವರು ತಮ್ಮ ಕವಿತೆಗೆ ಬಳಸಿದ ಛಂದಸ್ಸು-ಭಾಷೆ-ಭಾವ. ಒಮ್ಮೊಮ್ಮೆ ವಸ್ತು ಸಹ ಎಲ್ಲವೂ ಜಾನಪದ ಸಾಹಿತ್ಯದಿಂದ ಆಮದಾಗಿ ಬಂದವು. ಗೊಂದಲಿಗರಹಾಡು, ದುರಗಿಮುರಗವ್ವ, ಹರಕೆಹಾಡು, ಲಾವಣಿಕಾರನ ಪ್ರಾಸಿನ ಲಾಗು. ಗರತಿಯ ಉಪಮೆ-ಇವನ್ನು ಅವರ ಕವನಗಳಲ್ಲಿ ಗುರುತಿಸಬಹುದಾಗಿದೆ."[೬] ಗೊಂದಲಿಗರ ಹಾಡು. ದುರಗಿಮುರಗವ್ವ, ಲಾವಣಿ, ಗೀಗೀ, ಹರಕೆಹಾಡು, ಶಿಶುಗೀತ, ಕೊರವಂಜಿಹಾಡಿನ ಮಟ್ಟು ಮತ್ತು ಜನಪದ ಕಾವ್ಯದ ಉಪಮೆಗಳೆಲ್ಲವೂ ಬೇಂದ್ರೆ ಕಾವ್ಯದ ಮೂಲಪ್ರೇರಣೆಗಳೂ ಆಗಿವೆ. ಇವುಗಳಿಂದ ಬೇಂದ್ರೆ ಕಾವ್ಯಗಂಗೆ ಅವತರಣಗೊಂಡು, ಓತಪ್ರೋತವಾಗಿ ಹರಿದಿದೆ. ಇವರ ಕಾವ್ಯದ ಔಚಿತ್ಯ, ಔನ್ನತ್ಯಗಳೆಲ್ಲವೂ ಮೇಲಿನ ಜಾನಪದದ ಪರಂಪರಾಗತ ಮಟ್ಟುಗಳಲ್ಲಿಯೇ ಇದೆ. ಬೇಂದ್ರೆ ಅವರ ಮನಸ್ಸು ನಾಡನುಡಿಗೆ ಸೋತು, ಹಾಡಿನ ಮೋಡಿಗೆ ಒಲಿದುದು, ಅವರೇ

ಬರೆದ ಕವನದ ಸಾಲುಗಳಲ್ಲಿ ವ್ಯಕ್ತವಾಗಿದೆ.

> 'ನಾಡಬಳಕೆಯಾ ನುಡಿಗೆ ಸೋತಿದ್ದ ಮನವನ್ನು
> ಹಾಡಿನ ಮೋಡಿಗೆ ಒಲಿಸಿದುವು'
>
> -(ಸಖೀಗೀತ)

ಹಾಡಿನ ಮೋಡಿಗೆ (ಜಾನಪದ ಹಾಡೇ) ಒಲಿದ ಈ ಗಾರುಡಿಗ ಆಡುಮಾತನ್ನೇ ಹುರಿಗೊಳಿಸಿ, ಹೊಸೆದು. ಹಾಡಕಟ್ಟಿ ಹಾಡಿದ. ಆ ಹಾಡಿನಲ್ಲಿ ಕಠಿಣ ಪದಗಳಿಲ್ಲ; ಅರ್ಥವಾಗದ ರೀತಿಯಲ್ಲಿ ಸುತ್ತಿ ಬಳಸಿ ಹೇಳಿಲ್ಲ. ಎಲ್ಲವೂ ಜಾನಪದರ ಬದುಕು-ಸಾಹಿತ್ಯಗಳಂತೆ ಸ್ಪಷ್ಟ-ನೇರ. ನಮ್ಮ ದಿನಬಳಕೆಯಲ್ಲಿರುವ ಸರಳ ಧ್ವನಿಪೂರ್ಣ ಗ್ರಾಮೀಣ ಶಬ್ದಗಳೇ ಕವಿಭಾವಕ್ಕೆ ರೂಪ ನೀಡಿವೆ. ಆದರೆ ಪರಿಣಾಮದಲ್ಲಿ ಬೇಂದ್ರೆ ಕಾವ್ಯ ಬೇಂದ್ರೆ ಕಾವ್ಯವೇ. ಇವರ ಕಾವ್ಯ ಭೃಂಗದ ಬೆನ್ನೇರಿ ವಿಹರಿಸುತ್ತಿದ್ದರೂ ಅದರ ತಾಯಿಬೇರು ಜಾನಪದದಲ್ಲಿಯೇ ಹೂತುಹೋಗಿರುತ್ತದೆ. ಬೇಂದ್ರೆಯವರ ಹತ್ತಾರು ಕವನಗಳು ಈ ಮಾತಿಗೆ ಸ್ಪಷ್ಟ ನಿದರ್ಶನ. ಹಳ್ಳಿಯ ಸಾಹಿತ್ಯದ ಸೊಗಸು-ಸೌಂದರ್ಯ, ಗಾಡಿ-ಮೋಡಿ, ಗತ್ತು-ಗಮ್ಮತ್ತುಗಳು ಅವರ ಕಾವ್ಯದಲ್ಲೆಲ್ಲ ಹೊಡವರಿದು ನಿಂತಿವೆ. ಬೇಂದ್ರೆಯವರ ಜಾನಪದ ಶೈಲಿಯ ಕವನರಚನೆ ಅವರ ಮೊದಲ ಕವನಸಂಕಲನ 'ಗರಿ'ಯಲ್ಲಿಯೇ ಮೊದಲಾಗುತ್ತದೆ. ನಗೀನವಿಲು, ರಾಗರತಿ, ಬಿಸಿಲುಗುದುರೆ, ನನ್ನ ಕೈಹಿಡಿದಾಕೆ, ಹಳ್ಳದ ದಂಡ್ಯಾಗ, ಕುಣಿಯೋಣಬಾರ, ಶ್ರಾವಣ, ಬೆಳಗು, ಹಕ್ಕಿಹಾರುತಿದೆ ನೋಡಿದಿರಾ, ಕೋಗಿಲೆ, ತುತ್ತಿನಚೀಲ, ರಸಿಕಾಪೇಳೊ, ಕನಸಿನೊಳಗೊಂದು ಕನಸು, ಕರಿಮರಿನಾಯಿ, ಚಿಂತೆ ಮೊದಲಾದ ಕವಿತೆಗಳಲ್ಲಿ ಬೇಂದ್ರೆಯವರಿಗಿರುವ ಗಾಢವಾದ ಜಾನಪದ ಪ್ರಜ್ಞೆ ಸುವ್ಯಕ್ತವಾಗುತ್ತದೆ. ಮೇಲಿನ

ಬಹುತೇಕ ಕವನಗಳು ಒಂದಿಲ್ಲ ಒಂದು ರೀತಿಯಿಂದ ಹಳ್ಳಿಯ ಬದುಕನ್ನೇ ಪ್ರತಿನಿಧಿಸುವುವರಿಂದ. ಇಂದಿಗೂ ಇವು ಹಳ್ಳಿಯ ದನಗಾಹಿಗಳ ನಾಲಿಗೆಯ ಮೇಲೆ ನಲಿಯುತ್ತಿವೆ; ಸರ್ವಜ್ಞನ ವಚನಗಳಂತೆ ಎಂದಿಗೂ ನಲಿಯುತ್ತಿರುತ್ತವೆ. ಬೇಂದ್ರೆಯವರ ಕವನಗಳಿಗೆ ಜನಾದರಣೆ, ಜನಾಕರ್ಷಣೆ ಮತ್ತು ಜನಪ್ರಿಯತೆಗಳು ಹೆಚ್ಚು. ಇವರ ಕವನಗಳ ಜನಪ್ರಿಯತೆ ಎಷ್ಟಿದೆ ಎಂದರೆ, ಕೆಲವು ಕವನಗಳು ಬೇಂದ್ರೆ ಕವನಗಳಲ್ಲ ಎನ್ನುವಷ್ಟರಮಟ್ಟಿಗೆ ಹಳ್ಳಿಗರ ಬಾಯಲ್ಲಿ ತೇಲಿಹೋಗಿವೆ; ಜನಪದ ಜನಾಂಗಕ್ಕೆ ಸೇರಿಹೋಗಿವೆ. ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ, ಪಾತರಗಿತ್ತಿ ಪಕ್ಕ, ಕುಣಿಯೋಣಬಾರ, ರಾಗರತಿ, ನೀ ಹೀಂಗ ನೋಡಬ್ಯಾಡ ನನ್ನ ಮೊದಲಾದ ಕವಿತೆಗಳ ಹಳ್ಳಿಯ ಅನಕ್ಷರಸ್ಥರ ಸೊತ್ತಾಗಿವೆ. ಇದು ಸಹಜಕ್ರಿಯೆ ಎಂದು ತೋರುತ್ತದೆ. ಏಕೆಂದರೆ, ಮೂಲಭೂತವಾಗಿ ಜನತಾಂತರ್ ದೃಷ್ಟಿಯುಳ್ಳ ಬೇಂದ್ರೆಯವರ ಕವನಗಳ ಮೂಲದ್ರವ್ಯ ಜಾನಪದ. ಮೇಲಾಗಿ ಸ್ವತಃ ಕವಿಯೇ "ಇವು ನನ್ನವಲ್ಲ ಕನ್ನಡದ ಕವನಗಳು"[2] ಎಂದು ಹೇಳಿ ಗಾಳಿಯಲ್ಲಿ 'ಗರಿಗರಿ'ಯಾಗಿ ತೂರಿಬಿಟ್ಟಿದ್ದಾನೆ. ಅವು ಯಾರ್ಯಾರ ಮನೆ ಸೇರುತ್ತವೆಯೋ, ಯಾರ್ಯಾರ ಮನಸೇರುತ್ತವೆಯೋ ಯಾರಿಗೆ ಗೊತ್ತು!! "ಹುಬ್ಬಳ್ಳಿಯಾಂವಾ"ದಂಥ ವಿರಹ ಶೃಂಗಾರದ ಹಾಡನ್ನು ಅನುಭಾವ ಪದವೆಂದು ತಿಳಿದು ಕೆಲವು ಮಠಗಳಲ್ಲಿ ಭಜನೆಯ ಪದವಾಗಿ ಹಾಡುತ್ತಾರಂತೆ,"[3] ಎನ್ನುವ ಕಂಬಾರರ ಮಾತಿನಲ್ಲಿ ಆಶ್ಚರ್ಯವಿಲ್ಲ. 'ಸಗೀನವಿಲು' -ಎನ್ನುವ ಹಾಡನ್ನು ಜನಪದ ಪ್ರೇಮಗೀತವೆಂದು ಬೈಲಾಟದಲ್ಲಿ ಹಾಡಲಾಗುತ್ತಿದ್ದುದನ್ನು ನಾನು ಚಿಕ್ಕಂದಿನಲ್ಲಿ ಕೇಳಿದ

ಜ್ಞಾಪಕವಿದೆ. ಯಾರವ್ವಾ ಇವ ಚೆಲುವ, ತುಂಬಿ ಬಂದಿತ್ತ ಹಳ್ಳದ ದಂಡ್ಯಾಗ, ಮೊದಲಾದ ಕವಿತೆಗಳನ್ನು ಇಂದಿಗೂ ಶಾಲೆ-ಕಾಲೇಜಿನ ವಿದ್ಯಾರ್ಥಿಗಳು ಸಭೆ-ಸಮಾರಂಭಗಳಲ್ಲಿ ಜನಪದ ಗೀತೆಗಳೆಂದೇ ಭ್ರಮಿಸಿ ಹಾಡುತ್ತಾರೆ. ಇಂಥ ಗೀತೆಗಳನ್ನು ಬರೆದವ ಕವಿ ಬೇಂದ್ರೆಯವರೆಂಬುದು ಗೊತ್ತಾದಾಗ, ಅವರನ್ನು 'ಜಾನಪದ ಕವಿ'ಗಳೆಂದು ಕಣ್ಣುಮುಚ್ಚಿ ಕರೆದುಬಿಡುತ್ತಾರೆ. ಮಕ್ಕಳಿಗೆ ಪಾಠ ಹೇಳಿಕೊಡುವ ಬಹುಜನ ಕನ್ನಡ ಪ್ರಾಧ್ಯಾಪಕರಿಗೂ ಬೇಂದ್ರೆ- ಜಾನಪದದಲ್ಲಿಯ ವ್ಯತ್ಯಾಸ ತಿಳಿದಿಲ್ಲ. ಜಾನಪದ ಸತ್ವದ ಕವಿತೆಗಳಲ್ಲಿರುವ ಆಡುಮಾತಿನ ಲಯ, ಶಬ್ದಸಂಪತ್ತು ಪ್ರತಿಮೆ, ಪಡೆನುಡಿ, ನುಡಿಗಟ್ಟು ಧ್ವನಿಶಕ್ತಿ, ಛಂದಸ್ಸು-ಲಯಗಳೆಲ್ಲವೂ ಇವನ್ನು ಬೇಂದ್ರೆ ಗೀತೆಗಳು ಎನ್ನುವುದನ್ನು ಮರೆಯಿಸಿ, ಜಾನಪದ ವಲಯಕ್ಕೆ ಸೇರಿಸುತ್ತವೆ. ಬೇಂದ್ರೆ ಕಾವ್ಯದ ಗಟ್ಟಿತನಕ್ಕೆ ಈ ಜಾನಪದೀಯ ಅಂಶಗಳು ಬಹುಮಟ್ಟಿಗೆ ಕಾರಣ.

ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಬೇಂದ್ರೆಯವರು, ತಾಯಿ ಮತ್ತು ಅಜ್ಜಿಯರ ಸಹವಾಸದಲ್ಲಿಯೇ ಬೆಳೆಯಬೇಕಾಯಿತು. ಬಾಲಕ ಬೇಂದ್ರೆಯವರಿಗೆ ಯಾಂತ್ರಿಕವಾದ ಶಾಲಾ ಶಿಕ್ಷಣಕ್ಕಿಂತ ಸಹಜವಾದ ಲೋಕಶಿಕ್ಷಣದಲ್ಲಿ ಆಸಕ್ತಿ, ಹೀಗಾಗಿ, ಬೀಸುವ, ಕುಟ್ಟುವ ಗರತಿಯರ ಪದಗಳನ್ನು ಕೇಳುವುದು, ಬೀದಿಗಳಲ್ಲಿ ಹೊಟ್ಟೆಪಾಡಿಗಾಗಿ ನಡೆಯುವ ಜಾದುಗಾರರಾಟ, ಹಾವಾಡಿಗರಾಟ, ಕರಡಿಕುಣಿತ, ಮಂಗನಾಟ, ಮೊದಲಾದವುಗಳನ್ನು ನೋಡುವುದರಲ್ಲಿ ಬೇಂದ್ರೆಯವರಿಗೆ ಪ್ರೀತಿ ಹೆಚ್ಚಾಗತೊಡಗಿತು. ತಾಯಿ ಮತ್ತು ಅಜ್ಜಿಯರು ಹೇಳುವ

ದಾಸರಪದಗಳು, ಪಾರಿಜಾತದ ಹಾಡು, ಜಪತಪ, ಭಜನೆ, ಸಾಧುಸಂತರ ಕತೆ, ಪುರಾಣ, ಪುಣ್ಯಕತೆ, ದೈವೀಶ್ರದ್ಧೆಗಳು ಬೇಂದ್ರೆಯವರ ಮನಸ್ಸನ್ನು ಸಂಸ್ಕಾರಗೊಳಿಸಿದುವು. ರಾಜರಕತೆ, ಕಳ್ಳರಸುಳ್ಳರ ಕತೆ, ಒಳ್ಳೆಯವರ ನೀತಿ, ಡೊಳ್ಳಿನ ಕತೆ, ಚವುಡಿಕೆಯ ಗತ್ತು, ಗೊಂದಲಿಗರ ಸಂಬಾಳದ ಧ್ವನಿಗಳನ್ನು ಬಾಲಕ ಬೇಂದ್ರೆಯವರು ಆಲಿಸಿದ್ದಾರೆ."[೯] ತಿತ್ತಿದ ಆಟ, ಸೂತ್ರದಗೊಂಬೆ, ಜೂಜಾಟ, ಕಣ್ಣುಮುಚ್ಚಣಿಕೆಯಾಟಗಳನ್ನೂ ಆಡಿದ್ದಾರೆ. ೧೯೨೦ರ ಸುಮಾರಿನಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿ ಆರಂಭಗೊಂಡಿತು. ಚಳುವಳಿಗೆ ಸನ್ನದ್ಧರಾಗಲು, ಸಾಮಾನ್ಯ ಜನತೆಯಲ್ಲಿ ಸ್ಫೂರ್ತಿತುಂಬಿ ಹುರುದುಂಬಿಸಲು, ಜನಪದ ಕವಿಗಳು, ಕಿತ್ತೂರು ಚೆನ್ನಮ್ಮ, ಸಂಗೊಳ್ಳಿರಾಯಣ್ಣ, ಮುಂಡರಗಿ ಭೀಮರಾಯ, ಹಲಗಲಿನಾಯಕ ಮಕ್ಕಳು, ಸುರಪುರ ವೆಂಕಟಪ್ಪನಾಯಕ ಮೊದಲಾದ ಯೋಧರ ಕುರಿತು ಲಾವಣಿ, ದುಂದುಮೆ, ಗೀಗೀ ಪದಗಳನ್ನು ರಚಿಸಿದರು. ಈ ಕಾಲದಲ್ಲಿ ಲಾವಣಿ, ಗೀಗೀ, ತ್ರಿಪದಿ, ಭಜನೆ ಮೊದಲಾದ ಮಟ್ಟುಗಳಲ್ಲಿ ರಾಷ್ಟ್ರಪ್ರೇಮದ ಹಲವಾರು ಕವಿತೆಗಳು ರಚನೆಗೊಂಡವು; ಈ ಹಾಡುಗಳನ್ನು ಮೇಳಕಟ್ಟಿ ಹಾಡುತ್ತ, ಊರೂರಿಗೆ ಅಲೆದು ಪ್ರಸಾರ ಮಾಡುವ ಕಾರ್ಯವೂ ನಡೆಯಿತು. ಬೇಂದ್ರೆ ಬೆಟಗೇರಿ ಯಂಥ ಕವಿಗಳು ಇಂಥ ಹಾಡುಗಳಿಂದಲೂ ಪ್ರಭಾವಿತರಾದುದು ತುಂಬ ಗಮನೀಯ ಅಂಶ. 'ಬೇಂದ್ರೆಯವರು ಚಿಕ್ಕವರಿರುವಾಗಲೇ ಅನೇಕ ಜಾನಪದ ಗೀತೆಗಳನ್ನು ಬಾಯಿಪಾಠ ಹೇಳುತ್ತಿದ್ದರು."[೧೦] ಅವರು ಭಜನೆ ಸಾಧನೆ ಕೂಡ ಮಾಡಿದವರು. ಹಾಗಾಗಿ ಕನ್ನಡ

ಮರಾಠಿ ಭಾಷೆಗಳಲ್ಲಿ ಕೆಲವು ಭಜನೆಗಳನ್ನು ಹಾಡಿದವರು ರಚಿಸಿದವರು."[೧೧] ಧಾರವಾಡದ ಹಳ್ಳ ಕೊಳ್ಳ, ಸೋಮೇಶ್ವರದ ಹಾದಿ, ಹಾಲಗೇರಿ, ಕೆಲಗೇರಿ, ಕಾಮನಕಟ್ಟಿ, ಶಾಲ್ಮಲೆ, ಶ್ರೀ ಗಿರಿ-ಇಲ್ಲೆಲ್ಲ ಮರವೇರಿ ಆಟವಾಡುವಾಗ, ಹೂತ ಹೂಣಸೀಮರದ ಚಿಗುರನ್ನು ಮೆಲ್ಲುವಾಗ, ಜೇನುಹನಿಯನ್ನು ಸವಿಯುವಾಗ, ಜೋಳದ ರವದಿಯನ್ನು ಊದುವಾಗ, ಓಣಿಯಲ್ಲಿಯ ಕರಡಿ ಕುಣಿತವನ್ನು ಕಣ್ಣಾರೆ ಕಂಡಾಗ, ಸಂಜೆಗೆ ಮನೆಗೆ ಮರಳುವ ದನಕರದ ದೃಶ್ಯವನ್ನು ನೋಡಿದಾಗ, ಎಮ್ಮೆಯ ಬೆನ್ನೇರಿ ಹಾಡುತ್ತ ಬರುವ ದನಗಾಹಿಯ ಚಿತ್ರವನ್ನು ಕಂಡಾಗ, ಆದ ಸಂತೋಷದ ಭಾವಗಳನ್ನು ಬೇಂದ್ರೆಯವರು ಕಾಲಾನಂತರದಲ್ಲಿ ಭಾವಗೀತೆಗಳನ್ನಾಗಿ ಚಿತ್ರಿಸಿದಂತೆ ತೋರುತ್ತದೆ. ತಮ್ಮ ಬಾಲ್ಯದ ಸವಿಸೊಗಸನ್ನೆಲ್ಲ 'ಬಾಲ್ಯಕಾಂಡ' ದಲ್ಲಿ ಮರುಕಳಿಸಿ ನೆನೆನೆನೆದು ಸಂತೋಷಪಡುತ್ತಾರೆ ಕವಿ ಬೇಂದ್ರೆ. ಬೇಂದ್ರೆಯವರ ಬಾಲ್ಯದ ಅನುಭವದಿಂದ ಮೂಡಿದ ಒಂದೆರಡು ಜಾನಪದೀಯ ಚಿತ್ರವನ್ನು ನೋಡಿ. ಬೇಂದ್ರೆಯವರಿಗೂ ಜಾನಪದಕ್ಕೂ ಇರುವ ಆತ್ಮೀಯ ಸಂಬಂಧವನ್ನು ಕೆಳಗಿನ ಚಿತ್ರಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿವೆ.

'ಕಬ್ಬಿಣ ಕೈಕಡಗ ಕುಣಿಕೋಲು ಕೂದಲು
ಕಂಬಳಿ ಹೊದ್ದಾಂವ ಬಂದಾನ
ಗುಣು ಗುಣು ಗುಟ್ಟುತ್ತ ಕಡಗವ ಕುಟ್ಟುತ
ಕರಡಿಯ ನಾಡಿಸುತ ನಿಂದಾನ'

-(ಕರಡಿ ಕುಣಿತ)

ಎಮ್ಮಿ ಬೆನ್ನ ಹತ್ತಿ ಹಾಡ್ತಾರ
ಹಾವಿಗೆ ಮಾಟ ಮಾಡ್ತಾರ
ಮಂಗ್ಯಾನ ಆಟ ಆಡ್ತಾರ

. . . .

ಕಾಗ್ಯಾತು ಗುಬ್ಯಾತು
ನಾಯಾತು ಕರಡ್ಯಾತು
ಓತಿಕಾಟಕ್ಕ ಬೇಲಿ ಸಾಕ್ಷಿ

-ಇತ್ತೀಚೆ ಬೇಂದ್ರೆ ಮಾಸ್ತರ್ ಏನ್ ಮಾಡ್ತಾರ್
-(ಪ್ರತಿಬಿಂಬಗಳು)

ಬೇಂದ್ರೆಯವರು, ಶಾಲೆ-ಕಾಲೇಜಿನ ಯಾಂತ್ರಿಕ ಶಿಕ್ಷಣಕ್ಕಿಂತ, ಲೋಕ ಶಿಕ್ಷಣಕ್ಕೇ ಹೆಚ್ಚು ಮಹತ್ವಕೊಟ್ಟರು. ಲೋಕಶಿಕ್ಷಣ ವಿಶಾಲವಾದುದು, ಸತ್ಯವಾದುದು, ದುಬಾರಿಯಾದುದಲ್ಲ ಮತ್ತು ಇದರ ಗುರುಗಳೆಂದರೆ ಗ್ರಾಮೀಣ ಗರತಿಯರೇ- ಎಂಬುದನ್ನು ಬೇಂದ್ರೆ ಅವರು ಆಗಲೇ ತಿಳಿದುಕೊಂಡಂತಿದೆ. ಅದನ್ನು ತಮ್ಮದೆಂದು ಕವಿತೆಯ ಸಾಲುಗಳಲ್ಲಿ ಹೇಳಿದ್ದಾರೆ.

'ಭಿಕ್ಷೆಯ ನೀಡುವುದು ಶಿಕ್ಷಣವು ಎನಿಸಿತ್ತು
ಗರತಿಯರ ಮೇಲಿತ್ತು ಆ ಬಾರವು
ಅಂದಿನ ಅಂದವು ಒಂದೆನಲೆ ಎರಡೆನಲೆ
ಹೋದಂಥ ದಿನಮರಳಿ ಹೋ! ಬಾರವು'

-(ಮತ್ತೆ ಶ್ರಾವಣ ಬಂತು)

ಬೇಂದ್ರೆಯವರ ಈ ಕವಿತೆಯ ಮೇಲೆ ಜಾನಪದ ಗರತಿಯ ತ್ರಿಪದಿಯೊಂದು ಪ್ರಭಾವ ಬೀರಿದಂತಿದೆ. ಅದು :-

"ಹೊಟ್ಟೆಯೊಳಗಿನ ಹಾಡು ಬಿಟ್ಟೊಬಿಡದೆ
ಕಲಿಸಿ ತೀರಿಸಬೇಕ ಕಲಿತ ಋಣವ
ಇಲದಿರಕ ಹಾಡ ಹಿಂಗ್ಯಾವ ಬಾಯಾಗ"

ಶಾಲಾ ಮಾಸ್ತರನಾಗಿ ವೃತ್ತಿಯನ್ನು ಕೈಕೊಂಡ ಬೇಂದ್ರೆ ಪ್ರವೃತ್ತಿಯಿಂದ ಕವಿಯಾಗಿ, ಹೊಸಕವನ, ಹೊಸಧಾಟಿಯಲ್ಲಿ ಬರೆಯುತ್ತ ಮುನ್ನಡೆದು ತಮ್ಮ ಕವಿತೆಗಳನ್ನು ಜಾನಪದದ ಲಾವಣಿ ಸಾಂಗತ್ಯದಲ್ಲಿ ಬರೆಯುವ ಹೊಚ್ಚಹೊಸ ಹಾದಿಯನ್ನೇ ನಿರ್ಮಿಸಿಕೊಂಡರು. ಇಂಥ ಹಾಡುಗಳನ್ನು ಕೋಲುಹಾಕುತ್ತ ಹಾಡುವ ಹೊಸತನವನ್ನೇ ಭಾವಗೀತ ಪ್ರಕಾರದಲ್ಲಿ ಬೇಂದ್ರೆ ತಂದರು. ಇವರ ಸಖೀಗೀತ ಜಾನಪದ ಕೋಲಾಟದ ಗತಿಯಲ್ಲಿಯೇ ಸಾಗುತ್ತದೆ. ಅದನ್ನು 'ಕುಣಿತದ ಹಾಡು'ಕುಣಿಯ ಹಚ್ಚಿತು ಜನಕೆ ಎಂಬ ಸಾಲುಗಳಲ್ಲಿ ಸ್ಪಷ್ಟಪಡಿಸಿದ್ದಾರೆ. ಇದು ಭಾರತೀಯ ಜನಪದೀಯ ಸಂಸ್ಕೃತಿಯ ಚಿತ್ರಣವೇ ಆಗಿದೆ. ಈ ಖಂಡಕಾವ್ಯದ ತುಂಬೆಲ್ಲ ಜನಪದ ಸಂಸ್ಕೃತಿಯ ಮಣ್ಣಿನ ವಾಸನೆಯೇ ಹರಡಿದೆ. ಇಲ್ಲಿಯ ನಾಯಕಿ, ಅಪ್ಪಟ ಜನಪದ ಗರತಿಯೇ.

ನಿಮ್ಮೆದೆ ಎತ್ತರಕೆ ನಾವೇನು ಬಂದೇವು
ಕಲಿತವರ ಬೆಡಗಿಲ್ಲ ನಮ್ಮ ಕಡೆ
ನಿಮ್ಮ ಕಣ್ಮುಂದೆಯೇ ಕಣ್ಮುಚ್ಚಿದರೆ ಸಾಕು
ಗೆದ್ದೆವು....................

ಎನ್ನುವ 'ಗರತಿ ಗಂಗವ್ವ'ನ ಕುಲದವಳು. ಕವಿ, ತನ್ನ ಪಾಲಿಗೆ ಮಾತ್ರ ಪ್ರೇಮದೇವತೆಯಾದ ಇವಳನ್ನು ಮನಬಿಚ್ಚಿ ಹೊಗಳುವನು-

ಆಗೀಗ ಸಖೀ ನೀನು ನಸುನಕ್ಕು ಮಾತಿದಿ
ಮಾತಿವ ಹಗುರಾಗಿ ಮಾಡದಿರೆ
ಕಾಯುವ ಕರುಳೊಂದು ಬೆಂಗಾವಲಿರದೆಯೆ
ದೇಶಾಂತರದಲ್ಲಿ ಬದುಕಿದೆನೇ

ಹೀಗೆ, 'ಸಖೀಗೀತ'ದ ನಾಯಕ-ನಾಯಕಿಯರಲ್ಲಿಯ ಪರಸ್ಪರ ಹೊಗಳಿಕೆ, ಜನಪದ ಸಂಸ್ಕೃತಿಯಿಂದಲೇ ಪ್ರೇರಿತವಾದುದು.

ಭಾವಗೀತೆಗಳು ಎಷ್ಟೇ ವ್ಯಷ್ಟಿನಿಷ್ಠವಾಗಿದ್ದರೂ ಸಮಷ್ಟಿಯನ್ನು ಒಳಗೊಂಡೇ ಇರುತ್ತವೆ, ಎನ್ನುವುದಕ್ಕೆ ಬೇಂದ್ರೆಯವರ ಭಾವಗೀತೆಗಳೇ ಉತ್ತಮ ನಿದರ್ಶನ. ಸ್ವಾನುಭವಕ್ಕೆ ಆಕಾರ ಕಲ್ಪಿಸಿ, ಅಭಿವ್ಯಕ್ತಿಸುವ ಸಂದರ್ಭದಲ್ಲಿಯೂ ಬೇಂದ್ರೆಯವರ ಕಣ್ಣೆದುರಿಗೆ ದುಡಿಯುವವರು, ತಿರುಕರು, ಕೂಲಿ ಕುಂಬಳಿಯವರು ನಿಂತಿರುತ್ತಾರೆ. ಬೀದಿಯಲ್ಲಿ ಜೀವನ ಸಾಗಿಸುವ, ದುಡಿದೂ ದುಡಿದೂ ಬೇಸತ್ತ ಶ್ರಮಜೀವಿಗಳ ಬೇಸರ ನಿವಾರಣೆಗಾಗಿ ಕವಿ ಹಿಗ್ಗಿನ ಹಾಡು ಹೇಳಿದವರು. ಈ ಕವಿಯಲ್ಲಿ 'ಪಟ್ಟ ಪಾಡೆಲ್ಲವೂ ಹುಟ್ಟು ಹಾಡಾಗುತ ರಸವಾಗಿ ಹೊಸವಾಗಿ' ಹರಿಯುತ್ತಿರುವುದರಿಂದ, ತನ್ನ ಪಾಡನ್ನು ಗಣಿಸದೆ ಇನ್ನೊಬ್ಬರ ಸಂತೋಷಕ್ಕೆ ಹಾಡಲುದ್ಯುಕ್ತನಾಗುತ್ತಾನೆ. 'ಒಂದು ಹೂತ ಹುಣಸೀಮರ'ವಿದ್ದರೆ ಸಾಕು. ಹಾಡನ್ನು ಹೇಳುತ್ತ ಕವಿ ಜೀವದ ಬೇಸರ ಕಳೆದುಕೊಂಡು, ಇನ್ನೊಬ್ಬರಿಗೆ ಸುಖ ನೀಡಲು ಕವಿ ಮುನ್ನುಗ್ಗುತ್ತಾನೆ. ಕವಿತೆ ತನಗಾಗಿ ಅಲ್ಲ, ಸಾಮಾನ್ಯರ ಸಂತೋಷಕ್ಕಾಗಿ ಎಂಬುದು ಬೇಂದ್ರೆ ವಿಚಾರ. ಅದನ್ನು ಒಂದೆಡೆ ಹೇಳಿಯೂ ಇದ್ದಾರೆ-

ಏಕಾಂತದ ಜೆನುಗು ಲೋಕಾಂತಕೆಳೆಯಿತು
ಜನವು ಜನಾರ್ದನನೆಂದರಿತೆ

-(ಸಖೀಗೀತ)

ಬೇಂದ್ರೆ ಕಾವ್ಯದ ಜೀವದ್ರವ್ಯವೇ ಜನಸಮುದಾಯ. "ಬೇಂದ್ರೆಯವರು ಸ್ವಂತ ಅನುಭವಗಳನ್ನು ಹೇಳುವಾಗಲೂ ಕೂಡ ಜನಸಾಮಾನ್ಯರ ಜೀವನದ ಒಟ್ಟು ಸಂದರ್ಭದಲ್ಲಿಯೇ ನಿಂತುಕೊಂಡಿರುತ್ತಾರೆ. 'ಸಖೀಗೀತೆ' ಇದಕ್ಕೆ ಉತ್ತಮ ಉದಾಹರಣೆಯಾಗಿದೆ. ಅದು ಹೇಳಿ ಕೇಳಿ ಕವಿಯ ಆತ್ಮಚರಿತ್ರೆ." [೧೨] 'ಕಂಬಾರ' ಇದೇ ಮಾತನ್ನು 'ಕುರ್ತಕೋಟಿ' ಅವರು ಸ್ವಲ್ಪ ವಿವರಿಸಿ ಹೇಳಿದ್ದಾರೆ. ಸಖೀಗೀತ "ಮದುವೆಯ ಮಧುರಸ್ಮೃತಿಗಳಿಂದ ಪ್ರಾರಂಭವಾಗುವ ಗೀತ ; ದಾಂಪತ್ಯದಲ್ಲಿ ಸಖ್ಯಯೋಗ ಮೂಡಲಿ ಎಂಬ ಹಾರೈಕೆಯೊಂದಿಗೆ ಮುಗಿಯುತ್ತದೆ. ಕವಿಯ ಸುಖ-ದುಃಖಗಳು, ದಾಂಪತ್ಯದ ಸರಸ-ವಿರಸಗಳು, ಸಂಸಾರದ ಅನೇಕ ತಾಪತ್ರಯಗಳು ಇವೇ ಕಾವ್ಯದ ವಸ್ತುವಾಗಿವೆ. . . . . . "ಅಷ್ಟೇ ಅಲ್ಲ ಋತುಮಾನಗಳ ಚಿರಂತನಲೀಲೆ ಕೂಡ ಕವಿಯ ನೆನಪುಗಳ ಮೂಲಕ ಒಂದು ಸ್ಥಾನಿಕ ಕ್ರಿಯೆಯಾಗಿ ಪರಿಣಮಿಸಿದೆ. ಆದರೆ ಇಲ್ಲಿ ಬಂದಿರುವ ಚಿತ್ರ ವೈಯಕ್ತಿಕವಾಗಿದ್ದರೂ ಸಾಮಾನ್ಯ ಜೀವನದ ಒಂದು ಅಂಶವಾಗಿ ಬಂದಿದೆ. ದಾಂಪತ್ಯದಲ್ಲಿ ಸಖ್ಯಯೋಗ ಬರಬೇಕೆಂಬುದು ಬೇಂದ್ರೆ ಕಾವ್ಯದ ದರ್ಶನ. ಅದು ಸಾಮಾನ್ಯ ಸಂಸ್ಕೃತಿಗೆ ಯಾವ ರೀತಿಯಿಂದಲೂ ಭಿನ್ನವಾಗಿಲ್ಲ." [೧೩] ಸಖೀಗೀತ ಜನಪದ ಸಂಸ್ಕೃತಿಯ ಆಶ್ರಯದ ಆಸರೆಯನ್ನು ಹಮ್ಮಿಕೊಂಡೇ ಸೃಷ್ಟಿಯಾದುದನ್ನು 'ಕುರ್ತಕೋಟಿ' ಯವರು ಸರಿಯಾಗಿಯೇ ಗುರುತಿಸಿದ್ದಾರೆ. ಸಮಷ್ಟಿಯ ಅನುಭವ, ವ್ಯಷ್ಟಿಯಲ್ಲಿ ರೂಪುಗೊಳ್ಳುವಾಗ, ಅವರಲ್ಲಿ ಸಮಷ್ಟಿಯ

ಂಶವು ಅಧಿಕ ಪ್ರಮಾಣದಲ್ಲಿರುತ್ತದೆ. ಅಥವಾ ಸಮಷ್ಟಿಯ ನುಭವ ಕವಿಹೃದಯದಲ್ಲಿ ಪಾಕಗೊಂಡು ಅಭಿವ್ಯಕ್ತಿಗೊಳ್ಳು ಾಗ, ತನ್ನ ಸಮಷ್ಟಿಯ ಮೂಲಾಂಶಗಳನ್ನು ಸಹಜವಾಗಿಯೇ ಳಗೊಂಡಿರುತ್ತದೆ. ಇದು, ಬೇಂದ್ರೆಯವರಲ್ಲಿ ಅದ್ವಿತೀಯ ್ಥಾನದಲ್ಲಿದೆ.

೪. ಮಕ್ಕಳ ಜನಪದ ಕಥೆ ಶಿಶುಪ್ರಾಸ - ಗರತಿಯ ಹಾಡು

ಬೇಂದ್ರೆಯವರು ಚಿಕ್ಕಂದಿನಲ್ಲಿ ಗೊಂಬೆಯಾಟ ಆಡಿ ಖಿಪಟ್ಟವರು, ಜನಪದ ಕಥೆ-ಹಾಡುಗಳ ಸೊಲ್ಲನ್ನು ಆಲಿಸಿ ುಕಿತರಾದವರು, ಎಲ್ಲಾ ಗ್ರಾಮೀಣ ಮಕ್ಕಳಂತೆ. ಕಾಲಕ್ರಮೇಣ ಾಲ್ಯದ ಸುಖ-ಸಂತೋಷಗಳು ತನ್ನ ನಿಜಜೀವನದಲ್ಲಿ ಗೋಚರಿ ಾಗ, ಬಾಲ್ಯದ ಬಾಳಸಂಪುಟದ ಸ್ಮೃತಿಗಳನ್ನು 'ಸಖೀಗೀತ' ಲ್ಲಿ, ತನ್ನ 'ಸಖಿ'ಯ ಎದುರಿನಲ್ಲಿಯೇ ನೆನೆಸಿಕೊಳ್ಳುತ್ತಿದ್ದಾರೆ. ೇಂದ್ರೆ ಬಾಳಸಂಪುಟದ ಬಾಲ್ಯದ ಜನಪದ ಕಥೆ, ಹಾಡುಗಳು ಿಸಲಾರದ ಮಧುರ ಭಾವಗೀತೆಗಳಾದುದನ್ನು ಗಮನಿಸಿ-

"ಹಿಂಗೊಬ್ಬ ಅರಸಿದ್ದ" ಎನ್ನುತ್ತ ಎಂದೆಂದು
ಕಾಲಿಲ್ಲದ ಕಥೆ ಸಾಗುತಿರೆ
ಹ್ಯಾಂಗಾರೆ ಕಥೆ ಮುಗಿದು ಕಾಡಿಗೆ ಹೋಗಲು
ಬೆರಗಿಲೆ ಮೊಗವಗಲಾಗುತಿರೆ

ಮಾಜಲಿಮೊಗ ಮೊದಲು, ಎಡರೆಷ್ಟೇ ಬರುತಿರಲಿ
ಮುಗಿತಾಯ ಸಿಹಿಸಕ್ಕರೆಯಾಗುತಿರೆ

ರಾಜಪುತ್ರಿಗೆ ಕೊನೆಗೆ ಕಟ್ಟಿಬಿಟ್ಟ, ಹಾಗೆಯೇ
ರಾಜಪುತ್ರನು ಬರುವ ಹೇ ಸುಖವೇ !!

"ಅಟ್ಟಂಬಟ್ಟಾರಣ್ಯ"ದೊಳು ರಾಕ್ಷಸನು ಬಂದು
ಹೊಸನಾತ ಎನ್ನುತ್ತ ತಿನ್ನಲಿರೆ
ಸತ್ತರೇನತ್ತರೇನಲ್ಲಿಗೈತರುವರು
ಶಿವಪಾರ್ವತಿ ಅವರನೆಬ್ಬಿಸಲೇ

-(ಸಖೀಗೀತ)

ದುಃಖದ ಕೊನೆಯಲ್ಲಿ ಸುಖ ಬಂದೇ ಬರಬೇಕು ಎಂಬ ಆಶಯವನ್ನು ಒಳಗೊಂಡ ಅಜ್ಜಿಕಥೆಗಳು ಯಾರ ಮನಸ್ಸಿಗಾದರೂ ಸಂತೋಷವನ್ನು ನೀಡುತ್ತವೆ. ಇಂಥ ಕುತೂಹಲಕರವಾದ ಮಕ್ಕಳ ಕಥೆಗಳು ದೊಡ್ಡವರನ್ನೂ, ಬುದ್ಧಿಜೀವಿಗಳನ್ನೂ ತಮ್ಮೆಡೆಗೆ ಆಕರ್ಷಿಸಿ ಚಿಕ್ಕವರನ್ನಾಗಿಸುತ್ತವೆ. ಇಲ್ಲಿ ಬೇಂದ್ರೆ ಅವರು ಮಕ್ಕಳ ಕಥೆಗಳನ್ನು ಉದ್ದೇಶಪೂರ್ವಕವಾಗಿಯೇ ಉದಾಹರಿಸುತ್ತಾರೆ. ಜನಪದ ಕಥೆಯನ್ನು ಚೆನ್ನಾಗಿ ಅರಿತವರಾದುದರಿಂದ, ಕಥಾರಂಭದ- 'ಹಿಂಗೊಬ್ಬ ಅರಸಿದ್ದ' ಹಾಗೂ 'ಅಟ್ಟಂಬಟ್ಟಾರಣ್ಯ'ದೊಳು ಎಂಬ ಮಾತುಗಳನ್ನು, ತಮ್ಮ ಕವಿತೆಯ ಸಾಲುಗಳಲ್ಲಿ ಬಳಸುವಾಗ ಅವತರಣಿಕೆಗಳಲ್ಲಿ ಇಟ್ಟಿದ್ದಾರೆ. ಇದು ಬೇಂದ್ರೆಯುವರಿಗಿರುವ ಜಾನಪದ 'ಸ್ವೀಕರಣ'ದ ಪ್ರಾಮಾಣಿಕ ಗುಣವನ್ನು ಎತ್ತಿತೋರುತ್ತದೆ. ಹಾಗೆಯೇ--

"ನವಿಲೇ ನವಿಲೇ ಮಳೆ ಬಂದಾಗೆಲ್ಲಿದ್ದೆ" - ?
"ತಿರುಮಲೆರಾಯನ ತೋಟಿನೊಳೇ! "

. . . .

"ಮಾಗಿಯ ಕಾಲಕ್ಕೆ ಹೇಗಿದ್ದೆ ಕೋಗಿಲೆ! "
'ಹೋಗಿದ್ದೆ ಬನವಾಸಿ ವನವಿನೊಳೆ'
. . . .
"ತಾಯಿ ಕಾಣದ ಜೀವ ತಾವೂರಿ ಬಾವೂರಿ"
. . . .
. . . ."ಆಡಿ ಬಾ ಎನಕಂದ"
. . . .
"ಗುಜು ಗುಜು ಮಾವುರೆ" - - - - - - - - - -

-(ಸಖೀಗೀತ)

ಮೊದಲಾದ ಮಕ್ಕಳ ಹಾಡು, ಮಕ್ಕಳ ಗೊಂಬೆಯ ...ದುವೆಯ ಆಟದ ಹಾಡು, ಗರತಿಯರ ಹಾಡುಗಳನ್ನು ತನ್ನ ...ತನಾಮಯ ದಾಂಪತ್ಯದ ಬದುಕಿನಲ್ಲಿ ಕವಿಗಳು ನೆನೆನೆನೆದು, ...ದು ಇಂದು ಏಕೆ ಬಾರದೋ ಎಂದು ಹಳಹಳಿಸುತ್ತಾರೆ. ...ಖೀಗೀತ' ದ ಮೇಲಿನ ಸಾಲುಗಳು, ಗರತಿಯ ತ್ರಿಪದಿ ಹಾಡಿನ ...ಲುಗಳ ನೇರ ಸ್ವೀಕರಣ; ಒಂದೆರಡೆಡೆ ಮಾತ್ರ ...ಲ್ಪಮತ್ಯಾಸವಿದೆ. ಜಾನಪದ ತ್ರಿಪದಿಯಲ್ಲಿ, "ಮಾಗೀಯ ...ಳಿಗಾಲ ಹ್ಯಾಂಗಿದ್ದಿ ಕೋಗಿಲೆ "[೧೪] ಎನ್ನುವ ಸಾಲು ಬೇಂದ್ರೆ ...ವರಲ್ಲಿ 'ಮಾಗಿಯ ಕಾಲಕ್ಕೆ ಹೇಗಿದ್ದೆ ಕೋಗಿಲೆ!' ಎಂದು ...ಕೆಯಾಗಿದೆ. " ತಾಯಿ ಕಾಣದ ಜೀವ ತಾವೂರಿ ಬಾವೂರಿ" [೧೫] ...ಂಬುದನ್ನು ನೇರವಾಗಿ ಎತ್ತಿಕೊಂಡಿದ್ದಾರೆ. 'ಆಡಿ ಬಾ ಎನ ...ದ'-[೧೬] ಎಂಬುದು, "ಆಡಿ ಬಾ ಎನ ಕಂದಾ" ಅಂಗಾಲ ...ಳದೇನ, ತೆಂಗೀನಕಾಯಿ ತಿಳಿನೀರ ತಕ್ಕೊಂಡು, ಭಂಗಾರ ...ರಿ ತೊಳದೇನ"-ಎನ್ನುವ ಸುಪ್ರಸಿದ್ಧ ತ್ರಿಪದಿಯ ಮೊದಲ

ಅರ್ಥಸಾಲಾಗಿದೆ. "ಗುಜ ಗುಜ ಮಾಪುರಿ ಆಡೋಣ, ಗುಜೇರ ಮಾಪುರಿ ಆಡೋಣ, ಸಾಮದಂಡಿ ಆಡೋಣ, ನರಲೋಕಕ್ಕೆಲ್ಲ ತಿಳಿಸೋಣ,"[೧೭] ಎಂಬ ಶಿಶುಗೀತದ ಮೊದಲ ಸಾಲನ್ನು, 'ಗುಜು ಗುಜು ಮಾಪುರೆ' ಎಂಬ ಕವಿತೆಯಲ್ಲಿ ಉಲ್ಲೇಖಿಸುತ್ತಾರೆ.

'ಮಗು ಮಾನವನ ತಂದೆ' ; ದೇವಸ್ವರೂಪಿ ಎಂಬುದು ಭಾರತೀಯ ಜಾನಪದ ಭಾವನೆ. ಬೇಂದ್ರೆ ಅವರು ಕಂದನಿಗೆ ರಂಗನಾಥ, ಬಾಲಗೋಪಾಲ, ತಾಳಿಯ ಮಣಿಯೊಳಗಣ ತೇಜ, ಮಲ್ಲಾರಿಮಾರ್ತಾಂಡ, ಗುಡ್ಡದ ಕುಮಾರಸ್ವಾಮಿ, ಭೂವೈಕುಂಠ ನಿವಾಸಿ, ದಶಾವತಾರ ಮೊದಲಾಗಿ ಸಂಬೋಧಿಸುವಲ್ಲಿ ಪೂಜ್ಯತೆ, ಧನ್ಯತೆ, ಕೃತಾರ್ಥತೆ, ಆರಾಧನೆಯ ಅಲೌಕಿಕ ಭಾವನೆ ಗಳಿದ್ದುದನ್ನು ಗಮನಿಸಬೇಕು. ಹಾಗೆಯೇ 'ಮಕ್ಕಳೆಂದರೆ ನೊಣದ ಪಾಯಸವಲ್ಲ; ' 'ಮಕ್ಕಳೆಂದರೆ ಕೊರಳಿಗೆ ಉರಲು ಅಲ್ಲ' (ಅವರೇನು ಬಲ್ಲರು- ಉಯ್ಯಾಲೆ (ಸಂ)ಸಾಲುಗಳು, 'ಬಡತನ ನನಗಿರಲಿ ಭಾಳಮಕ್ಕಳಿರಲಿ, ಛ್ಯಾಗ ಗುರುವಿನ ದಯವಿರಲಿ, ನನ ಗುರುವೆ, ಬಡತನದ ಚಿಂತೆ ನಿನಗಿರಲಿ.'[೧೮] ಎಂಬ ಗರತಿಯರೆದೆ ಮಾತುಗಳಿಂದ ಪ್ರೇರಣೆಗೊಂಡಿರಬೇಕು. 'ನಿನ್ನ ತಳಿ ಬಳಿಯುತಾ ಹಳ್ಳಿ ಹಳ್ಳಿಗೆ ಕರಿಕೆ ಕಳ್ಳಿಯೊಲು ಕಂದ ಜೋ ಜೋ' (ಕನ್ನಡ ಕಂದವ್ವನ ಲಾಲಿ-'ನಾದಲೀಲೆ') ಎನ್ನುವ ಜೋಗುಳ ಗರತಿಯ ಸಾಲು, "ಹಾಲುಂಡ ತವರೀಗಿ ಏನೆಂದು ಹಾಡಲೆ, ಹೊಳೆದಂಡಿಲಿರುವ ಕರಕೀಯ ಕುಡಿಯಂಗ ಹಬ್ಬಲೆ ಅವರ ರಸಬಳ್ಳಿ" - [೧೯] ಎಂಬ ಗರತಿಹಾಡಿನಿಂದ ಸ್ಫೂರ್ತಿಗೊಂಡಂತಿದೆ.

ಬೇಂದ್ರೆಯವರು 'ಶಿಶುಪ್ರಾಸ'ದ ಮೋಡಿ ಮತ್ತು ಅದರ ಲಯದಿಂದಲೂ ಪ್ರಭಾವಿತರಾಗಿ ಅದನ್ನೆಲ್ಲ ತಮ್ಮ ಮಕ್ಕಳ ಕವಿತೆಗಳಲ್ಲಿ ಅಳವಡಿಸಿದುದುಂಟು. ಉದಾಹರಣೆ-

ಹಾತರಗಿತ್ತಿ ಪಕ್ಕಾ
ನೋಡಿದೇನ ಅಕ್ಕಾ

. . . .

ಯಾರವ್ವಾ ಇವ ಚೆಲುವಾ
ತನ್ನಷ್ಟಕ್ಕ
ತಾನ ನೋಡಿ ನಲಿವಾ!

. . . .

ಕರಿಮರಿನಾಯಿ ಕುಂಯಿಗುಡುತ್ತಿತ್ತು
ಭಟ್ಟರಬಾಯಿ ಒಟಗುಡುತ್ತಿತ್ತು.

ಇತ್ಯಾದಿ 'ಗರಿ' ಸಂಕಲನದಲ್ಲಿಯ ಕವಿತೆಗಳ ಶಿಶುಗೀತದ, 'ಕುಂಬಕುಂಬಾಟ ನಿಂಬೀ ತ್ಯಾಟ,' ಗಿರಿಗಿರಿ ಗಿಂಡಿ ಇಬತ್ತಿ ಉಂಡಿ, ಮಾವಬಂದಾನವ್ವ ಏನೇನ ತಂದಾನವ್ವ, -ಮೊದಲಾದ ಧಾಟಿ-ಲಯಗಳಿಂದ ಪ್ರೇರಣೆ ಪಡೆದಿವೆ. ಅಲ್ಲದೆ ಬೇಂದ್ರೆಯವರೇ ಬರೆದ 'ಗಿಳಿಯು ಪಂಜರದೊಳಿಲ್ಲ.' ನನ್ನಕಂದ, ಚಿಂತೆ, ಕೂಸುಬಿನ್ನಾಣ ಮೊದಲಾದ ಕವಿತೆಗಳು ಮೂಲತ: ಮಕ್ಕಳ ಕವಿತೆಗಳೇ ಆಗಿದ್ದು, ಅವುಗಳ ಮೇಲೆ ಜಾನಪದ ಶಿಶುಗೀತದ ಪ್ರಭಾವವಿದ್ದದು ಕಂಡುಬರುತ್ತದೆ. 'ಚಂದಮಾಮಾ' ('ಮರ್ಯಾದೆ' -ಸಂಕಲನ) ಕವಿತೆಯ ಹೆಸರೇ ಮಕ್ಕಳ ಕವಿತೆಯ ತಲೆಬರೆಹ ವಾಗಿದೆ. ಇದರಲ್ಲಿಯ-

ಚೌರೀಕಾಯಿ ಕೂಡ ಬಾರೀಕಾಯಿಯ ಇಟ್ಟು,
ಬಟ್ಟಲಿ ತುಂಬಿದೆ ಚಂದಮಾಮಾ (ಪಲ್ಲ)-ಎಂಬ ಸಾಲು

ಗಳು 'ಚಂದಪ್ಪ ಚಂದಪ್ಪ ಚೌರಿಕಾಯಿ. ಬಟ್ಟಲತುಂಬ ಬಾರಿಕಾಯಿ'--ಎಂದು ಆಕಾಶದಲ್ಲಿ ಮೂಡಿದ ಪೂರ್ಣಚಂದ್ರನನ್ನು ನೋಡುತ್ತ, ಮಕ್ಕಳು ಹೇಳುವ. ಶಿಶುಗೀತದಿಂದ ಪ್ರಭಾವಿತ ಎಂಬುದನ್ನು ಬೇರೆ ಹೇಳಬೇಕಾಗಿಯೇ ಇಲ್ಲ. ' 'ಎಲ್ಲಿಗೆ ಬಂತೊ ಸಂಗಯ್ಯಾ?' (ನೂರು ವರ್ಷಾತು- 'ಇದು ನಭೋವಾಣಿ') ಎಂಬ ಬೇಂದ್ರೆಯವರ ಕವನದಲ್ಲಿ ಉಲ್ಲೇಖಗೊಂಡ ಮಾತು. ಮಕ್ಕಳು ಕಚಗುಳಿ ಇಡುವಾಗ ಹೇಳುವ' 'ಇಲ್ಲಿಗೆ ಬಂತೊ ಸಂಗಯ್ಯಾ, ಇಲ್ಲಿಗೆ ಬಂತೊ ಸಂಗಯ್ಯಾ ಎಂಬ ನುಡಿಯೇ ಆಗಿದೆ. 'ಚತುರೋಕ್ತಿ ಮತ್ತು ಇತರ ಕವನ'ಗಳಲ್ಲಿ ಉಕ್ತವಾದ 'ಕಾಳ್ಯೋ ಮಳ್ಯೋ' ಮಾತೂ ಕೂಡ ಮಕ್ಕಳು ಮಳೆ ಬರುವಾಗ ಬಯಲಲ್ಲಿ ಆಟವಾಡುತ್ತ ಹೇಳುವ, 'ಕಳ್ಳಿ ಮಳ್ಳಿ ಕಪ್ಪತ ಮಳೆಯೇ. ಸುರಿಯಲೇ ಮಳೆಯೇ. ಸುರಿಯಲೇ ಮಳೆಯೇ. ಎಂಬ ಶಿಶುಪ್ರಾಸದ ಸ್ವೀಕರಣವೇ, ಕಣ್ಣು-ಮುಚ್ಚಾಣಿ (ಪಟಾಕಿ) ಪದ್ಯದ ತಲೆಬರೆಹವೇ ಮಕ್ಕಳ ಕಣ್ಣುಮುಚ್ಚಾಲೆಯಾಟವನ್ನು ನೆನಪಿಸುತ್ತದೆ. ಇಲ್ಲಿಯ "ಬಿಟ್ಟಿ ಬಿಟ್ಟಿ ಬೆಳಗಾತು. ಕಟ್ಟೀಮನಿ ಹಾಳಾತು, ಪಟ್ ಪಟ್ ಫಜಾಗೋಲ"- ಎನ್ನುವ ಕವಿತೆಯ ಸಾಲುಗಳು ಕಣ್ಣುಮುಚ್ಚಾಲೆ ಆಟದಲ್ಲಿ ಬಾಲಕ ಬಾಲಕಿಯರು ಹೇಳುವ. ' ಕೊಕ್ಕಾ ಬಿತ್ತಿ, ಕ್ವಾಡಾ ಬತ್ತಿ, ಇವರ ಬಿಟ್ಟಿ ಇವರ್ಯಾರು ಅಥವಾ ಕದಲ್, ಬದಲ್, ಕಂಚಿನಬದಲ್, ಇವರ ಬಿಟ್ಟಿ, ಇವರ್ಯಾರು- ಎಂಬ ನುಡಿಯ ಧಾಟಿ ಲಯಗಳಿಂದ ಪ್ರೇರಿತವಾದಂತೆ ತೋರುತ್ತದೆ. "ಒಂದೂ ಎರಡೂ ಎಣಿಸುವ ಆಟ. ಕಲಿಸವ್ವಾ ತಾಯಿ"- ತುತ್ತಿ-ಇಳಿವಾಟ' (ಶ್ರೀಮಾತಾ) ಕವಿತೆಯಲ್ಲಿಯ ಅಂತ್ಯದ ಈ ಸಾಲುಗಳು ಶಿಶುಪ್ರಾಸದ ಮೋಡಿಯವು. 'ಹಾಳಿ ಹಡಗ' (ಉಯ್ಯಾಲೆ) ಕವನದ ಶಿರೋನಾಮೆ ಮಕ್ಕಳ ಕಾಗದದ ಹಡಗಿನಾಟವನ್ನು ಸೂಚಿಸಿದರೆ,

'ಬೋಲ ಭಗರಿ' (ಶ್ರೀಮಾತಾ) ಕವನದ ಹೆಸರು ಬಾಲಕರ 'ಭಗರಿ' ಆಟವನ್ನು ಸೂಚಿಸುತ್ತದೆ. ಅಷ್ಟೇ ಏಕೆ, ಸುಗ್ಗಿಯ ಪಕ್ಷದ ಭಿಂಗರಿ, ಬೊಗರಿ, ರವದಿ, ಕಸಕಡ್ಡಿ, ಮಾವಿನಪೀಪಿ, ಕುಂಟ್ಲಲಪಿ, ಗುಂಡಿನಾಟ, ಡೀಕಾಟ, ಕುಂಟಾಟ, ಬಾವಾಂಗಮಲಿ, ಕಣ್ಣುಮುಚ್ಚಣಿಕೆ, ಚಿಣಿಫಣಿ, ಚೆಂಡಾಟ, ಅನ್ನೇರಂಟೇಮಾಟ- ಇವೇ ಮುಂತಾದ ಬಾಲಕ-ಬಾಲಕಿಯರ ಆಟಗಳನ್ನು ಬೇಂದ್ರೆಯವರು ತಮ್ಮ ಭಾವಗೀತೆ ಗಳಲ್ಲಿ ಹೆಸರಿಸುತ್ತಾರೆ. ಈ ವೈನೋದಿಕ ಆಟಗಳನ್ನು ನೋಡಿ, ಆನಂದಿಸಲು ಪ್ರೇಕ್ಷಕರ ಅನಿವಾರ್ಯತೆಯನ್ನು ಕುರಿತು ಕವಿಗಳು ಬರೆಯುತ್ತಾರೆ." [10]

'ಗರತಿಯ ಹಾಡು' -ಸುಪ್ರಸಿದ್ಧ ಜಾನಪದ ತ್ರಿಪದೀ ಸಂಗ್ರಹಕ್ಕೆ ಬೇಂದ್ರೆ ತುಂಬ ಪ್ರೀತಿಯಿಂದ ಪರಿಚಯಾತ್ಮಕ ಮಾತುಗಳನ್ನು ಬರೆದಿದ್ದಾರೆ. ಇದರಲ್ಲಿಯ ತ್ರಿಪದಿಗಳು ಬೇಂದ್ರ ಅವರನ್ನು ಗಾಢವಾಗಿ ಆವರಿಸಿವೆ; ಬಿಡಿಸಲಾರದ ನಂಟನ್ನು ಬೆಳೆಸಿವೆ. ಬೇಂದ್ರೆ ಅವರಿಗೂ ಗರತಿ ಹಾಡುಗಳಿಗೂ 'ಅಂಟಿದ ನಂಟಿನ ಕೊನೆ ಬಲ್ಲವರಾರು'? ಎಂದು ನಮ್ಮಷ್ಟಕ್ಕೆ ನಾವೇ ಪ್ರಶ್ನಿಸಿಕೊಳ್ಳುವಂತಾಗಿದೆ. 'ಸಖೀಗೀತ' -ಕಥನಕಾವ್ಯದ ಸ್ವರೂಪ- ಲಕ್ಷಣವನ್ನು ವಿವರಿಸುವಾಗ, ಬೇಂದ್ರೆಯವರು-

"ಗರತಿಯರೆದೆಮಾತು", 'ನೆರೆಮಾತುಗಳ' ಬೆರೆತು
ಲಾವಣಿಯಲಂಕಾರದಲಿ ಹೊಂದಿದೆ
ಪಂಡಿತ-ಪಾಮರರಿಬ್ಬರ ನಾಲಿಗೆ-
ಯೊಳು ಒಡಂಬಡುವಂತೆ ರಂಜಿಸಿದೆ' ಎನ್ನುತ್ತಾರೆ.

ಇಲ್ಲಿಯ 'ಗರತಿಯರೆದೆಮಾತು, ನೆರೆಮಾತು'- ಶಬ್ದಪ್ರಯೋಗದ ಹಿಂದೆ 'ಗರತಿಯ ಹಾಡು' ಸಂಕಲನವೇ ಇದ್ದಂತೆ ತೋರುತ್ತದೆ.

ನನಗಿತ್ತು ಹೇಳಿವಾತು. 'ಸಖಿನುಡಿ'-ಸಖೀಗೀತದ ಈ ಮಾತುಗಳ ಮೇಲೂ 'ತ್ರಿಪದಿ ಸಂಗ್ರಹ' ದ ಪ್ರಭಾವ ಇದ್ದುದು ಸ್ಪಷ್ಟ. ಬೇಂದ್ರೆಯವರು ಜಾನಪದ ಸತ್ವದ ಯಾವುದೇ ಕವಿತೆ ರಚಿಸುವಾಗ, ಅವರ ಕಣ್ಮುಂದೆ ಈ 'ತ್ರಿಪದೀ ಸಂಗ್ರಹ' ಇದ್ದೇ ಇರುತ್ತದೆ. ಹೀಗಾಗಿ, 'ಗರತಿಯ ಹಾಡಿನ' ಸಂಗ್ರಹ ಬೇಂದ್ರೆಯವರ ಜಾನಪದೀಯ ಹಿನ್ನೆಲೆಯಲ್ಲಿ ಪ್ರಮುಖ ಪಾತ್ರವಾಗಿದೆ. ಇವರ 'ಜಾನಪದ ತ್ರಿಪದಿಗಳು' (ಶ್ರೀಮಾತಾ) ಮೂಲ ಸ್ಫೂರ್ತಿಯನ್ನು ಇದೇ ಸಂಗ್ರಹದಿಂದ ಪಡೆದದ್ದರಲ್ಲಿ ಸಂದೇಹವೇ ಇಲ್ಲ. ಗರತಿ ಹಾಡಿನ ಎಲ್ಲ ಲಕ್ಷಣಗಳನ್ನು ಇವರ ತ್ರಿಪದಿಗಳು ಒಳಗೊಂಡಿವೆ. ಉದಾಹರಣೆ, ಒಂದೆರಡು ನೋಡಬಹುದು.

ಚಿತ್ತೀಗೆ ನೋವಿಲ್ಲಾ । ತತ್ತೀಗೆ ಕಾವಿಲ್ಲ
ಬಿತ್ತಿಗ್ಯಾಗಿಲ್ಲಾ ಮಳಿಯಿಲ್ಲಾ। ಎತ್ತಿಗೆ
ಕತ್ತ ಎತ್ತಲು ಬಲವಿಲ್ಲಾ.

ಉಸಿರಿನ ಛಂದಕ್ಕ ಹೆಸರ್ಯಾಕ ದೆಸಿಯಾಕ
ಬೆಸಿಯಾಕ ಬಂದು ಬಯಲಾಟ। ಮುಟ್ಯಾಟ
ಹುಸಿಯಾಟ ಇಲ್ಲ ಹರಣಕ್ಕ

-ಜಾನಪದ ತ್ರಿಪದಿಗಳು (ಶ್ರೀಮಾತಾ)

ನಗಿಯಲ್ಲಿ ಹೂಗಿ ಬ್ಯಾಡ, ಹೂಗಿ ಹಿಂದ ಧಗಿ ಬ್ಯಾಡ
ಬಾಳಿಗೆ ಎರಡು ಬಗಿಬ್ಯಾಡ। ನನಗೆಣೆಯಾ
ಬ್ಯಾಸರಕಿ ಬ್ಯಾಡೊ ನಗುವಾಗ

-ಸೂಸಲನಗೆಯ ಸೂಕ್ತಿಗಳು(ಯಕ್ಷ-ಯಕ್ಷಿ)

'ಬೀಸುಕಲ್ಲಿನ ಪದ' 'ದೇಮುವ್ವನ ಮೆರವಣಿಗೆ' 'ನಾಕುತಂತಿ' ಗಳಲ್ಲಿಯ ಈ ಪದ್ಯಗಳು ಕೂಡ ಗರತಿಹಾಡಿನ ಗತ್ತಿನಲ್ಲಿವೆ. 'ಕಲ್ಲರಳು' -ಕವಿತೆ ಜನಪದ ತ್ರಿಪದಿ ಮಾದರಿಗೆ ಸ್ಪಷ್ಟ ನಿದರ್ಶನವಾದುದನ್ನು ಗಮನಿಸಿ:

ಕಲ್ಲರಳಿ ಹೂವಾಗಿ, ಕಮ್ಮಣ್ಣ ಮನೆ ತೊಳಗಿ
ನಮ್ಮ ನಿಮ್ಮನ್ನು ಬರಮಾಡಿ, ಘಮಘಮ
ಕಮ್ಮಗಿರಿಸ್ಯಾವ, ಕಲ್ಲರಳಿ.

-(ನಾಕುತಂತಿ)

'ಗರತಿ' ಹಾಡಿನಲ್ಲಿ ತಾಯಿಗೆ ಮಹತ್ವದ ಸ್ಥಾನವಿದೆ. ಹಾಗೆಯೇ ಬೇಂದ್ರೆ ಕಾವ್ಯದಲ್ಲಿಯೂ ತಾಯಿಗೆ ಹಿರಿಯ ಸ್ಥಾನ ದೊರೆತಿದೆ. ಜಾನಪದ 'ತಾಯಿ' ಯ ಪ್ರಭಾವವೇ ಇದು. 'ಅಂಬಿಕಾತನಯದತ್ತ' -ಎಂಬ ತನ್ನ ಕಾವ್ಯನಾಮದಲ್ಲಿಯೇ 'ತಾಯಿ' ಸಂಸ್ಕೃತಿಯನ್ನು ಅಡಗಿಸಿಟ್ಟಿದ್ದಾರೆ. ಪ್ರಸಂಗ ಬಂದಾಗಲ್ಲಿ ತನ್ನ ತಾಯಿ ಅಂಬಿಕೆಯನ್ನು ಬೇಂದ್ರೆ ಹಾಡಿ ಹೊಗಳಿದ್ದಾರೆ. ಅವಳ ಬಗೆಗೆ ತನ್ನ ಪ್ರಾಮಾಣಿಕ ಅನಿಸಿಕೆಯನ್ನು ಮಾರ್ಮಿಕವಾಗಿ ಬಿಂಬಿಸಿದ್ದಾರೆ. ತಾಯಿ ಅನುಗ್ರಹವೇ ತನ್ನ ಕಾವ್ಯಸೃಷ್ಟಿ ಎಂದು ನಂಬಿದ್ದಾರೆ. ಅಂತೆಯೇ, ಜಾನಪದ ಮನೋಧರ್ಮದ ಶೈಲಿಯಲ್ಲಿ ಅದನ್ನು 'ಅಂಬಿಕಾತನಯದತ್ತ' ಎಂಬ ಕವಿತೆಯ ಮೂಲಕ ಹೇಳಿಕೊಂಡಿದ್ದಾರೆ.

ನಿನ್ನ ತನುವಿನಿಂದ ಬಂದ ಮುದ್ದು ತನಯನೀತನು
ನೀನು ಈಯಲಿತ್ತನು
ನಿನ್ನ ಜನುಮದೊಂದು ಹಾಡುಹಾಡು ಆಗಿ ಮೂಡಿತು

ನನ್ನ ಕೊರಳು ಹಾಡಿತು
ಮೂರ್ತಿಗಾಗಿ ಮುಗಿದ ಕೈಯು ಗುಡಿಗೆ ಸಲ್ಲುವಂತೆಯೇ
ಎರಡು ಒಂದೆಂಬಂತೆಯೇ
ಹಾಡಲಾಗಿ ಕವಿಯು ಎಂದು ಜನವು ನನ್ನ ಕರೆದಿದೆ
ನಿನ್ನ ಹೆಸರು ಮರೆಗಿದೆ
ನಿನ್ನ ಲಲ್ಲೆಯಲ್ಲಿ ಹುಟ್ಟಿ ಬೆಳೆದು ಬಂದ ಸೊಲ್ಲಿದು
ಬೇರೆ ಏನು ಬಲ್ಲದು ?

. . . .

ತಾಯಿ ಮಾಯೆ ಅಂಬಿಕೆಯೇ ನಿನ್ನ ತನಯದತ್ತನು
ನೀನು ಇತ್ತುದಿತ್ತನು
ನಿನ್ನ ಹೆಸರಿನಲ್ಲಿ ನಾನು ಬರೆವುದೇನು ಸೋಜಿಗ
ತಿಳಿಯಲಾರದೀ ಜಗ.

೫. ದೈವೀಶ್ರದ್ಧೆ - ನಂಬಿಕೆ

ಉತ್ತರ ಕರ್ನಾಟಕದ ಸರಳ-ನಿರಾಡಂಬರ ಉಡುಪು-ತೊಡುಪು, ಸಹಜವಾದ ಮಾತು ಕತೆ, ಮುಕ್ತ ಚರ್ಚೆ, ಹಾದಿಹರಟೆ, ನಿರ್ಭಿಡೆ, ವಿಶಿಷ್ಟ ರೀತಿಯ ಹಾವ-ಭಾವ, ಸಾಂಪ್ರದಾಯಿಕ ಮನೋಧರ್ಮ ಮೊದಲಾದವುಗಳೇ ಬೇಂದ್ರೆಯವರನ್ನು ಅಪ್ಪಟ ಗ್ರಾಮೀಣ ವ್ಯಕ್ತಿಯನ್ನಾಗಿಸಿವೆ. ಬೇಂದ್ರೆ ವ್ಯಕ್ತಿತ್ವದ ಅನೇಕ ಮುಖಗಳಲ್ಲಿ, ಈ ಗ್ರಾಮೀಣ ವ್ಯಕ್ತಿತ್ವ ಪ್ರಮುಖವಾದುದು. ಇದುವೇ ಶ್ರುತಿಗೂಡಿ ಕವಿತ್ವವಾಗಿದೆ. ಜಾನಪದರಂತೆ ದೇವರು-ಧರ್ಮದಲ್ಲಿ ಬೇಂದ್ರೆಯವರಿಗೆ ಅಚಲ ನಿಷ್ಠೆ, ನಂಬಿಕೆ. ಅಂತೆಯೇ ಅವರು 'ಧಾರವಾಡದ ತಾಯಿ', ಸೋಮೇಶ್ವರ, ಸೊನ್ನಲಾಪುರದ ಸಿದ್ಧರಾಮ, ಪುರಂದರವಿಠ್ಠಲ, [illegible]

ಗಣಪತಿ, ದತ್ತಾತ್ರೇಯ, ಉಡುಪಿಯ ಕೃಷ್ಣ-ಮುಂತಾದ ದೈವಗಳನ್ನು ಕವನೀಕರಿಸಿ, ಅನನ್ಯ ಭಾವನೆಯಿಂದ ಆರಾಧಿಸಿದ್ದಾರೆ. ಇವರು ಈ ದೈವಗಳ ಕೃಪೆ, ಅನುಗ್ರಹ, ಸಾಕ್ಷಾತ್ಕಾರ ತನ್ನ ಸಿಡುಕಿನ ಬದುಕಿಗೆ ಊರುಗೋಲಾಗಲಿ ಎಂದು ಅಪೇಕ್ಷಿಸುತ್ತ, ನಿರೀಕ್ಷಿಸುತ್ತ ಬಂದವರು. "ಗಂಗೆ ನೀನು ಗೌರಿ ನೀನು." ಎನ್ನಿಸಿಕೊಂಡ, ತಾನು ನಂಬಿದ ಧಾರವಾಡದ ತಾಯಿ ದುರ್ಗಾದೇವಿಯಲ್ಲಿ ಕವಿಗಳು 'ನನಗಾಧಾರ ನಿನ್ನದಲ್ಲದಿಲ್ಲ.' ಎಂದು ಬಾಯ್ತುಂಬ ಬೇಡಿಕೊಳ್ಳುತ್ತಾರೆ. 'ಅಂಬಿಕಾತನಯನು ನಿನ್ನ ನಂಬಿ ಇನ್ನೂವರೆಗೂ ಇರುವ, ಜಂಭ ನೀನೇ ತಾಯಿ' ಎಂದೂ ಮೊರೆ ಹೋಗುತ್ತಾರೆ. ಇವರು ದೇವರನ್ನು ಕೃಷ್ಣನನ್ನು ನಂಬಿದವರು. ಶ್ರದ್ಧೆಯುಳ್ಳವರು. ದೇವರು ಎಂಬುದೇ ಬೇಂದ್ರೆಯವರಿಗೆ ಭಾಗ್ಯ. ಅದನ್ನು ಪಡೆಯಬೇಕಾದರೆ ಜೀವ-ಭಜನೆಯನ್ನು ಮಾಡಬೇಕು. ದೇವ-ಜೀವ ಹೊಂದಿಕೆಯ ಚಿಂತನವನ್ನು ಮಾಡುವುದೇ ಬೇಂದ್ರೆ ಜೀವನದ ಕಾವ್ಯದ ರಹಸ್ಯವಾಗಿದೆ." [೨೧]

ಬೇಂದ್ರೆಯವರ ದೈವೀಭಾವ ಅವರ ಅನೇಕ ಕವನಗಳಲ್ಲಿ ಕಂಡುಬರುತ್ತದೆ. ಜಾನಪದ ದೇವ-ದೇವಿಯರ ಉಪಾಸನೆ, ಪುಣ್ಯಕ್ಷೇತ್ರಗಳ ಮಹಿಮೆ- ದರ್ಶನ, ಕನಸು, ಶಕುನ ಜ್ಯೋತಿಷ್ಯ, ಪಂಚಾಂಗ, ತಾರಾಬಲ, ಚಂದ್ರಬಲ, ಜಪತಪ, ದೃಷ್ಟಿಯೋಗ, ಪೂರ್ಣಯೋಗ- ಮುಂತಾದವುಗಳಲ್ಲಿ ನಂಬಿಕೆಯಿರಿಸಿ, ಪಾಲಿಸುತ್ತಿದ್ದರು. ಕಂಡಕಂಡಲ್ಲಿ ಕೈಮುಗಿಯುವ, ತಲೆಬಾಗುವ, ಮಂದಿಯೂರುವ, ಮುಂದಲೆ ನೀಡುವ, ಗ್ರಾಮೀಣರ ಪಾರಂಪರಿಕ ರೂಢಿ ಆಚರಣೆಗಳಲ್ಲಿ ಕವಿ ಶ್ರದ್ಧೆಯುಳ್ಳವರು. ಆದರೆ ಮೂಢ ಭಕ್ತರಾಗಿರಲಿಲ್ಲವೆಂಬುದು ಅಷ್ಟೇ ಗಮನಾರ್ಹ. ಭೂತ-ಪ್ರೇತ,

ಅಲೌಕಿಕ, ಅನುಭಾವ, ಪುನರ್ಜನ್ಮಗಳಲ್ಲಿ ಕವಿಗಳಿಗೆ ಅಪಾರ ನಂಬಿಕೆ. ಜನಪದ ಗರತಿಯರು ಹಾಗೂ ಜನತೆ ನಂಬಿರುವ ಹಲವಾರು ನಂಬಿಕೆಗಳನ್ನು ಕವನಗಳಲ್ಲಿ ಕವಿಗಳು ಉಲ್ಲೇಖಿ ಸುತ್ತಾರೆ. ಈ ಜನಪದ ನಂಬಿಕೆಗಳು ಮೂಢನಂಬಿಕೆಗಳಾ ಗಿರಬಹುದು; ವೈಜ್ಞಾನಿಕ ನಂಬಿಕೆಗಳೂ ಆಗಿರಬಹುದು. ಉದಾ ರಣೆಗೆ ಕೆಲವನ್ನು ಕೊಡಲಾಗಿದೆ:

'ಗ್ರಹಣದ ದಿವಸ ಕಾಡಿಗೀ ಹಚ್ಚಿ ಗಾಜು ನೋಡ್ತಾರೆ'

ಲೋಕರೂಢಿ (ಶ್ರೀ ಮಾತಾ)

'ಅಂಜನ ತೋರುವ ನವ ತವನಿಧಿ' -(ಮತ್ತೆ ಶ್ರಾವಣಾ ಬಂತು); 'ಬಂದಾರೆ ಬರ್ರೆವ್ವ, ಕಂದನ್ನ ತರ್ರವ್ವ ಅಂಜೀಕಿ- ಗಿಂಜೀಕಿ- ಕೊಂದಾನ, ರೋಮ ರೋಮಗಳಲ್ಲಿ ಭೀಮ ರಕ್ಷಿಯ ಬಲ ಕೊರಳಾಗ ಕಟ್ಟಿರಿ ಬಂದಾನ' - (ಕರಡಿ ಕುಣಿತ).

'ಮಲಗಿರುವ ಕೂಸು ಮಲಗಿರಲಿ ಅಲ್ಲಿ ಮುಂದಿನದು ದೇವರ ಚಿತ್ತ' -ನೀ ಹಿಂಗ ನೋಡಬ್ಯಾಡ ----- ವಿಧಿ ತಂದ ವಧು ನೀನು' - (ಸಖೀಗೀತ) , ''ದೈವದ ಪುತ್ಥಳಿ------- (ಬೇಂದ್ರೆ ಪತ್ನಿ) - (ಸಖೀಗೀತ) 'ಅಯ್ಯೋ ದೇವರೆ! ಎಂದು ಸಂಕಟಿಕೆ ಕೂಗಿದ್ದೆ. ಆ ದೇವನೋಗೊಟ್ಟನು.' 'ಪುಣ್ಯವ ಪಡೆದವರೊಲು ಗೆದ್ದರು.' 'ಆಳುವರ ಮೇಲೊಬ್ಬ ಆಳುವನಿರದಿರೆ ಹಾಳಾಗಿ ಹೋಗಿತ್ತು ಈ ಜಗವು.' 'ದಿಕ್ಕಿಲ್ಲದವರಿಗೆ ದಿಕ್ಕಾಗಿ ನಿಂತವನ ಧ್ರುವನೊಡೆಯನ (ಸಖೀಗೀತ) ಹೀಗೆ ಕವಿ ಉಲ್ಲೆಖಿಸಿದ ಜನಪದ ನಂಬಿಕೆಗಳ ಒಂದು ಪಟ್ಟಿಯನ್ನೇ ಕೊಡಬಹುದು. ಅಷ್ಟೊಂದು ಹೇರಳವಾಗಿ. ಜನಪದದಲ್ಲಿ ಜನಜನಿತವಾದ ನಂಬಿಕೆಗಳನ್ನು-ಅವುಗಳ ಮೂಲ ರೂಪದಲ್ಲಿ ಹಾಗೂ ಅಲ್ಪಸ್ವಲ್ಪ ವ್ಯತ್ಯಾಸಗಳೊಂದಿಗೆ. ಬೇಂದ್ರೆಯ ವರು ನಿಶ್ಚಿತ ಉದ್ದೇಶಕ್ಕಾಗಿ ತಮ್ಮ ಕವಿತೆಗಳಲ್ಲಿ ಬಳಸುತ್ತಾರೆ.

೬. ಲಾವಣಿ

ಜಾನಪದದ ಪ್ರಮುಖ ಕಾವ್ಯ ಪ್ರಕಾರವಾದ ಲಾವಣಿ. ಹಾಗೂ ಅದರ ಗತಿ-ಗತ್ತಿನಿಂದಲೂ ಬೇಂದ್ರೆಯವರ ಕಾವ್ಯ ಪ್ರಭಾವಿತವಾಗಿದೆ. ಜನಪದ 'ಲಾವಣಿ' ಮಾದರಿಯಲ್ಲಿ ರಚಿತವಾದ ಬೇಂದ್ರೆ ಕವನಗಳನ್ನು ಗಮನಿಸಿದರೆ. ಬೇಂದ್ರೆಯವರು ಒಬ್ಬ ಅಪ್ಪಟ 'ಲಾವಣಿ' ಕವಿಯಂತೆಯೇ ತೋರುತ್ತಾರೆ. ಇವರಲ್ಲಿ 'ಲಾವಣಿ' ರೂಪದ ಭಾವಗೀತೆಗಳು ಅಪಾರವಾಗಿದೆ. ಲಾವಣಿಯ ಗತಿ-ಗತ್ತಿನಲ್ಲಿಯೇ ಸಾಗುವ ಬೇಂದ್ರೆ ಗೀತೆಗಳು ಭಾವಗೀತೆಗಳೆಂಬುದನ್ನು ಮರೆಯಿಸುವಷ್ಟರಮಟ್ಟಿಗೆ, ಲಾವಣಿಯಿಂದ ಪ್ರಭಾವಗೊಂಡಿವೆ. ಇವರ ಕೆಲವು ಕವಿತೆಯ ಕೆಲವು ಸಾಲುಗಳು. 'ಲಾವಣಿ' ಸಾಲುಗಳಿಂದ ನೇರ ಪ್ರಭಾವ ಹೊಂದಿರುವುದನ್ನೂ ಕಾಣುತ್ತೇವೆ. 'ನಡಿಗೆಯೊಳಗಿನ ಡೌಲು ಕಂಡು ನಾಚಿತು ನವಿಲು' (-ರವದಿ-ಸಖೀಗೀತ ಪು:೬೩) -ಬೇಂದ್ರೆಯವರ ಈ ಕವಿತೆಯ ಸಾಲು "ನಿನ್ನ ನಡಿಗಿ ನೋಡಿ ನವಿಲು ಕುಣಿವುದ ಮರೆತಿತರಿ."[೨೨] ಎಂಬ ಲಾವಣಿಯ ಸಾಲಿನಿಂದ ನೇರ ಪ್ರಭಾವಕ್ಕೊಳಗಾಗಿದೆ.'ಸಚ್ಚಿದಾನಂದ' (ನಾದಲೀಲೆ) ಕವಿತೆಯ-

'ತೆರಿ ತೆರೀ ನಿನ್ನ ಎದಿಕದಾ
ಬಂದಿತ ಹದಾ
ಕೇಳ ಈ ಪದಾ|ಕೇಳ ಈ ಪದಾ'

ಸಾಲುಗಳು ಲಾವಣಿಯ ಗತಿಯನ್ನೇ ಅನುಸರಿಸಿ ಸಾಗಿದೆ. 'ಕುಣಿಯೋಣ ಬಾರ' (ಗರಿ) ಕವಿತೆಯ

'ತರಗೆಲೆ ಜಿಗಿದಾಂಗ
ಚಿಗುರೆಲೆ ಚಿಗಿತ್ಯಾಂಗ
ನನಿಕೊನೆ ಮುಗಿದಾಂಗ'

ಸಾಲುಗಳ ಮೇಲೆ, ಜನಪದ ಕವಿ 'ಸಂಗಣ್ಣನ' ಕೆಳಗಿನ ಲಾವಣಿಯ ಲಯ-ಛಂದಸ್ಸುಗಳ ನೇರ ಪ್ರಭಾವವನ್ನು ಗುರುತಿಸ ಬಹುದು.

ಪುಗಡಿ ಆಟ ಏನ ಹೇಳಲಿ | ತಾಳಗತ್ತ ಮಾಡಿದಂಗ
ನಗಾರಿ ನುಡಿದಾಂಗ | ದುಮಿದುಮಿ ಹೊಡಿದಂಗ
ನೌಬತ್ತ ಬಡಿದಾಂಗ |ಚಿಟ್ಟ ಔಡ್ಲ ಸಿಡಿದಂಗ.

-ಗೋಕುಲಾಷ್ಟಮಿ (ಜೀವನ ಸಂಗೀತ)

ಲಾವಣಿಯ ಏರು-ಇಳುವುಗಳನ್ನು 'ಕುಣಿಯೋಣಬಾರ' ಕವಿತೆಯಲ್ಲಿ ಕಾಣಬಹುದು.

ಲಾವಣಿಯ ಲಯ, ಧಾಟಿ, ಗತ್ತು ಕೂಡ ಬೇಂದ್ರೆ ಕಾವ್ಯದ ಮೇಲೆ ಪ್ರಭಾವ ಬೀರಿದೆ ಎಂಬುದಕ್ಕೆ ಮತ್ತೊಂದು ಉದಾಹರಣೆ ನೋಡಬಹುದು.

ಬೆಳದಿಂಗಳ ನೋಡ
ಬೆಳದಿಂಗಳ ನೋಡ
ದನಕರದ ಕಾಲಿನ ಧೂಳಿ
ಸಂಜೆಯ ಹೂಳಿ
ಮುಗಿಲ ಮುಟ್ಟಿದ
ಮುಗಿಲ ಮುಟ್ಟಿದ

-ಬೆಳದಿಂಗಳ ನೋಡ (ನಾದಲೀಲೆ)

ಕವನದಲ್ಲಿ, 'ಖಾಜಾಸಾಹೇಬನ' -

'ಹೆಣ್ಣಸಲಜಾತ ಪದ್ಮಿನಿ! ಸುರತ ಚಂದ್ರಿಣೀ!
ಹೊಂಟೆ ನಾಗಿಣೆ! ನೋಡ ತಿರುಗೀ!
ಮುಗುದರಿ ಕುಣಿಸಿದಂಗ ನಾಜೂಕ ನಿನ್ನ ನಡಿಗಿ
ಹೊಳಿನೀರ ಥರಿಯ ಹೊಡಿದಂಗ ಒದುತ ನಿಲಗೀ'
-ಅಸಲಜಾತಹೆಣ್ಣು (ಜೀವನಸಂಗೀತ)

ಲಾವಣಿಯ ಗತ್ತು, ಲಯ, ಛಂದಸ್ಸುಗಳ ಪ್ರಭಾವ ಕಂಡಬರುತ್ತದೆ. 'ಕುಣಿಯೋಣಬಾರ,' 'ಸಂಜೆ' ಮೊದಲಾದ ಕವಿತೆಗಳಲ್ಲಿಯೂ, ಮೇಲಿನ ಲಾವಣಿಯ ಛಂದಸ್ಸು ಮತ್ತು ಭಾಷೆಯ ಸಂಸ್ಕಾರಗೊಂಡ ರೂಪವಿದ್ದುದು ಗಮನೀಯ. 'ಯಾವೂರಾಕಿ-ನೀಮಾಯಕಾರತಿ' (ಪರಾಕಿ) ಕವಿತೆಯ ಕೊನೆಯ ಹತ್ತು ಸಾಲುಗಳೂ ಥೇಟ ಲಾವಣಿ ಆಗಿದೆ. 'ಯಮಕಾ-ಗಮಕಾ' (ಪರಾಕಿ) ಪದ್ಯವೂ ಲಾವಣಿಯ ಗತಿಯಲ್ಲಿಯೇ ಸಾಗುತ್ತದೆ-'

'ಎಂಥಾ ಛಂದದ ನಡಿಗಿ, ಎಂಥಾ ಬಂಧದ ಉಡಗಿ
ಎಂಥಾ ಪಂಥಾ ಅಂತ ಧ್ಯಾನಾ ಮಾಡಿ
ಆs ಅಂದು ಧನೀ ತಗದು ಸಿಗದ ಬದುಕು ಸಿಗಲಿ ನಗದು
ಸ್ಕೋರ್ ಹಚ್ಚಿ ನೋಡೇವು ಹ್ಯಾಂಗೋ ಹಾಡಿ;

'ದವನದ ಹುಣ್ಣಿಮೆಯ ಜಾತ್ರೆಯ ರಾತ್ರಿ' ಕೊಳಲನೂದಿದ, ಶ್ರವಣ, ಉಪಸೂಕ್ತ, ಬರತೇವಿನ್ನ, ಹಾ! ಆನಂದ, ಕವಿಗಳ ಕಾಣಿಕೆ (ಪಾಡು-ಪಾಡು), ಜನಸಾಮಾನ್ಯ ಅಲ್ಲಾ, ಕವಿಗಳ ಕಾಣಿಕೆ (ಶ್ರೀ ಮಾತಾ), ಓ ತಾಯಿ ಮಾಯಿ. ನಾಲ್ವರು ತಾಯಂದಿರು (ಹೃದಯ ಸಮುದ್ರ). 'ಕುಡೀಲಿಕ್ಕೆ

ಹತ್ತೀದ್ಯಣ್ಣಾ, ದಿನಾ ಒಂದು ಹಾಡು (ಮತ್ತೆ ಶ್ರಾವಣಾ ಬಂತು) 'ಜಾನಪದ ಅನುಭಾವಿಯ ಹಾಡು,' ದುರ್ವಾಸ, 'ಸಂಜೀಯ ಜಾವಿಗೆ' (ಗಂಗಾವತರಣ) ಮೊದಲಾದ ಕವಿತೆಗಳ ಉದ್ದಕ್ಕೂ ಜಾನಪದ ಲಾವಣಿಯ ನಡಿಗೆಯನ್ನೇ ಕಾಣುತ್ತೇವೆ. 'ನಮ್ಮ ಕೊನೆಯ ಶರಣು' (ಉತ್ತರಾಯಣ), 'ನಾವು ಬರತೇವಿನ್ನ,' 'ಕವಿಗಳ ಕಾಣಿಕೆ' -ಮುಂತಾದ ಪದ್ಯಗಳು ಇಡಿಯಾಗಿ ಲಾವಣಿ ಛಂದದಲ್ಲಿವೆ ಎಂದು ಸ್ವತ: ಬೇಂದ್ರೆಯವರೇ ಹೇಳುತ್ತಾರೆ; ನೋಡಿ-

ನಾವು ಬರತೇವಿನ್ನ ನೆನಪಿರಲಿ ತಾಯಿ
ನಂ ನಮಸ್ಕಾರ ನಿಮಗೆ
ಕಾಯ್ದಿರಿ ಕೂಸಿನ್ಹಾಂಗ ನಮಗ
ನಾವು ಬರತೇವಿನ್ನ
'ಶಬ್ದದ ಚಲಾವಣೇವಳಗ
ಹೃದಯದ ಲಾವಣೀಧನೀ ಇರ್ತದ
ಅದು ಒಲವು ಇದ್ದಲ್ಲೆ ಬರ್ತದ
ಎಚ್ಚರ ಇದ್ದಾವ್ನನ್ನು ಅರ್ತದ
ನಿದ್ದೀ ಮಾಡುವ್ನನ್ನ ಮರ್ತದ

- ಕವಿಗಳ ಕಾಣಿಕೆ (ಶ್ರೀ ಮಾತಾ)

೭. ಜಾನಪದ ಪರಿಸರ- ರೀತಿ

'ಗಂಗಾವತರಣ'ದಲ್ಲಿಯ 'ಕಡಲ ಅಂಬಿಗರ ಹಾಡಿನ,' 'ಏ! ಲೇಲಾಲಿಲೇಸೋ! ಲೇಲಾಲಿ ಲೊ-ಪಡುವಲ ಕಡಲ ಅಂಬಿಗರ ಹಾಡಿನ ಪಲ್ಲವಿಯಾಗಿದ್ದು, ಜನಪದ ಲಯವನ್ನು ಒಳಗೊಂಡಿದೆ.

'ಸಂಚಯ'ದಲ್ಲಿಯ 'ಮಲೆನಾಡ ಸೆರಗು' ಕವಿತೆಯ 'ಏನು ಅಂದವೊ! ಆಹಾ! ಎನಿತು ಚೆಂದವೊ'!! ಪಲ್ಲವಿ ಕೂಡ ಜನಪದ ಲಯದ್ದು. ಹಾಗೆಯೇ ಜಾನಪದ ಭಾವದ 'ಶುಭ ನುಡಿಯೇ ಶಕುನದ ಹಕ್ಕಿ' ಕವಿತೆಯಲ್ಲಿ, ಶುಭನುಡಿಯೇ ಶುಭನುಡಿಯೇ ಶಕುನದ ಹಕ್ಕಿ! ಶುಭ ನುಡಿಯೇ'-ಪಲ್ಲವಿಯಂತೆ ಬಳಕೆಗೊಂಡಿದೆ. 'ಘಜಾರಗಟ್ಟಿಮುಟ್ಟೋಣ ಬಾ.' ಬರುವದೇನ ನೆಪ್ಪಿಗೆ. ಗಮುಗಮಾ ಗಮಾಡಿಸತಾವ ಮಲ್ಲೀಗಿ, ಬಾರೆ ಸಾಧನಕೇರಿಗೆ. (ಗಂಗಾವತರಣ), ಜಾನಪದ ಅನುಭಾವಿಯ ಹಾಡು. ಒರದಾ ತಗಣಿಯ ಒರದಾ (ಸಂಚಯ) 'ಶುಭನುಡಿಯೆ ಶಕುನದ ಹಕ್ಕಿ.' ಎದೆಯ ಒಕ್ಕಲಿಗ. ಬನ್ನಿ ಬನ್ನಿ ಕನಸುಗಳೇ ಯಾರಿಗೂ ಹೇಳೋಣು ಬ್ಯಾಡ' (ನಾದಲೀಲೆ) ಮೊದಲಾದ ಬೇಂದ್ರೆಯವರ ಕವಿತೆಗಳ ಹೆಸರೇ ಜಾನಪದ ಮೂಲವನ್ನು ಸೂಚಿಸುತ್ತವೆ. ಜಾನಪದ ಪ್ರಜ್ಞೆಯುಳ್ಳ ಕವಿ, ಪ್ರಜ್ಞಾಪೂರ್ವಕವಾಗಿಯೇ ಕವಿತೆಗಳ ತಲೆಬರಹವನ್ನು ಮೇಲಿನಂತೆ ಕೊಟ್ಟುಕೊಂಡಿದ್ದಾನೆ. ಅಲ್ಲದೆ, 'ಚಿಟಗುಬ್ಬಿ ಚಿಂವು ಚಿಂವು' ಇರತಾನೊ ದೇವರಿರತಾನೊ. ಸಂಜೀಯ ಜಾವಿಗೆ. ಹಳ್ಳದ ದಂಡ್ಯಾಗ, ಯಾರಾಕೆ? ನಂದು ಅಂಬೋದು ನಿಂದಲ್ಲ, ಯಾಕ ಅಂದರ ಯಾಕ ಗೋದಾಂಜಿ ನಾಯಕನ ಲಾವಣಿ (ಪ್ರತಿಬಿಂಬಗಳು) ಯಾವುದಾಗೀ ನೀ ಮಾಯಕಾರತಿ? (ಪರಾಕಿ), ದೇಮವ್ವನ ಮೆರವಣಿಗೆ (ನಾಕುತಂತಿ) -ಮುಂತಾದ ಕವಿತೆಗಳ ಶಿರೋನಾಮೆಗಳು ಜಾನಪದೀಯ ಸತ್ವವನ್ನೊಳಗೊಂಡಿವೆ, ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಹಾಗೆಯ ಕುಣಿಯುವಿಕೆಯ ದೃಶ್ಯ 'ಕುಣಿಯೋಣ ಬಾ' ಕವಿತೆಗೆ ಪ್ರೇರಣೆಯಾದಂತೆ, ಜೇನ್ನೊಣ ಗುಂಯ್ಗುಡುತ್ತ ಸುಳಿದಾಡಿದ್ದು ಭೃಂಗದ ಬೆನ್ನೇರಿ ಕವಿತೆಗೆ ಹಿನ್ನೆಲೆಯಾಗಿದೆ, ಅದರಂತೆ,

ಕರಡಿಕುಣಿತ, ಪಾತರಗಿತ್ತಿಪಕ್ಕ, ಧಾರವಾಡದ ದೀವಿಗೆ, ಬೆಳದಿಂಗಳನೋಡ, ತಳ್ಳದ ದಂಡ್ಯಾಗ, ಬೆಟಗುಬ್ಬಿ, ಬೆಂವು ಬೆಂವು, ಜೋಗಿ, ಮಾಯಾ ಕಿನ್ನರಿ, ಸಂಜೀಯ ಜಾವಿಗೆ ಮೊದಲಾದ ಕವಿತೆಗಳಿಗೆ ಜಾನಪದ ಪರಿಸರದ ಪ್ರಭಾವದ ಹಿನ್ನೆಲೆಯಿರುವುದು ಗಮನೀಯ. ಗುರುದೇವ, ಮಾಯಾಕಿನ್ನರಿ, ಪುಟ್ಟವಿಧವೆ, ಸ್ವರೂಪ ದೀಪ, ಕುರುಡು ಕಾಂಚಾಣ, ತುತ್ತಿನಚೀಲ, ಕರುಳಿನ ವಚನಗಳು, ಕೆಲವು ಸುನೀತಗಳು, ಜೋಗಿ, ಬೆಳಗು, ಸಣ್ಣಸೋಮವಾರ, ಶ್ರಾವಣ-ಇತ್ಯಾದಿ- ಬೇಂದ್ರೆಯವರಿಗೆ ಪ್ರಸಿದ್ಧಿಯನ್ನು ತಂದುಕೊಟ್ಟ ಕವಿತೆಗಳಿಗೆ ಸಂಪೂರ್ಣವಾಗಿ ಜಾನಪದ ವಾತಾವರಣವೇ ಸ್ಫೂರ್ತಿಬೆಲುಮೆ. ಅಂತೆಯೇ ಬೇಂದ್ರೆಯವರ ಈ ಬಗೆಯ ಕವಿತೆಗಳು, ಜಾನಪದೀಯ ವಿವಿಧಾಂಶಗಳನ್ನು ಪ್ರಭಾವಶಾಲಿಯಾಗಿ ಬಳಸಿಕೊಂಡಿವೆ.

ದೇಶಕ್ಕೆ, ಗ್ರಾಮಕ್ಕೆ 'ಜಯವಾಗತೈತಿ', 'ಜಯವಾಗತೈತಿ' ಎಂದು ಹರಸುತ್ತ, 'ಭವಿಷ್ಯವಾಣಿ'ಹೇಳುತ್ತ, ಪಕ್ಕಿಶಕುನ ನುಡಿಯುತ್ತ, ಬೀದಿ ಬೀದಿ ತಿರುಗಿ ಉಪಜೀವನ ನಡೆಯಿಸುವ, ಗ್ರಾಮೀಣ ಕಲಾವಿದ 'ಬುಡಬುಡಕಿ' ಅಥವಾ 'ಕಿಡಬುಡಕಿ', ಈತನ ಹರಕೆಯ ಮಾತು, 'ಜಯವಾಗತೈತಿ' ಎಂಬುದು, ಬೇಂದ್ರೆಯವರ 'ಮರ್ಯಾದೆ' -ಸಂಕಲನದ ಒಂದು ಪದ್ಯದ ಶಿರೋನಾಮೆಯಾಗಿದೆ.

'ಹಾಲಕ್ಕಿ ನುಡಿಯುತಿದೆ ಜಯವಾಗತೈತಿ
ನಾಡಾಡಿ ಬುಡಬುಡಿಕೆಯಲ್ಲ
ಇದು ದೇವವಾಣಿಯು ಒಡಂಬಡಿಕೆ'

ಬುಡಬುಡಕಿಯನ್ನು ಗಮನದಲ್ಲಿರಿಸಿಕೊಂಡು ಸಾಗುವ ಈ ಪದ್ಯದಂತೆ 'ಶ್ರೀ ಮಾತಾ'-ಸಂ... ...ನದಲ್ಲಿಯ 'ಯುಗಾದಿ'

ದ ನ ಸಂಪೂರ್ಣವಾಗಿ. ಜಾನಪದ ಪರಿಸರ-ರೀತಿಗಳನ್ನು
ಳಪಡಿಸಿಕೊಂಡುದನ್ನು ನೋಡಿ:

ಜಗಕ್ಕ ಆದಿ ಇಲ್ಲಾ, ಮುಗಿಲಿಗೆ ಅಂತ ಇಲ್ಲಾ,
ನೆಲೀ ಹತ್ತ್ಯದ ಯುಗಾನುಯುಗಾ ಯುಗಾದಿ ಮಾಡ್ತದ
ಮಾಡಸ್ತದ
ಬೇವಿಗ ಬೆಲ್ಲಾ ತಿನಸ್ತದ
ಕಹೀಗೆ ಕಹಿ ಅನಸ್ತದ
ಹೋಳಿ ಹುಣ್ಣಿವಿ ರಂಗು ಮುಗಿಸಿ,
ಚೈತ್ರಗೌರಿ ಪಾನಕಾ ಕುಡಸ್ತದ
ಶಿವಶಕ್ತಿ ಹರಕಿ,
ಕಾಮರತಿ ಶೃಂಗಾರ ಬಡಸ್ತದ
ಇದು ಓಡದಾವ್ರಿಗೆ ಓಡಸ್ತದ
ಎಲ್ಲಾ ಬಿಟ್ಟಾವ್ರಿಗೆ ಏನ ಹಿಡಸ್ತದ ?

. . . .

ಬೀಜದಾಗ ಗಿಡಾ ಇರ್ತಾವ ಗಿಡದಾಗ ಬೀಜ ಇರ್ತಾವ

. . . .

ಯುಗಾದಿಗೆ ಶಗಾದಿ ಅಂತ ಕುಂತಾರ

. . . .

ಮನೀ ಮುರ್ಕ್ಯಾ ಜನಾ

. . . .

ಬಂಟರು ನೆಂಟರು ಅಲ್ಲೀಕೇರಿ ನಡಸ್ತಾರ.

ಹೀಗೆ, ಜಾನಪದ ಪರಿಸರ ಪ್ರೇರಿತ, ಬೇಂದ್ರೆಯವರ ಕವಿತೆಗಳಿಗೆ ಕೊರತೆಯಿಲ್ಲ.

'ಕುರುಡು ಕಾಂಚಾಣ'ದಂಥ ಸಮಾಜದ ಕಟುಸತ್ಯವನ್ನು ಹೇಳುವಾಗ, ಹಳ್ಳಿಯ ವೇಶ್ಯೆಯೊಬ್ಬಳ ಬಾಳಿನ ದಾರುಣ ಚಿತ್ರವನ್ನು ಚಿತ್ರಿಸುವಾಗ (ಬೀದಿನಾಯಿ ರಾಧೆ) ನರರ ಬುದ್ಧಿಯ ಕುಣಿತದ ಚಪಲತೆಯನ್ನು ಬಣ್ಣಿಸುವಾಗ (ಕರಡಿ ಕುಣಿತ) 'ಪುಟ್ಟ ವಿಧವೆ'ಯ ಹೃದಯವಿದ್ರಾವಕ ಚಿತ್ರವನ್ನು ನೀಡುವಾಗ, -ಬೇಂದ್ರೆಯವರು ಜಾನಪದ ಶೈಲಿಯನ್ನೇ ಬಳಸುತ್ತಾರೆ. ಕಾವ್ಯದ ಶ್ರೇಷ್ಠತೆ ವಸ್ತುವಿನಲ್ಲಿಲ್ಲ. ಅದನ್ನು ನಿರೂಪಿಸುವ ವಿಧಾನದಲ್ಲಿ, ಅದು ನೀಡುವ ಪರಿಣಾಮದಲ್ಲಿ ; ಬೇಂದ್ರೆಯವರ ಉತ್ತಮ ಕಾವ್ಯವೆಲ್ಲ ಬಹುಮಟ್ಟಿಗೆ ಜಾನಪದ ಮೋಡಿಯಲ್ಲಿಯೇ ಅಭಿವ್ಯಕ್ತವಾದುದು. ನಾಡು ನುಡಿ ಪ್ರೇಮ, ಪ್ರಕೃತಿ ಪ್ರೇಮ, ಬದುಕಿನ ಪ್ರೀತಿ-ಯಾವುದೇ ಬಗೆಯ ಕವನ ರಚಿಸಿದರೂ, ಅಲ್ಲೆಲ್ಲ ಬೇಂದ್ರೆಯವರ ಜಾನಪದ ಮೋಡಿ- ಜಾನಪದ ಸಂಸ್ಕಾರವನ್ನು ಗುರುತಿಸಬಹುದು. ಬೇಂದ್ರೆಯವರ ಪ್ರೇಮಗೀತೆ ಮತ್ತು ಹಾಸ್ಯ ಗೀತೆಗಳಲ್ಲಿವೂ ಅಪ್ಪಟ ಜಾನಪದ ಶೈಲಿಯವು. ಆದುದರಿಂದಲೇ ಜಿ.ಎಸ್.ಶಿವರುದ್ರಪ್ಪನವರು- "ಬೇಂದ್ರೆಯವರು" ಜನಪದ ಕಾವ್ಯಸತ್ವದಿಂದ ಮೂಲ ಸ್ಫೂರ್ತಿಯನ್ನು ಪಡೆದ ಕಾರಣದಿಂದ ಅವರ ಎಷ್ಟೋ ಪ್ರಣಯ ಕವನಗಳು ಸತ್ವಪೂರ್ಣವೂ, ಸಹಜವೂ ಆಗಿವೆ. ಸಾಂಸಾರಿಕ ಜೀವನದ ಕಹಿ-ಸಿಹಿಗಳೂ, ತಾಪ-ವಿಷಾದಗಳೂ, ಹೊಸಹರೆಯದ ಉತ್ಸಾಹ-ಸಂಭ್ರಮಗಳೂ ಪ್ರೀತಿಯನ್ನು ಕುರಿತ ಚಿಂತನ- ಚರ್ಚೆಯ ಕವಿತೆಗಳೂ ತುಂಬ ವೈವಿಧ್ಯಮಯವಾಗಿ ಕಾಣಿಸುತ್ತವೆ[೨೨] ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಬೇಂದ್ರೆಯವರ ಜಾನಪದ ರೀತಿಯ ಕವನ ರಚನೆ ಅನುಭಾವದ ವಿಷಯವನ್ನೂ ಒಳಗೊಂಡಿದೆ. ಗಹನವಾದ ಅನುಭಾವದ ಅನುಭವವನ್ನು ಜಾನಪದ ಸೊಗಡಿನಲ್ಲಿಯೇ ಸೊಗಸಾಗಿ ಹೇಳುವ ಬೇಂದ್ರೆ ಕಲಾಕೌಶಲ್ಯವನ್ನು ನೋಡಿ:

ಗುರುಶಿಷ್ಯರ ಸಂವಾದ ಬೇಕು
. . . .
ದೇವನ ವೇದಾ ಓವಬೇಕು . . . . .
. . . . ನಾದಬೇಕು ನಾದಬೇಕು ಓಂಕಾರದ ನಾದಬೇಕು
ಓ ತಾಯಿ ಮಾಯಿ ಶಿವಮಾಯಿ,
ಕಾಯಿ ನನ !ಯಾಕ ತೆರೆವೆ ಬಾಯಿ?
ಯಾ ಹಾದಿಲಿಂಗ ನಾ ಹೋದರೇನು,
ಆಗ್ತೇನ ಅಲ್ಲೇ ನಾಯಿ
ಪ್ರತಿರೋಮ ಕೂಪದಾಗ ಕಾಮ ತುಂಬಿ
ತುಳಕ್ಯಾಡತದ ಇಲ್ಲಿ
ನೀ ಜಪ್ಪಿಸಿರಲು ನಿನ ತಪ್ಪಿಸ್ಯಾರ ನಾ
ಹೋಗಬಲ್ಲೆನೆಲ್ಲ?
'ಹಾಂಗಲ್ಲೊ ಮಗನ ನೀ ಭೋಗ ಬೇಡಿದಲ್ಲಿಲ್ಲ
ಬಾಗಿಲಾಗಿ
ತೆರಿತಾವ ಹಾದಿ, ಆದಕಂತ ಕಾದಿ, ನಿನ ಮನಸೆ ಕನಸು
ಆಗಿ
ತೆರೆದೇನಿ ಯೋಗ ನಿನ ಹೃದಯದಾಗ, ಬರಲೊಲ್ಲೊ
ಬ್ಯಾಗ ಒಳಗ

ಈ ಕಲಕುಮಲಕು ಆದಾರ ನಿನಿಗ ನಡದದ ಮ್ಯಾಲ ಕೆಳಗ
ಬಂದಾನ ಏನ ನನಕಂದ ಮನಿಗೆ ಇಂದಾರೆ ಅನತಮನಕ
ಎಂದಾಕೆ ಬಾರೊ ಕಾದಿರುವೆ ಇಲ್ಲೆ ನೀನಾಗಿ ಬರುವ ತನಕ'
-ಓ ತಾಯಿ-ಮಾಯಿ (ಅರಳು-ಮರಳು)

ಅನುಭಾವದ ಪ್ರಸಿದ್ಧಪದ್ಯ 'ಜೋಗಿ'(ಗಂಗಾವತರಣ) ವನ್ನು ಜಾನಪದ ಪರಿಸರದ ಮೂಲಕವಾಗಿಯೇ ಅಭಿವ್ಯಕ್ತಿಸುವ ಬೇಂದ್ರೆಯವರ ಜಾನಪದದ ಜಾಣ್ಮೆಯನ್ನು ಗಮನಿಸಿ:

ಊರತುದಿಯ ಆ ಮೂರು ಬಟ್ಟೆ ಮುಗಿದಲ್ಲಿ ಕೊಳ್ಳವೆಲ್ಲಿ
ಹಳ್ಳ ಅಡಗಿ ಹರಿದಲ್ಲಿ, ತುಡುಗು-ದನ ತೊಂಡು
ಮೇಯುವಲ್ಲಿ
ದಿಕ್ಕು ತಪ್ಪತಾರ ತಪ್ಪಿ ಹೊಕ್ಕರ ಕಕ್ಕಾವಿಕ್ಕಿಯಾಗಿ
ಇರುಳು ಅಂತನs ಹಗಲs ಕೂಗತಾವ ಅಲ್ಲಿ
ಜೋಡ ಗೂಗಿ.

. . . .

ಯಾವ ಸ್ವರಾ ಇದು ಯಾವ ಕೋಗಿಲಾ ಯಾವ ಮರವೋ
ಏನೋ
ಯಾಕ ಹೀಂಗ ಆಸರಂತ ಕೂಗತದ ಏನು ಇದಕೆ ಬ್ಯಾನ್ಯೊ
ಸುತ್ತು ಗುಡ್ಡ ನುಗ್ಗಾಗಿ ಹೋದವ್ರೋ ಓ ಗೊಟ್ಟು ಇದಕs
ಬಿಸಿಲು ಕುಣಿದು ಬೆವತ್ಯದ ಈಗ ಬಂದ್ಯದ ಮಳಿಯು
ಹವಕs.

ಅನುಭಾವದ ಉಪನಿಷತ್ತಿನ ಮಾತುಗಳನ್ನು ಹಳ್ಳಿಗರ ಮಾತುಗಳಲ್ಲಿಯೇ ಹೇಳುವ ಬೇಂದ್ರೆ ಕಾವ್ಯದ ರೀತಿ ನಿಜವಾ

ಯೂ ನಾವೀಣ್ಯಪೂರ್ಣ ಸತ್ವಪೂರ್ಣ. ಅಂತೆಯೇ ಬೇಂದ್ರೆ ಾವ್ಯಸೃಷ್ಟಿಗೆ ಒಂದು 'ಹೂತ ಹುಣಸೀಮರವೂ' ವಸ್ತುವಾಗ ಲ್ಲದು. ಈ ಹೊಸಬಗೆಯ ಜಾನಪದೀಯ, ಕಾವ್ಯದ ಗತ್ತು ನ್ನಡ ಕಾವ್ಯಗತಿಯನ್ನೇ ಬದಲಿಸಿ. ಸಾರಸ್ವತಲೋಕದಲ್ಲಿ ವಮಾರ್ಗದ ಸೃಷ್ಟಿಯನ್ನೇ ನಿರ್ಮಿಸಿತು. ಇದರಿಂದ ಕನ್ನಡದ ಾವ್ಯ ಸಮೃದ್ಧಿಗೊಂಡಿತು; ಕನ್ನಡಿಗರಿಗೆ ಒಗ್ಗಾಯಿತು. ಜಾನಪದ ೃಷ್ಟಿಯ ಕವನ ರಚನೆಯ ಸಾಮರ್ಥ್ಯ ಬೇಂದ್ರೆಯವರಲ್ಲಿ ಷ್ಟಿತ್ತೆಂದರೆ 'ದಿನಾ ಒಂದು ಹಾಡು ಕಟ್ಟಿ ಹಾಡೇನೋ' ಎಂದು ವರೇ ಒಂದೆಡೆ ಹೇಳಿದ್ದುಂಟು. ಅಷ್ಟೇ ಏಕೆ, ದಿನಕ್ಕೆ ಹತ್ತರಂತೆ ೀ ಬಗೆಯ ಕವನಗಳನ್ನು ಕವಿಗಳು ಹಾಡಯಬಲ್ಲವರಾಗಿದ್ದರು ವರ ಮಾತಿಗೆ ಮಾತೇ ಕಾವ್ಯವಾಗುತ್ತಿತ್ತು. ಕಣವಿಯವರು ಂದು ಕಡೆ ನುಡಿದಂತೆ, ಬೇಂದ್ರೆ ನಡೆದದ್ದೇ ಸಾಧನಕೇರಿ, ನುಡಿ ದ್ದೇ ಕವಿತೆ. ಇವರ ಹೊಚ್ಚಹೊಸ ಬಗೆಯ ಹಾಡು, ನವೀನ ಲ್ಪನೆಯಿಂದ ಕೂಡಿದ್ದರೂ, ಅದೂ ಜಾನಪದ ಮೋಡಿಯದೇ. ದಾಹರಣೆಗೆ:-

ಗಿಡಗಂಟೆಯಾ ಕೊರಳೊಳಗಿಂದ
ಹಕ್ಕಿಗಳ ಹಾಡು
ಹೊರಟಿತು ಹಕ್ಕಿಗಳಾ ಹಾಡು

-ಬೆಳಗು (ಗರಿ)

ಜಾನಪದದ ಎಲ್ಲ ಸಾಧ್ಯತೆಗಳನ್ನು ಸೂರೆಗೊಂಡ ಕನ್ನಡದ ಿತೀಯಾದ್ವಿತೀಯ ಕವಿ ಬೇಂದ್ರೆ. ಬೇಂದ್ರೆ ಪ್ರತಿಭಾಮೂಸೆಗೆ ುಕದ ಜಾನಪದವೇ ಇಲ್ಲ. ಎಲ್ಲೆಲ್ಲೂ ಬೇಂದ್ರೆ ತನ್ನ ಾನಪದೀಯ ಭಾವನ್ನೇ ಪಡಿಮೂಡಿಸುತ್ತಾರೆ. ಜಾನಪದ ಂತ್ಯವೇ, ಬೇಂದ್ರೆ ಜಾನಪದವನ್ನು ಕಂಡು ನಾಚುವಂತಾಗಿದೆ.

ಲೋಕದಲ್ಲಿ ನಿತ್ಯ ಕಾಣುವ ಚಿತ್ರವೊಂದನ್ನು, ಜಾನಪದೀಯ ಶೈಲಿಯಲ್ಲಿ ಅದೆಷ್ಟು ಚಿತ್ರವತ್ತಾಗಿ ನಿರೂಪಿಸುತ್ತಾರೆ; ನೋಡಿ. ಕವಿ ಬೇಂದ್ರೆ ಮಾತ್ರ ಈ ಬಗೆಯಲ್ಲಿ ಬರೆಯಬಲ್ಲ.

'ದಿನಾ ದಿನಾ ಮೆಯ್ತಾವ, ಸೆಗಣೀ ಹಾಕ್ತಾವ
ದನಾ ಕಾಯಾವ್ರು ದಿನಾ ಕಾಯ್ತಾರ
ಸೆಗಣೀ ಎತ್ತಾವ್ರು ದಿನಾ ಎತ್ತತಾರ
ಹಾಲು ಕುಡ್ಯೋವ್ರು ದಿನಾ ಕುಡಿತಾರ
ಜನಾ ಏನು ?
ದನಾ-ಏನು ?
ಕಾಯ್ದಾಂಗ ಇರ್ತಾವ
ಬಿಡಿಗೆ ಬರ್ತಾವ, ಗಬ್ಬ ಆಗ್ತಾವ, ಮರಿ ಹಾಕ್ತಾವ
ಅದರಾಗ ಕೆಲವು ಉಳೀತಾವ
ಹಲವು ಸಾಯ್ತಾವ
. . . .

—ಲೋಕಾರೂಢಿ (ಶ್ರೀ ಮಾತಾ)

ಜಾನಪದವನ್ನು ಹದವರಿತು ಬಳಸುವುದು ಬೇಂದ್ರೆಯವರಿಗೆ ಜನ್ಮಜಾತವಾದಂತಿದೆ. ಹಾಗಾಗಿಯೋ ಏನೋ ಜಾನಪದೀಯ ಮನೋಧರ್ಮದ ಇವರ ಕವಿತೆಗಳಲ್ಲಿ ಕೃತಕತೆ ಎಳ್ಳಷ್ಟೂ ಇಲ್ಲ; ಸರಳತೆ, ಸಹಜತೆ, ಸುಂದರತೆಗಳು ಕವಿತೆಯುದ್ದಕ್ಕೂ ಲಲ್ಲೆಯಾಡಿವೆ. 'ಹದಾ ಇಲ್ದ ಪದಾ' ಹೊರಗೆ ಬರುವುದರ ಅಸಾಧ್ಯತೆಯನ್ನೂ ಪೂರ್ಣ ಜಾನಪದೀಯ ರೀತಿಯಲ್ಲಿಯೇ ಹೇಳುತ್ತಾರೆ.

'ಹದಾ ಒಳಗ ಇಲ್ಲ ತಮ್ಮಾ?
ಪದಾ ಹೊರಗ ಬರುದಿಲ್ಲಾ
ಕದಾ ತೆರ್‍ಯೂದಿಲ್ಲ ಅಂತಃಕರಣಾ
ಹದಾ ಇಲ್ದ ಪದಾ'

-ಹದಾ ಇಲ್ಲ ಪದಾ (ಮರ್ಯಾದೆ)

'ಕಲ್ಲಾಗಿದ್ದನೇನೊ' -ಕವಿತೆಯಲ್ಲಿಯ ಶಬ್ದಗುಂಫನದ ಪ್ಪಟ ಜಾನಪದೀಯತೆಯನ್ನು ಯಾರಾದರೂ ಮೆಚ್ಚಬಹುದು:-

"ಗಂಡ ಅಂಬೋವ ಗುಂಡಕಲ್ಲು
ಬಾಳೆ ಅಂಬೋದು ಒರಳುಕಲ್ಲು
ಹರೇಮಿ ಊರು ಬರೇ ಗುಲ್ಲು
ಮೀಸೆ ಇಲ್ಲದ ಯಾಸಿಗಣ್ಣು
ನದರಿನ ಮುಂದ ಕದರಿಗೆ ಸಿಕ್ಕೈತಿ
ಕ್ಯಾರಿಮೀಸಿ ವಾರಿಗಣ್ಣು
ಪಿಸಿ ಪಿಸಿ ನಕ್ಕೈತಿ."

ಬೇಂದ್ರೆಯವರ ಮೇಲೆ, ಬೀರಿದ, ಜಾನಪದೀಯ ಭಾವದ ಆಳ ಎಷ್ಟಿದೆಯೆಂದರೆ, ಪ್ರೌಢಕವಿ ಬೇಂದ್ರೆ ಪ್ರೌಢ ಂದೋಗತಿಯ ಪ್ರಬುದ್ಧಶೈಲಿಯಲ್ಲಿ ಕಾವ್ಯ ರಚಿಸುವಾಗಲೂ ಡ, ಅವರ ಜಾನಪದೀಯ ಗತಿ-ಗತ್ತು, ಗುಂಗು, ಗ್ರಾಮೀಣ ಸ್ಕೃತಿಯ ಗಾಡಿ-ಮೋಡಿ, ದನಿ-ಬನಿಗಳು, ಅವರ ಪ್ರಬುದ್ಧ ಸ್ಕೃತ ಪ್ರಚುರ ಸತ್ವವನ್ನು ಸಂಪೂರ್ಣವಾಗಿ ಮರೆಯಿಸಿ ಡುತ್ತವೆ. ಇದು ಬೇಂದ್ರೆ ಜಾನಪದಮರ್ಮ; ಸತ್ವ. ಬೇಂದ್ರೆ

ಯುವರ ಜಾನಪದೀಯ ಮನೋಧರ್ಮದ ಇನ್ನೂ ಕೆಲವು ಉದಾಹರಣೆಗಳು.

ಮಕ್ಕಳಾಗ್ಯಾಡೀದಿ | ಹಕ್ಕ್ಯಾಗಿ ಹಾಡೀದಿ
ಚುಕ್ಕ್ಯಾಗಿ ನೋಡಿದಿ ಗುರುದೇವಾ
ಬಳ್ಳ್ಯಾಗ ಕುಣಿದೀದಿ | ಬೆಳಸ್ಯಾಗ ತಣಿದೀದಿ
ಹೂವಾಗಿ ಅರಳೀದಿ ಗುರುದೇವಾ

. . . .

ಚಳಿಯಾಗೀಸಾಡೀದಿ | ಗಾಳ್ಯಾಗ ಬೀಸಾಡೀದಿ

. . . .

ಬಿಸಿಲ್ಹಣ್ಣು ಉಂಡೀದಿ | ಬೆಳದಿಂಗಳ ಕಂಡೀದಿ

. . . .

ಮೂಡಲಕ ಮೂಡಿದಿ | ಪಡುವಲಕ ಓಡೀದಿ

. . . .

ನಾಡಿ ಹಣ್ಣಾದ ನೀ | ಜಗದ ಕಣ್ಣಾದಿ ನೀ

-ಗುರುದೇವ (ಸಖೀಗೀತ)

ಸಂಜಿ ಸೂರ್ಯನ ನೆಗಲ
ಜರದ ಸಲ್ಲೇದ ಸೋಗಿ
ನವಿಲಗೊರಳಿನ ಮುಗಿಲ
ಸೆರಿಗ್ಗೆ ಬೀಸ್ಯಾವ,

-ಚಿತ್ರಿಯ ಮಳೆಯ ಸಂಜೆ (ಸಖೀಗೀತ)

ಬಂದಾಗ ಬರ್ರೆವ್ವ, ಕಂದನ್ನ ತರ್ರೆವ್ವ.
ಅಂಜೀಕಿ ಗಿಂಜೀಕಿ ಕೊಂದಾನ.

ರೋಮ ರೋಮಗಳಲ್ಲಿ ಭೀಮರಕ್ಷೆಯು ಬಲ
ಕೊರಳಾಗ ಕಟ್ಟಿರಿ ಒಂದಾನ.
'ಕುಣಿಯಲೆ ಮಗನೆ ನೀ' ಅನ್ನೋದೊಂದೇ ತಡ
ತನ್ನss ತಾನs ತಂದ್ಯಾನ
ಮುದ್ದುಕೂಸಿನ ಹಾಗೆ ಮುಸು ಮುಸು ಮಾಡುತ್ತ
ಕುಣಿದಾನ ಕುಣಿತ್ಯವ ಛಂದಾನ

-ಕರಡಿ ಕುಣಿತ (ಸೂರ್ಯಪಾನ)

ಬೊಗಸಿಗಣ್ಣಿನಾ ಬಯಕೆಯ ಹೆಣ್ಣು ನೀರಿಗೆ ಹೋಗಿತ್ತs
ತಿರುಗಿ ಮನೀಗೆ ಸಾಗಿತ್ತ;
ಕಾಮಿ ಬೆಕ್ಕಿನ್ಹಾಂಗ ಭಾಂವೀ ಹಾದಿ ಕಾಲಾಗ ಸುಳಿತಿತ್ತs
ಎರಗಿ ಹಿಂದಕ್ಕುಳಿತಿತ್ತ.

-ರಾಗರತಿ (ಗರಿ)

ಕಂಚು ಕನ್ನಡಿ ತಿಂತ್ಕು | ಹಂಚು ಮಾಳಿಗೆ ತಿಂತ್ಕು
ಬೆಂಚು ತಿಂದೀತು ಮೇಷ್ಟನ್ನ | ಊರಿನ
ಪಂಚರನೆ ತಿಂತ್ಕು ಲಂಚವು . . . . .

-ಸೂಸಲನಗೆಯ ಸೂಕ್ತಿಗಳು

ಈ ಕವಿತೆಗಳಲ್ಲಿಯ ಸಾಮಾನ್ಯರ ಭಾವತರಂಗಗಳ ಭಾಷೆ, ಕಲ್ಪನೆ, ಚಿಂತನೆ, ಪ್ರತಿಮೆಗಳನ್ನು ಗಮನಿಸಿದರೆ; ಇವು ಬೇಂದ್ರೆ ಕವನಗಳು ಎಂಬುದು ಗಮನಕ್ಕೆ ಬಾರದೇ ಹೋಗುತ್ತದೆ. ಅಷ್ಟೊಂದು, ಜಾನಪದದ ಸೊಲ್ಲಿನ ನೇರ ಪ್ರಭಾವ ಇವುಗಳ ಮೇಲಿದೆ.

ಜಾನಪದ ಹಾಡುಗಳಲ್ಲಿಯಂತೆ, ಪುಟ್ಟಪುಟ್ಟ ಶಬ್ದಗಳಲ್ಲಿ ಶ್ಲೇಷಾರ್ಥ ತುಂಬಿ ಅಭಿವ್ಯಕ್ತಿಸಬಲ್ಲ ತಾಕತ್ತನ್ನು ಬೇಂದ್ರೆಯವರು ಪಡೆದಿದ್ದಾರೆ. ಪಂಡಿತರಿಗೆ ಮಾತ್ರ ಅರ್ಥವಾಗ ಬಲ್ಲ ಕವನಗಳನ್ನು ಸಾಮಾನ್ಯರಿಗೂ ಒಯ್ದು ಮುಟ್ಟಿಸಿದ ಕೀರ್ತಿ ಇವರದು. ಶಬ್ದ, ಅರ್ಥ, ನಾದ ಎಲ್ಲದರಲ್ಲೂ ಸ್ವಸಾಮರ್ಥ್ಯವನ್ನು ತೋರ್ಪಡಿಸಿಕೊಂಡ ಅಪರೂಪದ ಕವಿಗಳಿವರು. ಬೇಂದ್ರೆಯವರ ಕವಿತೆಯ ಅರ್ಥಧ್ವನಿ ಮತ್ತು ನಾದ-ಇವು ಪ್ರಾಯಶಃ ಲಾವಣಿಯ ಪ್ರಭಾವದಿಂದಲೇ ಬಂದಿರಬೇಕು. ಕವಿ ಲಕ್ಷ್ಮೀಶನಂತೆ 'ನಾದಲೋಲ'ನಾದ ಬೇಂದ್ರೆಯವರ ನಾದ ಸಿಬಿಡತೆಯನ್ನು 'ಮಾಯಾಕಿನ್ನರಿ'ಯಲ್ಲಿ ಕಾಣಬಹುದು.

೮. ಭಾಷೆ

ಒಂದು ಭಾಷೆಯ ಸಜೀವತೆಗೆ, ಆ ಭಾಷೆಯ ನುಡಿಗಳು-ಬಳಕೆಮಾತುಗಳು, ನುಡಿಗಟ್ಟುಗಳು, ಕೂಡುನುಡಿಗಳು ಹಾಗೂ ಎರವಲು ಪದಗಳೇ ಕಾರಣ. ಈ ಭಾಷಿಕ ಅಂಶಗಳೇ ಭಾಷಾ ಆವಿಷ್ಕಾರಕ್ಕೂ ಕಾರಣ. ಆದುದರಿಂದ ಇವು ಭಾಷೆಯ ಉಸಿರು.[೪೪] ಈ ಹಿನ್ನೆಲೆಯಲ್ಲಿ, ಬೇಂದ್ರೆಯವರ ಭಾಷೆ ಸಂಪದ್ಭರಿತವಾಗಿದ್ದರೆ, ಸತ್ವಯುತವಾಗಿದ್ದರೆ, ಅದಕ್ಕೆ ಕವಿಗಳು ಭಾವಗೀತೆಗಳಲ್ಲಿ ಪ್ರಯೋಗಗೊಂಡ, ತನ್ನ ಕಾಲದ ಜನ ಭಾಷೆಯ ಅಂಶಗಳಾದ ದೇಸಿನುಡಿ ಬಳಕೆಮಾತುಗಳು, ಕೂಡಿನುಡಿ ನುಡಿಗಟ್ಟು, ನಾಣ್ನುಡಿ ಮುಂತಾದವುಗಳಿಗೆ ಋಣಿಯಾಗಲೇಬೇಕು. ಭಾಷೆಯಸತ್ವ, ವೈಶಿಷ್ಟ್ಯ ಮತ್ತು ವೈವಿಧ್ಯತೆಗಳನ್ನು, ಅದರ ಗ್ರಾಮ್ಯರೂಪದಲ್ಲಿ ಅಥವಾ ದೇಸೀ ಗುಣದಲ್ಲಿ ಕಾಣುತ್ತೇವೆ. ಬೇಂದ್ರೆ

ಅವರು ಬಳಸುವ ಗ್ರಾಮ್ಯಭಾಷೆ ಸಾಕಷ್ಟು ವೈವಿಧ್ಯಪೂರ್ಣ
ಾದುದು. ಗ್ರಾಮೀಣ ನೇಕಾರ, ಹಾಡುಗಾರ, ಕಿಳ್ಳಿಕೇತ, ರೈತ,
ದಲಿತ, ಕೂಲಿಕಾರ, ಬ್ರಾಹ್ಮಣ ಮೊದಲಾದವರ ದಿನನಿತ್ಯದ
ಮಾತುಗಳಿಗೆ ಮನಸೋತ ಕವಿ, ಅವರ ಜೀವನ ವೈಶಿಷ್ಟ್ಯವನ್ನು
ಅವರವರ ವೃತ್ತಿ ಪರಿಭಾಷೆಯಲ್ಲಿಯೇ ಕವನೀಕರಿಸಿದ್ದಾರೆ;
ಉಪಮ, ರೂಪಕ, ಪ್ರತಿಮೆಗಳಾಗಿಯೂ ಬಳಸಿಕೊಂಡಿದ್ದಾರೆ.
ಕೇಸೀಯು ಭಾವ-ಭಾಷೆ-ಅರ್ಥಗಳನ್ನು ನೀಡಬಹುದಾದ
ಕಲವಾರು ವೈವಿಧ್ಯಮಯ ಭಾವಗೀತೆಗಳನ್ನು ಬೇಂದ್ರೆಯವರಲ್ಲಿ
ನೋಡಬಹುದು. ಇವರ 'ಧಾರವಾಡದ ಧ್ಯಾಸ, ಕನ್ನಡದ
ಅಭ್ಯಾಸ, ಮನೆಮಾತಿಗೂ ಹೊಸತನ ತಂದುಕೊಟ್ಟುದು'
ಮನನಾರ್ಹ. ಹಾಗಾಗಿಯೇ ಬೇಂದ್ರೆಯವರ 'ಬ್ರಾಹ್ಮಣೀ'
ಭಾಷೆಯಲ್ಲಿ (ಮನೆಮಾತು) ಧಾರವಾಡದ ವ್ಯಾವಹಾರಿಕ ಭಾಷೆ
ಕೂಡ ರೈತರ ಭಾಷೆ, ಇತರರ ಭಾಷೆ ಸಹಜವಾಗಿಯೇ
ಸೇರಿಕೊಂಡಿದೆ. ಬ್ರಾಹ್ಮಣೀ ಭಾಷೆಯಲ್ಲಿಯೇ ಸ್ತ್ರೀ- ಪುರುಷ
ಬ್ರಾಹ್ಮಣರ ಭಾಷೆ ಎಂದು ವಿಂಗಡಿಸಬಹುದು. ಅಷ್ಟು
ಸೂಕ್ಷ್ಮವಾಗಿ ಎಲ್ಲ ವರ್ಗದವರ ಭಾಷೆಯನ್ನು ನಿರೀಕ್ಷಿಸಿ,
ಬೇಂದ್ರೆಯವರು ಭಾಷಾವೈವಿಧ್ಯವನ್ನು ಭಾವಗೀತೆಗಳಲ್ಲಿ
ಬರೆದಿದ್ದಾರೆ. ಕೆಲವು ಉದಾಹರಣೆಗಳನ್ನು ನೋಡಬಹುದು:-
ಧಾರವಾಡದ ಬ್ರಾಹ್ಮಣರು ಬಳಸುವ ಗ್ರಾಮ್ಯಭಾಷೆ :

'ನೋಡ್ ನೋಡ್ತ ದಿನಮಾನಾ ಆಡಾಡ್ತ ಆಯುಷ್ಯ
ನಡದದ ನಡದದ ನಡದದ
ಕಾಣದ ಕಡಲ್ಗಾದಿ ಹಿಡದದ

-ನನ್ನ ಕಿನ್ನರಿ (ಗರಿ)

ಧಾರವಾಡದ ವ್ಯವಹಾರಿಕ ಗ್ರಾಮ್ಯ ಭಾಷೆ:

ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವಾ
ವಾರದಾಗ ಮೂರಸರತಿ ಬಂದು ಹೋಗಾಂವಾ
ಭಾರಿ ಜರದ ವಾರಿರುಮ್ಮಾಲ ಸುತ್ತಿಕೊಂಡಾಂವಾ
ತುಂಬ ಮೀಸಿ ತೀಡಿಕೋತ ಹುಬ್ಬ ಹಾರಸಾಂವಾ

-ಹುಬ್ಬಳ್ಳಿಯಾಂವಾ (ಸಖೀಗೀತ)

ಧಾರವಾಡದ ರೈತಾಪಿ ವರ್ಗದವರ ಗ್ರಾಮ್ಯ ಭಾಷೆ:

'ಟೊಂಕದ ಮ್ಯಾಗ ಕೈ ಇಟಗೊಂಡು
ಬಿಂಕದಾಕಿ ಯಾರೀಕಿ ?
ಒಂಕಿ ತೋಳ ತೋರಿಸತಾಳ
ಸುಂಕದ ಕಟ್ಟ್ಯಾಂವಗ

. . . .

ಹಳ್ಳದ ದಂಡ್ಯಾಗ ಮೊದಲಿಗೆ ಕಂಡಾಗ
ಏನೊಂದು ನಗಿ ಇತ್ತ

. . . .

ನಕ್ಕೊಮ್ಮ ಹೇಳ ಚೆನ್ನಿ ಆ ನಗಿ ಇತ್ತಿತ್ತ
ಹೋಗೇತಿ ಎತ್ತೆತ್ತ

-ಬಿಸಿಲುಗುದುರೆ (ಗರಿ)

ಬೇಂದ್ರೆಯವರ ಗ್ರಾಮೀಣ ಭಾಷಾವೈವಿಧ್ಯಕ್ಕೆ ಇನ್ನು ಕೆಲವು ಉದಾಹರಣೆಗಳು:-

ಕಂಡ್ಹಾಂಗ ಕಾಣಲೀಲ್ಲ ಅಂದಾಂಗನ್ನಲಿಲ್ಲ
ಬಂದ್ಹಾಂಗ ಬರಲಿಲ್ಲ

. . . .

ಮೂಡಲ ಮನೆಯಾ ಮುತ್ತಿನ ನೀರಿನ ಎರಕವ ಹೊಯ್ದಾ
ನುಣ್ಣನೆರಕವ ಹೊಯ್ದ

. . . .

ನಾರೀ ನಿನ್ನ ಮಾರಿಮ್ಯಾಗ
ನಗೀನವಿಲು ಆಡತಿತ್ತ
ಆಡತಿತ್ತ ಓಡತಿತ್ತ
ಮುಗಿಲ ಕಡೆಗೆ ನೋಡತಿತ್ತ

. . . .

ಯಾರವ್ವಾ ಇವ ಚೆಲುವಾ
ತನ್ನಷ್ಟಕ್ಕ ತಾನ ನೋಡಿ ನಲಿವಾ

. . . .

ಪಾತರಗಿತ್ತಿ ಪಕ್ಕ
ನೋಡಿದೇನ ಅಕ್ಕ

ಬಂದೆವ್ವಾ ಕಾಮ ಹೊಟ್ಟಿಯೊಳಿಟ್ಟು
ನಿಂದೆವ್ವಾ ನೀರೆ ನಾಚಿಕೆ ಬಿಟ್ಟು
ಮುಂದವ್ವ ನೀನು ಇಂದಿನ ತೊಟ್ಟು
ನೀಗವ್ವಾ. ಅವನ ನೀಗವ್ವಾ
ಹೇ. ಹೋಗವ್ವಾ ಮನೆಗೆ ಹೋಗವ್ವಾ|

-ಮನೆಗೆ ಹೋಗವ್ವಾ (ಸಖೀಗೀತ)

ಹೀಗೆಯೇ ಗುರುತಿಸುತ್ತ ಹೋದರೆ, ಬೇಂದ್ರೆಯವರ ಒಂದೊಂದು ಪದ್ಯದಲ್ಲಿ ಧಾರವಾಡದ ವಿವಿಧ ಜಾತಿಯ ಸಾಮಾನ್ಯ ಜನರಾಡುವ, ಹಲವು ಭಾಷೆಗಳ ತದ್ವತ್ ಸ್ವೀಕರಣ ವನ್ನು ಕಾಣಬಹುದು. ಇಲ್ಲಿ ಬೇಂದ್ರೆಯವರ ಭಾವಗೀತೆಗಳಲ್ಲಿ ಬಳಕೆಯಾದ ವಿವಿಧ ಭಾಷಿಕ ಅಂಶಗಳನ್ನು ಸಂಗ್ರಹಿಸುವುದರ ಮೂಲಕ, ಬೇಂದ್ರೆ ಕಾವ್ಯದ ಜಾನಪದ ಭಾಷಾ ಸಂಪತ್ತನ್ನು ತೋರಿಸುವ ಚಿಕ್ಕ ಪ್ರಯತ್ನ ಮಾಡಲಾಗಿದೆ.

ದೇಸೀ ನುಡಿ : ಸ್ವೀಕರಣ ಪದಗಳು

ಇಲ್ಲಿಯ 'ನುಡಿ' ಅಚ್ಚಗನ್ನಡ ಪದವಾಗಿರಬಹುದು, ತದ್ಭವ ಶಬ್ದವಾಗಿರಬಹುದು; ಅದು ಜನಬಳಕೆಯಲ್ಲಿದ್ದರೆ, ಸಾಕು. ಕನ್ನಡ 'ದೇಸೀ'ಪದವೆಂದು ಗುರುತಿಸಲಾಗಿದೆ. ದೇಸಿ ನುಡಿಗೆ, ಜನನುಡಿ, ನಾಡನುಡಿಎಂತಲೂ ಕರೆಯಬಹುದು. ಭಾಷಾ ಬಳಕೆದಾರ ರಿಂದಲೇ ಇವು ಸೃಷ್ಟಿಗೊಂಡಂಥವು. ದೇಸಿ ಶಬ್ದಗಳಾದ ಇವು ಭಾಷಾ ಶ್ರೀಮಂತಿಕೆಯನ್ನು ಹೆಚ್ಚಿಸಿವೆ; ಭಾಷೆಗೆ ಕಸುವು ತಂದು ಕೊಟ್ಟಿವೆ. "ದೇಸಿಯಿಲ್ಲದ ಭಾಷೆ, ಭಾಷೆಯೇ ಅಲ್ಲ. ಅದು ಬೆಡಗು ಇಲ್ಲದ ಬೋಳನುಡಿ, ದೇಸಿಯ ಸೊಗಸಿಲ್ಲದ ಮಾತು ನರುಗಂಪಿಲ್ಲದ ಹೂವು ಒಂದೇ."[೨೫] ಈ ಬಗೆಯ ದೇಸೀ ನುಡಿ ಮಹತ್ವಕ್ಕೆ ತಲೆದೂಗಿ, ತನ್ನದಾಗಿಸಿಕೊಂಡ, ಹೊಸಕನ್ನಡದ ವಿರಳ ಕವಿಗಳಲ್ಲಿ ಬೇಂದ್ರೆಯವರು ಅಗ್ರರು. ಬೇಂದ್ರೆ ಕವಿಕೃತಿಗೆ ದೇಸಿನುಡಿ ಅಡಿಗಲ್ಲಾಯಿತು; ಇವರ ಕಾವ್ಯಕಟ್ಟಡದ ನಿರ್ಮಾಣದಲ್ಲಿ ಚೀಪು ಕಲ್ಲಾದುವು ಇತರ ಭಾಷೆ ಸ್ವೀಕರಣ ಪದಗಳು.

ಭಾವಗೀತೆಗಳಿಂದಾಯ್ತು ದೇಸೀ ನುಡಿಗಳಲ್ಲಿರುವ ಭಾಷಾ ಸಮೃದ್ಧಿಯನ್ನು ಗಮನಿಸಿ:-

ಅಟ್ಟಿಂಬಟ್ಟಾರಣ್ಯ, ತಾವ್ಪಾರಿ. ಬಾವ್ಪಾರಿ, ಗುಳಿ. ಜುಮ್ಮುರುಮುಜುಮು. ಗಕ್ಕನೆ. ಪೌಸಾರಿ, ಆಳೆತ್ತರ. ಏ ಹುಡುಗ, ಎಲೆ ಹುಡುಗಿ.! ಕಿಂಬೀಲಿ ಲಿಲಿಲೀಲಿ. ಒಗೆತನ. ಯಾರಾರೋ ಏಂತೇನೊ. ತೆರವೋತೆರ. ಅಹಹಾ! ಏನೀಕೆ! ಅಯ್ಯೋ ದೇವರೇ, ಸಖಿ! ಬಾರೆ ಬಾ! ಛಿಳಿಲ್ ಛಿಟಿಲ್. ಬುರ್ ಭುಗಿಲ್ (ಉರಿಸಪ್ಪಳ) ಕಿರುಗುಟ್ಟು (ಯಾತದ ಧ್ವನಿ) ಧಾಳಾಧೂಳಿ (ಧಾಮಧೂಮ=ಸಡಗರ) ಚೀ ಚಿಟೀ ಚೀ ಚಿಟೀ ಚಿಟಿ ಚಿಟೀ ಚಿಟಿ, ಚೀಟಿ ಚಿಲಿಪಿಲಿ (ಗುಬ್ಬಿಗಳ ಒದರುವಿಕೆ)ಉಗುರು ಬೆಚ್ಚಗೆ. ಆಲೀಮನೆ, ಬಣವೆ. ಈಚಲ ಚಾಪೆ, ಗೊಲ್ಲತಿ, ಏನಿದ್ದೆ! ಹಾ! ಎಲೆ ನಿದ್ದೆ!, ಧಡಡ, ಬಕ್ಕನೇ, ಡೌಲು. ಅಟಮಟ, ಉಡದಾರ. ಗುತ್ತವಾಗಿ, ಹಕ್ಕಲ, ಒಕ್ಕಲ, ಹ್ವಾರೆ, ಅಡ್ಡಾಗತೇನಿ, ಕಣ್ಣಳತಿ, ರೌದಿ. ಹಡದಿ, ಎದಿಯತ್ತರ, ಗುಡಿಸಲು, ಮುಚ್ಚಂಜೆ, ಹೆ! ಬಂದೆವ್ವಾ ನಿಂದೆವ್ವಾ, ಮುಂದವ್ವ, ಇಂದಿನ ತೊಟ್ಟು, ಹುಬ್ಬಳ್ಳಿ ಯಾಂವಾ, ಆಡಿಸ್ಯಾಡಾಂವಾ, ಓಡಿಓಡಿಲೇ ರೊಕ್ಕ, ಹ್ಯಾಂವಾ, ಹಾಡೇಹಗಲು, ಕಡೆಗೋಲು, ರಗಳಿ, ಕುರೋ ಕುರೋ (ನಾಯಿಯನ್ನು ಒದರುವಿಕೆ) ಕರಲು (ಬಂಜರುಭೂಮೀ) ಕೋರಪಾಲ, ಇತ್ತೊ ಇಲ್ಲೊ, ಆಹಾ! ಅಯ್ಯೋ! ನಿಚ್ಚಣಕಿ, ಸಲ್ಕಿ, ಗುದ್ದಲಿ, ಕಿಸಿದಿತು ಹಲ್ಲು, ಮೇವು, ಕೂಳು, ಮಂಗಾಟ, ಕಣ್ಕಟ್ಟು, ತಿದಿ, ಆಲಗು, ಗಲಗು, ಹಾಸಿಹೊಚ್ಚಿ, ತಿಳ್ಳಿ (ಕಬಡ್ಡಿ ಆಟ) ಚಿಂತ್ಯಾಕೊ ನನ ಬಾಳಾ! ಆಹಾ ಚೆಲುವ! ಓಹೋ ಒಲುವೆ!, ಟೊಪ್ಪಿಗೆ, ಹೊಟ್ಟೆನೆತ್ತಿ. ಮುಟ್ಟಾಟ (ಮಕ್ಕಳ ಹುಡುಕಾಟ) ಮುಗುದಾರ,

ಗುಡುಗುಡುಮುತ್ಯಾ, ಥೂಥೂ ಥೂಥೂ, ಪುರಮಾಸಿ, ಅಡ್ಡ ಣಗಿ, ಚರಿಗಿ, ಹೊರಬಳಕೆ, ಹುಂಬಗುತ್ತಿಗಿ, ಕುವತ್ತು, ಖಿಲ್ಲಂ ಖಿಲ್ಲಾ, ಭಜನಿ, ಬಯಲಾಟ, ಜೋಗು‌ಳ. ಎಕ್ಕಡ, ಉಕ್ಕಡ, ಕಕ್ಕಡ, ಸಾಣೆಗಲ್ಲು, ಚವರಿ, ಕೊಲ್ಲಾಟಗಿತ್ತಿ (ಡೊಂಬತಿ) ಬಾಲಕರ ಮಣ್ಣಾಟ, ಕಳ್ಳಿಕೇತ (ಗೊಂಬೆ ಕುಣಿಸುವವ) ಮೂಡಲಗಾಳಿ ಪಡುವಲಗಾಳಿ, ಸುಟ್ಟುರೆಯಗಾಳಿ, ನಂಜುಗಾಳಿ, ಮಲೆಗಾಳಿ, ಬೆಳ್ಳಕ್ಕಿ, ಗೂಗೆ, ಗಿಡಗ, ಹದ್ದು, ಸುಳಿಗಾಳಿ, ಬಿರುಗಾಳಿ, ಟಿಂಪಕ್ಕಿ ಹಾಲಕ್ಕಿ, ಗೆಣೆಹಕ್ಕಿ, ಹಾಳಿಹದ್ದು, ಪಾತರಗಿತ್ತಿ, ಪಾರಿವಾಳ, ಗಿಣಿ ಕಾಗೆ, ಮದ್ದಳೆ, ಮೃದಂಗ, ಶಂಖ, ಕಹಳೆ, ತುತೂರಿ, ಕಿನ್ನರಿ, ತಾಳ, ಕೊಳಲು, ಗೆಜ್ಜೆಕೋಲು, ಜವನಿಕೆ (ಪರದೆ) ಗೋದಲೆ (ಗೋದಣ) ಒಡಪು, ಒಗಟು, ಉಸಾಬರಿ, ಕುಪ್ಪುಸ, ಹೆಗ್ಗಣ, ಜೊಂಡಿಗ, ಇಲಿ, ಸೊಳ್ಳೆ, ಗುಂಗಾಡ, ಕೊಳ್ಳಿದೆವ್ವ, ತೂಗುಜೋಕಾಲಿ, ಈಸಗುಂಬಳ, ಮದಗುಣಿಕೆ, ಅತ್ತಿಗಿಡ, ಹಲಸು, ಚೆಂಡುಹೂ, ಬಾಸಿಂಗ, ಶಾಂವಿಗಿ, ನೇಕಾರ ನೂಲು, ಝೂಲು, ಒಡ್ಡ, ಮಡಿವಳ, ಡೊಂಬ, ತಿಗರಿ, ಗಡಿಗಿ, ಮಡಿಕೆ, ಕುಂಬಾರ, ಆವಿಗಿ, ನೇಗಿಲ, ಗುಡ್ಡದ ಎಲ್ಲಮ್ಮ, ಬನದಶಂಕರಿ, ಭುವನೇಶ್ವರಿ, ಚಾಮುಂಡಿ, ಮಲ್ಲಾರಿಮಾರ್ತಾಂಡ, ಕಾಮಣ್ಣ-ರತಿ, ಜೋಕುಮಾರ, ಮಾಲಕ್ಷ್ಮಿ, ಮಾಳವ್ವ, ಸಾಳವ್ವ, ಯಕ್ಕಲದೇವಿ, ಜೋಗ್ಯಾ, ವೆಂಕಟರಮಣ, ಪರಶುರಾಮ, ಗುಡ್ಡದ ಕುಮಾರಸ್ವಾಮಿ, ಫಾಯ್ದೆ, ಬನಾವಟ, ಖಟ್ಲೆ, ಪಂಚನಾಮೆ, ಖರೇ, ಎಬಡಾತಬಡಾ, ಶೀಖರಣೆ, ಶ್ರೀಖಂಡ, ಉಳ್ಳಾಗಡ್ಡಿ, ಮೊಸರು, ಮೆಣಸಿನಕಾಯಿ, ಗುಲಬಾಕ್ಷಿ, ಸುರೇಪಾನ, ಸುಗಂಧ, ಶ್ಯಾವಂತಿ, ಕರಿಕೆ, ಕಳ್ಳಿ, ಕೇದಗೆ, ದವನ, ಚದುರಹೂ, ಲವಂಗ, ಪೇರಲ, ಮಂಗ, ಕಪ್ಪೆ, ಹಾವು, ಹಂಸ,

ರುವೆ, ಹುಂಚಿ (-ಹುಣಚಿ-ಅಣಚಿ) ಸೋಬಾನ, ಹೂದಂಡೆ, ಭಾರಿಜರದ ವಾರಿರುಮ್ಮಾಲ, ತಾಳೀಮಣಿ, ಬ್ಯಾಳೀಮಣಿ, ಸವೇರ, ಬಸವೇರ, ಜೋಗತೇರ, ಕುದುರೆ, ಆನೆ, ಸಿಂಹ, ಕತ್ತೆ, ನಾಯಿ, ಹಕ್ಕಿ, ಮದುವಣಗ, ಹಗರಣದೊಳಗಣ ಸೋಗು, ಮೊಸಳೆ, ಮಿಡಿಚಿ, ಲೊಟಲೊಟ ಹಲ್ಲಿ, ಉಧೋ ಉಧೋ, ಗಣಣ ತನನ, ಝುಣಝುಣಣ, ಗಜಗ, ಕುಟುಟೊಗಚಿ, ಸಂಪಿಗಿ, ಮಾವು, ಮಲ್ಲಿಗೆ, ಮುಗಿಲಮಲ್ಲಿಗೆ, ತೆಂಗು, ಹಲಸು, ಂಬಿ , ಹೊಂಗೆ, ಎಳ್ಳು, ಅವರೆ, ಬೇವು-ಮಾವು, ಕೋಗಿಲೆ- ನವಿಲು, ಮೀನು-ಮೀಂಬುಲಿಗ, ಹೊಸ್ತಿಲಹುಣ್ಣಿವೆ, ಬನದಹುಣ್ಣಿವೆ, ಹೋಳಿಹುಣ್ಣಿವಿ, ಭೋರಂಗಿ, ತೊಟ್ಟಿಲ, ರಾಟಲ (ಗಿರಿಕಾಲೆ, ವಿನೋದಕ್ಕಾಗಿ ಮಕ್ಕಳನ್ನು ಕೂರಿಸಿ ತಿರುಗಿಸುವ ಚಕ್ರಾಕಾರವಾದ ಒಂದು ಸಾಧನಾ) ಸುಡುಗಾಡ ಸಿದ್ಧ (ಜನಪದ ವೃತ್ತಿ ಕಲಾವಿದ), ಕೊತ್ತುಂಟಲೇ, ಪುಟ್ಟಪೂರಾ, ಕುತನಿಯ ಅಂಗಿ, ಬಾಸಿಂಗ, ಜಯಭೇರಿ, ನಗಾರಿ, ಹೊಲೆಯರ ಹಲಗಿ, ಕುರುಬರ ಡೊಳ್ಳು, ಕೊರವರ ಸನಾದಿ, ಗೊಲ್ಲರ ಕೊಳಲು, ಅಲ್ಲಿಕೇರಿ, ಟಗರಾಟ, ನಂದಿಕೋಲ ಬುಡಬುಡಕಿ, ಡಮರು, ಭಿಂಗರಿ, ಬೊಗರಿ, ದೋಡಿಕಾರ, ಗುಳದಾಳಿ, ಬೀದಿಗೂಳಿ, ಮೂರು ಸಂಜೀಮುಂದ, ಅಂತರರೇಲಿ, ಅಡಕೊತ್ತು, ಚಂಚಿ, ಹಸಬಿ, ಕಲ್ಲೆ ಗುದ್ದವೇಳೆ, ಾಡಗೀ, ಕಾಶ್ಮೀರಿಶಾಲು, ತೇಪೇಕವುದಿ, ದಿಮಡಿ, ದಗದ, ಕುಂಬಾರ, ತಳವಾರ, ಕಂಬಾರ, ಕುಲುಮೆ ಇದ್ದಲಿ, ಹರಲಿ, ಬಳ್ಳಹಣ್ಣು, ಅಂಗಿ, ಕುಂಚಿಕುಲಾಯಿ, ತಗಲೂ ತಾಟೀ, ಚಿಟುಕಾಡಿಸು, ಮಕಾಡಾ, ಎಕ್ಕಲಗಾಣ, ಭೂತನೃತ್ಯ, ಕಡಿಗೋಲ, ಕಂಬು, ಮಳಗಿ, ಬುಸುಬುಸುನಾಗ, ಕಾಮನಕಣ್ಣೀರು,

ಬಾರಕೋಲ, ಕಣ್ಣಕಟ್ಟು, ಮಣ, ತೊಲ, ಗುಂಜಿ, ಕುಂಟಿ, ಕೂರಗಿ, ಬಾಳಿ, ಕಾಬಾಳಿ, ತಂಬಲ, ಪುಂಗಿ, ಸನಾದಿ, ನಾಗಸ್ವರಕಾಯಿ, ಕಾಹಳಿ, ಲಡಬಡಾ, ಬಡಬಡಿಕೆ, ಸೋಬಾನೆ, ಮದುಗುಣಿಕೆ, ರಂಗತಾಲೀಮು, ರಂಗಸಜ್ಜಿಕೆ, ಕಂಬಳಿಹುಳ, ದೊಡ್ಡಾಟ, ಪಾರಿ ಜಾತ, ಮಲಮಲಾ, ಗಮಾಗಮಾ, ಕವಣೆ, ಊದುಗೋಳವಿ, ತಂಬೂರಿ, ಹಂಗಾಮ, ಬಹುರೂಪಿ, ತಿತ್ತಸಾಗಡೆ, ಟಿಂವಕ, ಟಿಂವಕ, (ತಂತುವಾದ್ಯದ ಧ್ವನಿ)ಮುತ್ತು, ಬಾಸಿಂಗ, ನತ್ತು, ಮೂಗುಬಟ್ಟು, ಕಂಕಣ, ಕಾಲುಂಗುರ, ಗೆಜ್ಜೆ, ಪೈಜಣ, ಕಡಗ, ಮೂಗುತಿ, ಬೆರಳಿನುಂಗುರ, ಓಲೆ, ತೋಳಬಂದಿ, ಕಾಡಿಗೆ, ಕುಂಕುಮ, ಅರಿಶಿಣ, ಬೆಳ್ಳಿಹರಳು, (ಕಿರಿಬೆರಳಿಗೆ) ರತ್ನಧಮಳ, ಹವಳ ಗೋಪು, ಕೊರಳಕುಂರಿ, ಸುತ್ರ, ಜಾವರಿ, ಬುಗಡಿ, ತುಳಸೀವಾಲಿ, ಮುತ್ತಿನಮೂಗುತಿ, ವಜ್ರದ ಕಡಗ, ಕೈಕಡಗ ಇತ್ಯಾದಿ ಇತ್ಯಾದಿ-ಸಹಸ್ರಾರು, ಪ್ರಕೃತಿ ಪರಿಸರದ, ಜೀವನ ಪರಿಸರದ ಸೊಗಸಾದ ಜಾನಪದೀಯ ಶಬ್ದಗಳು ಬೇಂದ್ರೆ ಕಾವ್ಯಗದ್ದುಗೆಯನ್ನು ಏರಿದವು. ಬೇಂದ್ರೆಯವರು ಸಾಮಾನ್ಯರಲ್ಲಿ ರೂಢಮೂಲನಾಗಿದ್ದ ಬಳಕೆ ಮಾತುಗಳನ್ನು ಹೇರಳವಾಗಿಯೇ ಹೆಕ್ಕಿ ಭಾವಗೀತೆಗಳಲ್ಲಿ ತುಂಬಿರುವುದು ಕನ್ನಡ ಭಾಷಾಕೋಶ ವನ್ನು ಶ್ರೀಮಂತಗೊಳಿಸಿದಂತಾಗಿದೆ. ತತ್ಸಮ (ಸಂಸ್ಕೃತ) ತದ್ಭವ ಶಬ್ದಗಳಿಗಿಂತಲೂ, ಜನನಾಲಿಗೆಯ ದೇಶಿ ಶಬ್ದಗಳ ಬಳಕೆ-ಪ್ರಯೋಗದಲ್ಲಿ ಬೇಂದ್ರೆಯವರಿಗೆ ಆಸಕ್ತಿ. ಆದರೂ ದೇಸಿ ನುಡಿಗಳ ಜೊತೆಯಲ್ಲಿ ಬೇರೆ ಭಾಷೆಯ ಶಬ್ದಗಳನ್ನು ಬಳಸಿ. ತಮ್ಮ ಭಾಷಾವೈಶಾಲ್ಯವನ್ನು ಪ್ರದರ್ಶಿಸಿದ್ದಾರೆ. ಏನೇ ಆದರೂ ಶಬ್ದಗಾರುಡಿಗರಾದ ಶ್ರೀಬೇಂದ್ರೆಯವರು, ಜಾನಪದ ಪದಭಂಡಾರವನ್ನು ಸೂರೆಗೈದು. ಜನಪದ ಶಬ್ದಕೋಶದ

ಶ್ರೀಮಂತಿಕೆಗೆ ಹೊಸಗನ್ನಡದ ಮೊದಲ ಕವಿಯಾಗಿದ್ದಾರೆ. ಬೇರೆ ಬೇರೆ ವೃತ್ತಿ, ವರ್ಗ, ಕಲೆಗಳಿಗೆ ಸಂಬಂಧಿಸಿದ ಹಾಗೂ ದಿನನಿತ್ಯ ಸಾಮಾನ್ಯರು ತಮ್ಮ ವ್ಯವಹಾರದಲ್ಲಿ ಪ್ರಯೋಗಿಸುವ ದೇಸಿನುಡಿ ಮಾತುಗಳು. ಬೇಂದ್ರೆಯವರಲ್ಲಿ ಸಹಸ್ರ ಸಂಖ್ಯೆಯಲ್ಲಿ ದೊರಕುತ್ತವೆ. ಅವನ್ನೆಲ್ಲ ಸಂಗ್ರಹಿಸಿ, ವಿಶ್ಲೇಷಿಸುವ ವ್ಯಾಪಕ ಅಧ್ಯಯನದ ಆವಶ್ಯಕತೆಯಿದೆ.

ದೇಸಿನುಡಿಯಲ್ಲಿ ಸ್ಥೂಲವಾಗಿ ಆರು ಪ್ರಕಾರಗಳನ್ನು ಮಾಡಬಹುದು. ಅವು- ೧. ಬೈಗುಳದ ನುಡಿ ೨. ಧ್ವನ್ಯುಕ್ತಿ ೩. ಜೋಡುನುಡಿ ೪. ಪಡೆನುಡಿ ೫. ನಾಣ್ಣುಡಿ ಮತ್ತು ೬. ಒಗಟು.

೧) ಬೈಗುಳದ ನುಡಿಗಳು: ಗ್ರಾಮೀಣರಿಗೆ ಮಾತಿನಷ್ಟೇ ಸಹಜ ಬಯ್ಗುಳದ ನುಡಿಗಳು. ಕಿಡಿಕಾರುವ ನುಡಿಗಟ್ಟುಗಳೇ ಬೈಗಳು. ಇವು ತೀರ ವೈಯಕ್ತಿಕವೆನಿಸಿದರೂ, ಸಾಮಾಜಿಕ ಒಪ್ಪಿಗೆ ಪಡೆದು ಚಲಾವಣೆಯಲ್ಲಿರುತ್ತವೆ. ನೋವು ಉಂಟುಮಾಡುವುದೇ ಇವುಗಳ ಸಾಮಾನ್ಯ ಉದ್ದೇಶ. ಆದರೂ 'ಬೈದು ಹೇಳಿದವ ಬುದ್ಧಿ ಹೇಳಿದ.' ಬೈದು ಹೇಳಾವನ್ನ ನಂಬು-ಇಂಥ ಸಮಾಜ ಒಪ್ಪಿತಗಾದೆಗಳಲ್ಲಿ, ಬೈಯುವುದರಿಂದ ವ್ಯಕ್ತಿ-ಸಮಾಜ ಸುಧಾರಿಸುತ್ತದೆಂಬ ಭಾವವೇ ಅಡಗಿದಂತಿದೆ. ಅನೇಕ ಕವಿ ಸಾಹಿತಿಗಳು ತಮ್ಮ ಕೃತಿಗಳಲ್ಲಿ ಬೈಗುಳನ್ನು ಉಲ್ಲೇಖಿಸಿದ್ದುಂಟು. ಕೆಲವು ಬೈಗುಳಗಳು ಅಸತ್ಯವಾಗಿದ್ದರೂ ಗ್ರಾಮೀಣರು ಸತ್ಯವೆಂದೇ ಬಳಸುತ್ತಾರೆ. ಇದೇ ಮನೋಧರ್ಮದ. ಬೇಂದ್ರೆಯವರು ಒಂದು ನಿರ್ದಿಷ್ಟ ಉದ್ದೇಶಸಾಧನೆಗಾಗಿ, ತನ್ನ ಕಾಲದಲ್ಲಿ ರೂಢಿಯಲ್ಲಿದ್ದ ನೂರಾರು ಬೈಗುಳಗಳನ್ನು ಕವಿತೆಗಳಲ್ಲಿ ಉದ್ಧರಿಸುತ್ತಾರೆ; ಬೈಗುಳಗಳ ವಿಷಯದಲ್ಲಿ ಬೇಂದ್ರೆಯವರಿಗೆ ಶ್ಲೀಲಾಶ್ಲೀಲದ

ಪ್ರಶ್ನೆಯಿಲ್ಲ, ಜಾನಪದರಂತೆ. ಹೀಗಾಗಿ ಬೈಯ್ಗುಳದ ಪ್ರಯೋಗದಲ್ಲಿಯೂ ಬೇಂದ್ರೆಯವರದು ವಿಶಿಷ್ಟವಿಧಾನ. ಕೆಲವು ಸ್ಯಾಂಪಲ್‌ಗಳನ್ನು ನೋಡಿ;

ಕೆಡಿಗೇಡಿ, ಎಬಡಹುಳ್ಳಿಗ, ಬಾಡಿ, ಗೆಣ್ಯಾ, ಗೆಣತಿ, ಯಲ್ಲಿ, ಮಲ್ಲಿ, ಪಾರಿ, ತಾರೀ, ನಿಂಗೀ, ಸಂಗಿ, ಮಳ್ಳ ಬಿಕನಾಸಿ, ತಾಯಿಗ್ಗಂಡ, ಹುಚ್ಚಮಲ್ಲೀ, ಮಂಗ್ಯಾನಮಗನ, ಮಗನ, ಲಫಂಗ, ಲುಚ್ಚಾ, ಬಚ್ಚಾ, ಹಾದರಗಿತ್ತಿ, ಎತ್ತ್ಯಾ-ಕತ್ತೆ, ಕಳ್ಳೀ, ಸಂಗ್ಯಾ, ಬಾಳ್ಯಾ, ಗಂಗಿ, ಈರ್ಯಾ, ಬೇವಾರ್ಸಿ, ಗಂಟುಚವುಡಿ, ಮಳ್ಳೀರಂಡಿ, ಬೋಳಾದಮುಂಡೆ, ರತಿಯಾಗಿರಂಡೆ, ನಾಯಿಮಕ್ಕಳು, ಹುಚ್ಚುಖೋಡಿ, ರಂಡಿಮುಂಡಿ, ಮಳ್ಳ, ಹಡಿಸೀದ, ಡಬಗಳ್ಳ, ಲುಚ್ಚೇರ್, ಕೆತ್ತೇಬರ್ಝೀ, ಕುಂಡಿಚಿವುಟು, ಕತ್ತೆ, ಕಳ್ಳಡುಕ, ಎಡ್ಡರಾಮಿ, ಎತ್ತು ಉಚ್ಚಿಹೊಯ್ದ್ಹಾಂಗ, ಬಾವಾ, ಮೂಗೇಡಿ, ಕುಂಠ, ಖೊಟ್ಟಿ, ಮೂಳಾ, ಖೋಡಿ, ಬೇಕೂಫ, ಕೆಪ್ಪ, ಕುಂಟ, ತುಂಟ, ಭಾಡಖಾಂವ, ಧಾನಚೋರ, ಮುಂತಾದ ಜಾನಪದ ಬದುಕಿನ ಅಂಗವೇ ಆದ ಬೈಗಳನ್ನು. ಅವುಗಳ ನಾಡಿ ಹಿಡಿದೇ ಬೇಂದ್ರೆ ಮಿಡಿಯುತ್ತಾರೆ. ಬೈದವನ ಬಾಯಿವಾಸನೆ, ಬೈಸಿಕೊಂಡವನ ಮೈವಾಸನೆ, ಈ ಬೈಗುಳ ಸಾಹಿತ್ಯದ ವೈಶಿಷ್ಟ್ಯವಾದರೂ, ಜನಜೀವನವನ್ನು ಅದೆಷ್ಟು ನೇರವಾದ ವರ್ಣಗಳಿಂದ ಢಾಳವಾಗಿ ಚಿತ್ರಸುತ್ತವೆ ಈ ಬೈಗುಳ ನುಡಿ ಸಮುದಾಯ.[೨೬]

೨) **ದ್ವಿರುಕ್ತಿ:** 'ಆಮ್ರೇಡಿತ' ಅಥವಾ 'ದ್ವಿರುಕ್ತಿ' ಎಲ್ಲ ಭಾಷೆಗಳಲ್ಲಿಯೂ ಕಂಡುಬರುವ ಮಹತ್ವದ ಭಾಷಿಕ ಅಂಶ. ಕನ್ನಡ ಜಾನಪದದಲ್ಲಿ ಇವುಗಳ ಸಂಖ್ಯೆ ಅಪಾರ. ದ್ವಿರುಕ್ತಿಗಳು ಸಾಂದರ್ಭಿಕ ಹಿನ್ನಲೆಯಲ್ಲಿಯೇ ತಮ್ಮ ಅರ್ಥದ ವ್ಯಾಪ್ತಿಯನ್ನು ಬಿಚ್ಚಿಕೊಳ್ಳುತ್ತವೆ. ಯಾವುದೇ ಒಂದು ಸಂದರ್ಭದಲ್ಲಿ ಒಂದೇ

ದ ಎರಡು ಸಲ ಬಳಸಿಕೊಳ್ಳುವುದಕ್ಕೆ 'ದ್ವಿರುಕ್ತಿ' ಎನ್ನುವರು. ಅವು ಸಾರಿ ಎರಡಕ್ಕಿಂತ ಹೆಚ್ಚು ಬರಬಹುದು. ಅವುಗಳಿಗೆ ಒತ್ತುಕೊಟ್ಟು, ಅದರ ಅರ್ಥವನ್ನು ಗಟ್ಟಿಗೊಳಿಸುವುದಕ್ಕಾಗಿ ದ್ವಿರುಕ್ತಿ'ಗಳು ತಲೆದೋರಿದಂತಿವೆ. ಜನಭಾಷೆಯು ಈ ಮಹತ್ವದ ಅಂಶವನ್ನು ಬೇಂದ್ರೆಯವರು ಸಹಜವಾಗಿ ಬಳಸಿ, ಭಾವಗೀತೆಗಳಿಗೆ ಜೋರು ತುಂಬಿಕೊಂಡಿದ್ದಾರೆ. ಕೆಲವು ದ್ವಿರುಕ್ತಿಗಳನ್ನು ಬೇಂದ್ರೆ ಕವನಗಳಿಂದ ಸಂಗ್ರಹಿಸಲಾಗಿದೆ.

ಪಟಪಟ, ಪುಟಪುಟ, ಮಿನಮಿನ, ಗಾವುದ ಗಾವುದ, ತೂಗಿತೂಗಿ, ನೋಡನೋಡ, ನಡದದ ನಡದದ, ನೊಂದೇನ ನೊಂದೇನ, ಗುಜುಗುಜು, ಗಮಗಮ, ಕಿರಿಕಿರಿ, ಕಿಲಿಕಿಲಿ, ಹಿರಿಹಿರಿ, ಸರಿಸರಿ, ಗರಿಗರಿ, ಗಿರಿಗಿರಿ, ಶಿವಶಿವ, ಬಳಬಳ, ಮುಲಿಮುಲಿ, ತೆನೆತೆನೆ, ಬಣ್ಣಬಣ್ಣ, ಮಾಲೆಮಾಲೆ, ತೆರೆತೆರೆ, ಕೂಡಿಕೂಡಿ, ನಿಗಿನಿಗಿ, ದುಡಿದುಡಿ, ತರತರ, ಆಡುತ ಆಡುತ, ಗುಣುಗುಣು, ಕುಲುಕುಲು, ಮುಳುಮುಳು, ಗಲ್ಲಗಲ್ಲ, ದಿನದಿನ, ಹನಿಹನಿ, ಗುಲುಗುಲು, ರಣರಣ, ಗಿಲಗಿಲ, ಸುಳ್ಳಸುಳ್ಳ, ಝಣಝಣ, ಹಿಡಿಹಿಡಿ, ಬೆಳಿಬೆಳಿ, ಹೊಸಹೊಸ, ಬಲುಬಲು, ಕೂಡಿಕೂಡಿ, ಹನಿಹನಿ, ಏಳಿಏಳಿ, ಕೇಳಿಕೇಳಿ, ಗಾಳಿಗಾಳಿ, ಸುಳಿಸುಳಿ, ನನ್ನನನ್ನ, ತನ್ನತನ್ನ, ಲೊಟಲೊಟ, ಪದೆಪದೆ, ಜಿರಿಜಿರಿ, ತೆರೆತೆರೆ, ಟುಕುಟುಕು, ಡುಗುಡುಗು, ಸುಡುಸುಡು, ಭಲೇಭಲೇ, ಝಗಝಗ, ಧಗಧಗ, ಈಟಈಟ, ಸಿಡಿಸಿಡಿ, ಉಬ್ಬಿಉಬ್ಬಿ, ತುಂಬಿತುಂಬಿ, ದಾಟಿದಾಟಿ, ಆರೆಆರೆ, ಗುಡುಗುಡು, ಮೊತ್ತಮೊತ್ತ, ಸಳಸಳ, ತಪತಪ, ಕಿಡಿಕಿಡಿ, ವ್ವಾಗವ್ವಾಗ, ಹೊಸಹೊಸ, ಕುಣೆಕುಣೆ, ಚುಮುಚುಮು.

ದಡದಡ, ಮಿರಿಮಿರಿ, ಮಿಕಿಮಿಕಿ, ನಡೆನಡೆ, ಗುಡಿಗುಡಿ, ಅಮುಅಮು, ನಕ್ಕುನಕ್ಕು, ಜಿಕ್ಕಜಿಕ್ಕೆ, ಗಪಿಗಪಿ, ಮಿಟಿಮಿಟಿ, ಮುಡಿಮುಡಿ, ಸಿಗಿಸಿಗಿ, ಟಿಬಿಟಿಬಿ, ಲಟಲಟ, ಥರಾಥರಾ, ಬನಾಬನ್, ಚಳೀಚಳೀ, ಮುಂತಾದವು. ದ್ವಿರುಕ್ತಿಗಳಲ್ಲಿ ಒಂದು ವಿಶಿಷ್ಟ ಬಗೆಯ ಪ್ರಕಾರವಿದೆ; ಅದು 'ಮಾರುಲಿ'ಪದಗಳು.

ಮಾರುಲಿ ಪದಗಳು: (Echo Words): ಜೋಡುಪದಗಳಲ್ಲಿಯ ಪೂರ್ವಪದದೊಂದಿಗೆ, ಅದರ ಮೊದಲ ಅಕ್ಷರವನ್ನು ಕ್ರಮಬದ್ಧವಾಗಿ ವಿರೂಪಗೊಳಿಸಿ, ಅದೇ ಪದವನ್ನು ಬಳಸುವುದಕ್ಕೆ 'ಮಾರುಲಿ ಪದಗಳು' ಅಥವಾ 'ಪ್ರತಿಧ್ವನಿ ಪದಗಳು' (Echo Words) ಎನ್ನುತ್ತಾರೆ. ಅಂದರೆ, ಇಲ್ಲಿ ಮೂಲದ ಒಂದು ಅರ್ಥವತ್ತಾದ ಪದವಿರುತ್ತದೆ. ಇದರ ಜೊತೆ ಅದೇ ಬಗೆಯ, ಆದರೆ ಅರ್ಥರಹಿತವಾದ ಇನ್ನೊಂದು ಪದ ಸೇರಿರುತ್ತದೆ. ಇವೆರಡರ ಬಳಕೆಯಿಂದ ಮೂಲಪದಕ್ಕೆ ಹೆಚ್ಚಿನ ಒತ್ತು ಬರುತ್ತದೆ. ಇಂಥ 'ಮಾರುಲಿ ಪದಗಳ'ನ್ನು ಜನಪದರು ನಿತ್ಯ ನಿರಾಯಾಸವಾಗಿ ತಮ್ಮ ಭಾಷೆಯಲ್ಲಿ ಬಳಸುತ್ತಾರೆ. ಆಡುಮಾತಿನ ಅಂದಕ್ಕಾಗಿ, ಅದರ ಬಿಗುವಿಗಾಗಿ ಇಂಥ ಪದಗಳು ಪ್ರಯೋಗಗೊಳ್ಳುತ್ತಿರುತ್ತವೆ. ಕನ್ನಡದಲ್ಲಿ ಆದಿಯಿಂದಲೂ ಬಳಕೆಗೊಳ್ಳುತ್ತ ಬಂದ ಈ ನುಡಿಪ್ರಯೋಗ ಹೆಚ್ಚು ಶಕ್ತಿಶಾಲಿಯಾಗುವುದು ವ್ಯಂಗ್ಯದ ಅಭಿವ್ಯಕ್ತಿಯಲ್ಲಿ. ಜನವಾಣಿಯಲ್ಲಿರುವ ಈ ನುಡಿಪ್ರಯೋಗವನ್ನು, ಕಾವ್ಯವಾಣಿಯಲ್ಲಿ, ಹೊಸಗನ್ನಡದಲ್ಲಿ ತಂದ ಬೇಂದ್ರೆಯವರೇ ಮೊದಲಿಗರಿರಬೇಕು. ಬೇಂದ್ರೆ ಭಾವಗೀತೆಗಳಲ್ಲಿ ಉಲ್ಲೇಖಿತವಾದ ಕೆಲವು ಮಾರುಲಿ ಪದಗಳು: ನಾಚಿಗೀಚಿಗಿ, ಅನ್ನಗಿನ್ನ, ದೇವಗೀವ, ಕರಮಗಿರಮ, ಬಾಡಿಗೀಡಿ, ರಾಜ್ಯಗೀಜ್ಯ, ನದಸಗಿದಸ, ತಂದ್ವಾಗಂದ್ವ,

ತುಗೀತು, ಮಣಗು ಗಣು, ಕಬ್ಬು/ಗಬ್ಬು, ಹರಟು/ಗರಟು,
ಪ್ಪು/ಒಪ್ಪು, ಕಾಟಾಗೀಟ, ದೃಷ್ಟಿ/ಗಿಷ್ಟಿ, ಮಂಡಲ/ಗಿಂಡಲ,
ಟ್ಟು/ಗಿಟ್ಟು, ಮನೆಮಾರು, ಆಸ್ತಿಪಾಸ್ತಿ, ಇತ್ಯಾದಿ.

೩) ಜೋಡುನುಡಿ: ಅರ್ಥದಲ್ಲಿ ಸಾಮ್ಯವಿರುವ ಎರಡು
ಥವಾ ಹೆಚ್ಚು ಪದಗಳು, ಭಾವದ ಸ್ಪಷ್ಟತೆಗಾಗಿ ಇಲ್ಲವೆ,
ಧಿಕ್ಯಾಯ ವಿಶೇಷಗಳಿಗಾಗಿ ಬಳಕೆಗೊಂಡರೆ, ಅವುಗಳನ್ನು
ೋಡುನುಡಿ, ಕೂಡುನುಡಿ ಅಥವಾ ಮೇಳನುಡಿ ಎನ್ನುವರು.
ಂತಹ ಜೋಡುನುಡಿಗಳು ಕನ್ನಡ ಜನತೆಯ ಭಾಷೆಯ ಒಂದು
ಶೇಷತೆ. ಕನ್ನಡ ಭಾಷೆಯಲ್ಲಿ, ಇವುಗಳ ಹೇರಳ ಬಳಕೆಯಿದೆ.
ಂದ್ರೆ ಭಾವಗೀತೆಗಳಲ್ಲಿಯೂ ಜೋಡುನುಡಿಗಳು ಅಧಿ
ಂಖ್ಯೆಯಲ್ಲಿ ಬಳಕೆಗೊಂಡಿವೆ. ಕೆಲವನ್ನು ನೋಡಬಹುದು.
ಟಮುಟ (ಮೋಸ), ಅಡಿಪಾಯ (ಅಡಿ - ಪಾಯ) ಅಣುರೇಣು
ಸಣ್ಣ ಸಣ್ಣ) ಕೀಸರಬಾಸರ (ಅಪಸ್ವರ) ಗುಡಿಗುಂಡಾರ, ಟೇಂಪಕ
ಂಬಕ (ತಂತಿವಾದ್ಯಧ್ವನಿ), ಬಟ್ಟೆಬರೆ, ಬಟ್ಟಬಯಲು,
ಟ್ಟಹೊಸ, ಲೋಕರೂಢಿ, ಮುಳಮುಪ್ಪಡಿ, ಹಾದಿಬೀದಿ,
ಡಗಂಟೆ, ತಂತ್ರಮಂತ್ರ, ಜೊಳ್ಳುಜೊಟ್ಟು, ಗಪ್ಪುಗಡದ್ದು,
ಗಲುತಂಟೆ, ನರಿ ನಾಯಿ, ಕೂಲಿಕುಂಬಳಿ, ಮನೆಮಠ, ಷೈಮನ,
ನೆರು, ಕುರಿಆಡು, ಸೊಪ್ಪುಸವದಿ, ಗಿಡಮರ, ಬೆಳೆಕುನೆಳಲು,
ಡಗುಬಿನ್ನಾಣ, ಗಿಡಬಳ್ಳಿ, ಹೊಲಹುಲ್ಲು, ಗುಡಿಗೋಪುರ,
ನಿದ್ದೆ, ತಿರುಕುಹುರಳು, ಕೆರೆಕುರೊಳೆ, ಹುಲ್ಲುಹೂವು,
ಟ್ಟಬರಿಸಿ, ಇಮ್ಮುಬಿಮ್ಮುಖ, ನೆಲಮುಗಿಲು, ಬಿಸಿಲು-ಮಳೆ-
ಳಿ, ಸಂದಿಗೊಂದಿ, ತಗ್ಗುತೆವರು, ಹದಬೆದೆ, ಗದ್ದುಗಲ್ಲು, ಪ್ರಕೃತಿ
ಕೃತಿ, ತಾಯ್ತಾಯಿ, ಚಿಲಿಪಿಲಿ, ಹೋಳಿಬಳ್ಳಿ, ಹುಲ್ಲುಕರಿಕೆ,
ಳೆಕಡಿ, ಕಾಡುಮೇಡು, ಎಣ್ಣೆಬೆಣ್ಣೆ, ಪಚ್ಚೆಸಯಿರು.

ಕೊಡುಕೊಳೆ ಇತ್ಯಾದಿ ಜೋಡುನುಡಿಗಳನ್ನು ಸ್ಥೂಲವಾಗಿ ಮೂರು ಗುಂಪುಗಳಲ್ಲಿ ವರ್ಗೀಕರಿಸಬಹುದು. ೧).ಸಮಾನಾರ್ಥಕ ಪದಗಳಿಂದಾದ ಜೋಡುನುಡಿ. ೨).ಸಜಾತೀಯ ಪದಗಳಿಂದಾದ ಜೋಡುನುಡಿ. ೩).ವಿಜಾತೀಯ ಪದಗಳಿಂದಾದ ಜೋಡುನುಡಿ. ಈ ಮೂರು ಬಗೆಯ ಜೋಡುನುಡಿಗಳಿಗೆ ಉದಾಹರಣೆಗಳು ಈ ಮೇಲೆಯೆ ಇವೆ. ಆಡುಮಾತಿಗೆ ಒತ್ತು ಕೊಡುವುದಕ್ಕಾಗಿ ಮತ್ತು ಸೊಗಸನ್ನುಂಟು ಮಾಡುವುದಕ್ಕಾಗಿ ಇಂಥ ಜೋಡುನುಡಿಗಳನ್ನು ಬಳಸಲಾಗುತ್ತದೆ.

೪) **ಪಡೆನುಡಿ (ನುಡಿಗಟ್ಟು):** "ನಾಣ್ಣುಡಿ (ಗಾದೆಮಾತು) ಒಂದು ವಾಕ್ಯವಾದರೆ, ಪಡೆನುಡಿ ಒಂದು ನುಡಿಗಟ್ಟು. ಒಂದು ನುಡಿಗಟ್ಟು ವಾಕ್ಯದಲ್ಲಿಯೇ ನಿಂತರೆ ಸಮಾಸ, ಲಕ್ಷ್ಯದಲ್ಲಿ ವ್ಯವಹರಿಸಿದರೆ ಪಡೆನುಡಿ. ನಾಣ್ಣುಡಿ-ಪಡೆನುಡಿಗಳಲ್ಲಿಯ ಅಂತರವಿದು."[೨೭] ಪಡೆನುಡಿ ಅಥವಾ ನುಡಿಗಟ್ಟು (Idiom) ಜನಭಾಷೆಯ ಕೆನೆ. ವ್ಯಾಪಕ ವಿಷಯವನ್ನು ಎರಡೇ ಶಬ್ದಗಳಲ್ಲಿ, ಹೆಚ್ಚೆಂದರೆ ಮೂರು ಶಬ್ದಗಳಲ್ಲಿ ಅಡಗಿಸಿ, ವಿಶಿಷ್ಟ ಅರ್ಥದಿಂದ ಬಳಕೆಗೊಳ್ಳುತ್ತ ಭಾವತೀವ್ರತೆಯನ್ನುಂಟು ಮಾಡುವುದೇ 'ಪಡೆಮಾತು'. ಜನಪದ ದೈನಂದಿನ ವ್ಯವಹಾರದಲ್ಲಿ ಸಹಜವಾಗಿ ಬಳಕೆಯಾಗುವ ಇದು ಭಾಷೆ ಹುಟ್ಟಿದಂದಿನಿಂದ ಬಳಕೆಯಲ್ಲಿದೆ. ಕವಿ ಬೇಂದ್ರೆಯವರು ತನ್ನ ಪರಿಸರದ ಹಲವಾರು ಪಡೆಮಾತುಗಳನ್ನು ಭಾವಗೀತೆಗಳಲ್ಲಿ ಉಲ್ಲೇಖಿಸಿ, ಭಾವಗೀತಾರ್ಥವನ್ನು ಹಿಗ್ಗಿಸಿಕೊಂಡಿದ್ದಾರೆ. ಜನಪದರ ಜಾಣ್ಮೆ, ಅನುಭವ, ಧ್ವನಿಗಳೆಲ್ಲವನ್ನೂ ಪಡೆಮಾತು ಬಿಂಬಿಸುತ್ತದೆ. ಇದು ಬೇರೊಂದು ಸಾಂಕೇತಿಕ ಅರ್ಥವನ್ನೊಳಗೊಂಡಿದೆ. ಭಾಷೆಗೆ ಬಲವನ್ನು ನೀಡುವ ಒಂದು ಶಕ್ತಿವಿಶೇಷ. ಈ ಬಗೆಯ ವಾಗ್ರೂಢಿಗಳನ್ನು ಬೇಂದ್ರೆಯವರಿಂದ ಶೋಧಿಸಲಾಗಿದೆ. ಪರಿಶೀಲನೆಗಾಗಿ ನೋಡಿ:

ಮುಂಗೈಯಾಸರೆ. ತುಟಿಕಚ್ಚಿಹಿಡಿ. ದಿಕ್ಕುಪಾಲಾಗು. ಬಲೆಬೀಸು. ಬಿಸಿಲ್ಗಣ್ಣು. ಕುದಿವೆಸರು. ಬೆಳಬಿಸಿಲು. ಗಾಳಿಸವಾರಿ. ಬಿಸಿಲುಗುದುರಿ. ಮನಸ್ಸುಮಾಪಿನಕಾಯಿ. ಗಾಳಿಮಾತು. ಮೂಗುಮುರಿ. ಹೊತ್ತುಗೊತ್ತು. ಬಿಟ್ಟಗಣ್ಣುಬಿಟ್ಟು. ಮಣ್ಣುಗೂಡು. ಕಣ್ಣುಕಿವುಚು ಹುಬ್ಬುಗಂಟಿಕ್ಕು. ಬೂದಿಮುಚ್ಚಿದ ಕೆಂಡ. ಮನೆ/ ಮುಳ್ಳುಚುಚ್ಚಲಿ. ಸುಡುಗಗಾಳಿ (ಕಟಿಗುಳಿ) ಮೈಮುರಿ. ಬರಿಗೈಲಿ ಮೊಳಹಾಕು. ಗಾಳಿಗೋಪುರ. ಗಾಳಿಗುದುರಿ. ಜಂಭದಕೋಳಿ. ಹರಿಹಾಯು. ಕಾಲಬಿಚ್ಚಿದ ಕತ್ತಿ. ಅಡ್ಡಗೋಡೆಯ ದೀಪ. ಮಣ್ಣುಮುಕ್ಕದ. ಮುಂಗೈಅರಗಿಳಿ. ಮೊದಲಾದುವು.

೫) ನಾಣ್ಣುಡಿ(ಗಾದೆ): ಜನಸಾಮಾನ್ಯರ ಅನುಭವ ಪ್ರಧಾನವಾದ 'ಗಾದೆ', ಬದುಕಿನ ನೇರ ಅನುಭವದಿಂದ ಸ್ಫುರಿಸಿದ್ದು. ಗ್ರಾಮೀಣ ಪ್ರತಿಭಾವಂತರಲ್ಲಿ ಸಮುದಾಯದ ಅನುಭವ ಹರಳುಗೊಂಡು. ಅವರಿಂದ ವಿಶಿಷ್ಟ ರೀತಿಯಲ್ಲಿ ಅಭಿವ್ಯಕ್ತಗೊಂಡು. ಸಮುದಾಯದ ಒಪ್ಪಿಗೆ ಪಡೆದು ಚಲಾವಣೆಗೆ ಬಂದಾಗ. 'ನಾಣ್ಣುಡಿ' ಅಥವಾ 'ಗಾದೆ' ಎನಿಸಿಕೊಳ್ಳುತ್ತದೆ. ಗಾದೆಗಳಲ್ಲಿ 'ಕಂಠಸ್ಥ' ಮತ್ತು 'ಗ್ರಂಥಸ್ಥ' ಗಳೆಂದು ಎರಡು ವಿಧ. ಕವಿ, ಪಂಡಿತರ ಸ್ವತಂತ್ರ ಸೃಷ್ಟಿ 'ಗ್ರಂಥಸ್ಥ'ಗಾದೆಗಳಾದರೆ. ನಿರಕ್ಷರ ಕುಕ್ಷಿಗಳ ಸಮುದಾಯ ಸೃಷ್ಟಿ 'ಕಂಠಸ್ಥ'ಗಾದೆಗಳು. 'ಕಂಠಸ್ಥಗಾದೆ' ಗಳೇ ಜನಪದ ಗಾದೆಗಳು. ಇವುಗಳನ್ನು ತಮ್ಮ ಕಾವ್ಯಕೃತಿಗಳಲ್ಲಿ ಹದವರಿತು ಬಳಸಿಕೊಳ್ಳುವ ಪರಂಪರೆ ಪಂಪನಿಂದಲೇ ಆರಂಭಗೊಂಡು, ಇಂದಿನ ದಲಿತ-ಬಂಡಾಯ ಕಾವ್ಯ ಪ್ರಯೋಗಗಳ ವರೆಗೂ ಮುಂದುವರಿದುಕೊಂಡು ಬಂದುದನ್ನು ಗಮನಿಸಿದರೆ.

ಗಾದೆಗಳು ಚಿರಂತನ ನಿರಂತರತೆ ಹಾಗೂ ಸಾರ್ವಕಾಲಿಕ ಸತ್ಯಗಳನ್ನು ಕಾಯ್ದುಕೊಂಡಿರುವುದು ಗೋಚರಿಸುತ್ತದೆ. ಕಾವ್ಯದಲ್ಲಿ ಗಾದೆಗಳ ಪ್ರಯೋಗ ಪರಂಪರೆಯನ್ನು ತುಂಬ ಸಶಕ್ತವಾಗಿ ಮುಂದುವರಿಸಿಕೊಂಡು ಬಂದ ಆಧುನಿಕ ಕವಿ ಬೇಂದ್ರೆ, ಗಾದೆಮಾತುಗಳನ್ನು ನಿಶ್ಚಿತ ಉದ್ದೇಶಕ್ಕಾಗಿ, ನಿಷ್ಕಳವಾಗಿ ಉದ್ಧರಿಸಿ, ತನ್ನ ಅನುಭವದ ಅಭಿವ್ಯಕ್ತಿಗೆ ಮೊನಚನ್ನು ಗಟ್ಟಿತನವನ್ನು ತಂದುಕೊಂಡಿದ್ದಾರೆ. ಬೇಂದ್ರೆಯವರು ತಮ್ಮ ಕಾಲದಲ್ಲಿ ಚಲಾವಣೆಯಲ್ಲಿರುವ ಗಾದೆಯನ್ನು ಇದ್ದುದು ಇದ್ದಂತೆ ನೇರವಾಗಿ ಬಳಸಿದ್ದಾರೆ. ಕೆಲವೊಮ್ಮೆ ಸಂಸ್ಕರಿಸಿ ಉದ್ಧರಿಸಿದ್ದಾರೆ, ಇನ್ನು ಕೆಲವೊಮ್ಮೆ ಚಾಲ್ತಿಯಲ್ಲಿರುವ ಗಾದೆಯ ಆಧಾರದಿಂದ ಹೊಚ್ಚಹೊಸ ಗಾದೆಯನ್ನೂ ಸೃಷ್ಟಿಸಿಕೊಂಡು ಉಲ್ಲೇಖಿಸಿದ್ದಾರೆ. ಇಂಥವುಗಳನ್ನೇ ಗ್ರಂಥಸ್ಥ ಗಾದೆಗಳೆನ್ನಬಹುದು. ಈ ಹಿನ್ನೆಲೆಯಲ್ಲಿ ಜನಪದರ ಗಾದೆಮಾತುಗಳು ಕವಿ-ಕಾವ್ಯಗಳ ಗಾದೆ ಏರಿರುವಂತೆ, ಕವಿಗಳ ಗಾದೆಮಾತುಗಳು ಬೀದಿಗಿಳಿದು, ಜನಪದರ ಬಾಯಿಮಾತುಗಳಾಗಿರುವುದು ಒಂದು ಸಹಜ ಪ್ರಕ್ರಿಯೆ. ಅವುಗಳು ಹಾಸು-ಹೊಕ್ಕು ಎಳೆಗಳಾಗಿ ಬೆರೆತು, ಏಕರೂಪ ತಳೆದಿರುವುದೂ ಈ ಗಾದೆಗಳ 'ಗಾಥಾ'. ನೂರಾರು ಜನಪದ ಗಾದೆಗಳ ಉದ್ಧರಣೆಗಳನ್ನು ಬೇಂದ್ರೆ ಕಾವ್ಯದಲ್ಲಿ ಗುರುತಿಸಬಹುದು. ಕೆಲವನ್ನು ಮಾತ್ರ ಸಂಗ್ರಹಿಸಲಾಗಿದೆ.

'ನೂರಾರು ರಾಮಾಯಣ ಕೇಳಿ ಕೇಳಿ
ಹನುಮಂತ ರಾವಣನೋ ? ದಶರಥನೋ ?
ಅಂತ ಪ್ರಶ್ನೆಯನ್ನು ಚರ್ಚೆ ಮಾಡಿದಾ
ರಾಮನ ಹೆಂಡತಿ ಯಾರು ?

ರಾವಣನ ಕೊಂದಾವಾ ವಾಸುದೇವನೋ ?
ರೇವತೀರಮಣ ಬಲರಾಮನೋ ?
ಹಲಧರ ರಾಮನೋ ?

-ರಾಮಾಯಣ ? (ಕಾವ್ಯವೈಖರಿ)

ಎನ್ನುವ ಇದೇ ಪದ್ಯ, 'ಬೆಳತನಕ ರಾಮಾಯಣ ಕೇಳಿ, ಬೆಳಗ್ಗೆ ರಾಮನಿಗೆ ಸೀತಾ ಏನಾಗಬೇಕು ಅಂದ್ರಂತೆ' ಎಂಬ ಗಾದೆಯಿಂದ ಸ್ಫೂರ್ತಿಪಡೆದಿರಬೇಕು. 'ಕಬ್ಬು ಡೊಂಕಾದರೆ ಸಿಹಿ ಡೊಂಕೆ?' 'ಆಕಳು ಕಪ್ಪಾದರೆ ಹಾಲು ಕಪ್ಪೇ'? ಎಂಬ ಸುಪ್ರಸಿದ್ಧ ಗಾದೆಗಳನ್ನೇ ಪಲ್ಲವಿಯಾಗಿರಿಸಿಕೊಂಡು, ಅದರ ಭಾವವನ್ನೇ ಸೂಚಿಸುವ, 'ಕಬ್ಬಿನ ಗಣೆ ಡೊಂಕು. ಅದರ ಹಾಲದು ಡೊಂಕೆ. ಹುಬ್ಬಿನಗೆರೆ ಡೊಂಕು. ಕಣ್ಣೋಟವು ಡೊಂಕೆ. ಬಿಲ್ಲು ಕಂಬಿಯು ಡೊಂಕು. ಬಿಟ್ಟಬಾಣವು ಡೊಂಕೆ. ಹಲ್ಲುಸಾಲದು ಡೊಂಕು. ಬಿದ್ದಕಿರಣವು ಡೊಂಕೆ. ಬಿಂಬಾಳಿ ಮೈಡೊಂಕು. ಅದರ ತಿರುಳದು ಡೊಂಕೆ. ಬಿಂಬಾಧರವು ಡೊಂಕು. ಚುಂಬನವದು ಡೊಂಕೆ. ಬದಿಗೆ ಚಂದ್ರಮ ಡೊಂಕು ಬೆಳುದಿಂಗಳದು ಡೊಂಕೆ. ವಿಧಿಯಿತ್ತ ಕುಲಡೊಂಕು. ನನ್ನ ಪ್ರೀತಿಯು ಡೊಂಕೆ -ಮೊದಲಾದ ಪ್ರತಿಮೆಗಳ ಗುಂಫನವನ್ನೇ 'ರಸಿಕಾ ಹೇಳೋ'! (ಗರಿ) ಎಂಬ ಒಂದು ಕವನ ಮಾಗಿಸಿದ್ದಾನೆ. ಗಾದೆ ಮಾತೊಂದರಿಂದ ಪ್ರಭಾವಿತನಾದ ಕವಿ ಬೇಂದ್ರೆ, ಗಾದೆಗಳ ಮಾಲೆಯಿಂದಲೇ ಕವನ ಕಟ್ಟುವ ಶಕ್ತಕವಿ. ಜನಪದದಲ್ಲಿ ಜನಜನಿತವಾದ ಗಾದೆಗಳಿಗೂ, ಇವರ ಗಾದೆಗಳಿಗೂ ಯಾವುದೇ ವ್ಯತ್ಯಾಸವೇ ಇಲ್ಲ. ನೇರವಾಗಿ ಅಲ್ಲಿಂದ ಎತ್ತಿಕೊಳ್ಳುತ್ತಾರೆ: 'ಸತ್ಯಕ್ಕೆ ಸಾವಿಲ್ಲ' (ಬಾಪೂಜಿ-ಪೂಜೆ: ಕಾವ್ಯವೈಖರಿ); 'ಸತ್ಯಕ್ಕೆ ಸಾವಿಲ್ಲ' (ಶುಭೇಚ್ಛೆ - ಸ್ವಸ್ತಿವಾಚನ: ತಾ

ಲೆಕ್ಕ ತಾ ದೌತಿ; ನಾಳೆತಾಳು; ಕುರುಡರ ಕೈ ಕಂದೀಲು. ಹತ್ತು ಪಡೆಯೋದಕ್ಕಿಂತ ಒಂದು ಮುತ್ತ ಹಡಿಯೋದ ಲೇಸು, ಮಂಗನ ಕೈಯಾಗ ಸಿತಾರ ಬ್ಯಾಡ, ಹೇಡಿ ಕೈಯಾಗ ಹತ್ಯಾರ ಬ್ಯಾಡ. ಮಾತು ಬಲ್ಲವನು ಮಾಣಿಕ ತರುವ. (ತಾ ಲೆಕ್ಕಣಿಕೆ ತಾ ದೌತಿ) ಆಡೋದು ವೇದಾಂತ, ಮಾಡೋದು ವ್ಯವಹಾರ. ದಯಾ ಧರ್ಮಕಾ ಮೂಲಹೈ, ಮರಣವೇ ಮಹಾನವಮಿ. (ಇದು ನಭೋವಾಣಿ). ಬೀಜದಲ್ಲಿ ಅಡಗಿಹುದು ಮರವು. ಮರದಲ್ಲಿ ಅಡಗಿ ಬೀಜ (ಉತ್ತರಾಯಣ), ಬಿದ್ದಗೂಳಿಗೆ ಆಳಿಗೊಂದು ಕಲ್ಲು, ಬಳ್ಳಿಗೆ ಭಾರವೆ ಹೂವು ಹೊರೆ? (ಮತ್ತೆ ಶ್ರಾವಣಾ ಬಂತು) ಶೆಟ್ಟಿಇದ್ದಲ್ಲೇ ಪಟ್ಟಣ (ಮರ್ಯಾದೆ). ಆನೆ ಹೋದುದೆ ದಾರಿ (ಪರಾಕಿ)ತಳವಾರನ ಕಳವಿಗೆ ಹೊರಟರ. ಬಸವೀನ ಉಳಿವಿಗೆ ಹೊರಟರ (ಯಕ್ಷ-ಯಕ್ಷಿ) ಹುಲಿ ಕಪಿಗಿಂತಲೂ ಮುದಿ ಕಪಿ ಲೇಸು (ಯಕ್ಷ-ಯಕ್ಷಿ) ಬೇಲಿ ಹೊಲವನು ತಿಂತ್ಯ.' ಕೊಟ್ಟದ್ದು ಅದು ಮುಂದೆ ಕಟ್ಟಿದ ಬುತ್ತಿ, ಒಗೆತನ ಹಗೆತನ ಬಾಳುವದೆಂತು? ತನ್ನಂತೆ ಪರರು-ಕೊಟ್ಟದ್ದು ಪಡೆಯುವೆವು. ದೇವರು ಮರೆದು ಕೆಟ್ಟರು. ದಾನವರು ಮುರಿದು ಕೆಟ್ಟರು (ಯಕ್ಷ-ಯಕ್ಷಿ)ಹಾಲಿಲ್ಲ ಬಟ್ಟಲಿಲ್ಲ ಗುಟುಕು ಎಂದಿತ್ತು, ಹೊಳೆಯಲ್ಲಿ ಹೂಡಿದ ಹುಳಿಯು ಏತ್ತು'. (ಯಕ್ಷ-ಯಕ್ಷಿ) ಮುಂದುಗಾಣದೆ ಗಾಣದೆತ್ತಿನೊಲು ತಿರುಗುತ್ತ (ಹೃದಯ ಸಮುದ್ರ) ಎರಡೂ ಕೈ ಕೂಡದ ಚಪ್ಪಾಳಿ ಆಗುದಿಲ್ಲಾ. ಯಾಕ ಅಳತೀ ಮುದುಕೀ ಅಂದ್ರ ಬರೋ ಏಕಾದಶಿಗೆ ಅಂದ್ಳು. ಮಾಡಿದ್ದ ಪಾಪ ಹುಸಿಯಾಡಿದ್ದ ಬಾಯಲ್ಲಿ (ಮಾಡಿದವರ ಪಾಪ ಆಡಿದವರ ಬಾಯಲ್ಲಿ). (ಶ್ರೀಮಾತಾ) ಬೀಜಗಳ ಬುಡದಲ್ಲೇ ಕತ್ತಲು (ಹಾಡು-ಪಾಡು) ಬೀಜವಾಗ ಗಿಡಾ ಇತ್ತಾವ. ಗಿಡದಾಗ ಬೀಜ ಇತ್ತಾವ. ದುಡ್ಡಿನ ಬೆನ್ನಿಗೆ ದುಡಿತ ಬೇಕು. ದುಡಿದದ್ದರ ಬೆನ್ನಿಗೆ ಪಡೆದದ್ದು ಬೇಕು.

(ಮುಗಿಲದೇ ಮುತ್ತಿನ ಹಾಯಿ) (ಶ್ರಾವಣ) ತಲೆ ಬಾಗಿದವರು ಬಾಳಿನಾದ ಮುಗಿಲು ಬಸಿರಾಂಗಿ ನೆಲಾ ಅಪ್ಪಿದವರು ಶ್ರಾವಣದ ಕರಿಕೆ 'ಬಸ್ರಾಂಗ (ಶ್ರಾವಣಾ) (ಮುಗಿಲ್ಯಾಗಿ ಬಾಳುವುದಕ್ಕಂತ ಗಗನವಾಗಿ ಮುಂದುಯುವುದೇ ಲೇಸು-ಎಂಬ ಸಾಮ್ಯಾದಿಯು ವ್ಯಂಗ್ಯದ ದೂಡಾ. ತಸ್ಕರಿವೇ ತನಗೆ ಗುರು (ಕಾವ್ಯವೈಖರಿ) ಹಾಯಿ ಕಾಡಿದ ಮೇಲೆ ಕಾಯುವವರಾರು? (ಪ್ರಕೃತಿ 'ಉಯ್ಯಾಲೆ') ಹಾಗೆ ಹಣ ಕೊಡಿದರೆ ಸಾಕ್ಕೆ (ಸಂಚಯ)' ಕೊಟ್ಟವನೇ ಕಾವ' (ಗಂಗಾವತರಣ) ತಾಯಿಗಿಂತ ಯಾರು ಹೆಚ್ಚು? (ತಾಯಿಗಿಂತ ಬಂಧುವಿಲ್ಲ) (ನಾದಲೀಲೆ) ಹೆಣ್ಣುತಾಯಿ ನಾಯಿಯಾದು (ನಾದಲೀಲೆ) ಶೇಷಾಸದ್ದಲ್ಲಿಗೆ ಹೊರೆ ಬಂದಿತು. ಗಾಣಿಗಗೆ ಸಿಟ್ಟಾಗಿ ಬಿಗಾ ದೊಟ್ಟಿ ತಿಂದಂತೆ, ಹಾದಿಯ ದೆವ್ವದ ಮನೆಯೊಳಗೆ ಕರೆದಂತೆ (ಸಖೀಗೀತ) ಬಿತ್ತಲಗಿಡವು ಮುಸ್ಸಲ್ಲ (ನಾದಲೀಲೆ) -ಇವುಗಳಲ್ಲದೆ, ಇಂಥ ನಾಣ್ಣುಡಿಗಳಿಂದ ಪ್ರೇರಿತವಾಗಿ ಬೇಂದ್ರೆಯವರು ಸ್ವತಂತ್ರ ಗಾದೆಗಳನ್ನು ಸೃಷ್ಟಿಸಿಕೊಂಡು, ತಮ್ಮ ಕವಿತೆಯ ಅರ್ಥವಲಯವನ್ನು ಬೆಳೆಸಿದ್ದಾರೆ. 'ಸಖೀಗೀತ' ಮತ್ತು 'ತಿರುಕ' ಮೊದಲಾದ ಕವನಗಳುದ್ದಕ್ಕೂ, ಬೇಂದ್ರೆಯವರ ಹಲವಾರು ವಿಚಾರಗಳು ನಾಣ್ಣುಡಿಯ ರೂಪದಲ್ಲಿ ಚೆಲ್ಲುವರಿದಿವೆ. ಉದಾಹರಣೆಗೆ -ಹುಟ್ಟುಸಾವೆಲ್ಲವೂ ಹುಚ್ಚು ಹಾಡು; ಸತ್ತು ಬಾಳುವೆಗಿಂತ ಉಚ್ಚು ನೀರೂ ಲೇಸು, ಬಿದ್ದ ಕಾಲಕೆ ಹಾದಿ ಓಡಿದಷ್ಟೆ ನಡುಬೀದಿ. ಸುಖ ತಾನು ಬರುವಾಗ ಗುಳೆ ಎತ್ತಿ ಬರುವುದು. ಹೆಣ್ಣುಗಂಡಿಗೆ ಚೆಲುವು, ಗಂಡು ಹೆಣ್ಣಿಗೆ ಒಲವು. 'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ. ಮಾತಿಗೂ ಮೌನಕ್ಕೂ ಯಾತರ ಒಗೆತನ? ನೀರಿಗು ಕಲ್ಲಿಗೂ ಏನು ಜತೆ? ಮೌನದಲ್ಲಿಯೂ ಕೂಡ ಮಾತಿನ ಧ್ವನಿಯಿರಲಿ. ಜೇನಿನ ಇಲ್ಲದ

ಎತ್ತು ಎಳೆದಾಡುವ ಗಾಡಿ, ಸಂಸಾರಯಾತ್ರೆಯು ಸಾಗರದೊಂದಿ ನಾಟ. ಕಣ್ಣೆರಡು ಕಾಗೆಗೆ ಎರಡೇ? 'ಮಾತು ಮೌನದ ಪ್ರತಿಮೆ, ಮೌನ ಮಾತಿನ ದೈವ. ಮುಗಿಲು ಕಪ್ಪರಿಗಿ ನೆಲಕ ಬಿದ್ದರ ನೆಲಕ ನೆಲಿ ಎಲ್ಲಿನ್ನ-(ಸಖೀಗೀತ) ಹಾಗೆಯೇ ತಿರುಕ (ಸಖೀಗೀತ) ಪದ್ಯದಲ್ಲಿ ದಾರಿದ್ರ್ಯದ, ದುರ್ದೈವದ ಹಾಗೂ ಸಮಾಜದ ಕುರುಡುತನವನ್ನು ಅನುಭವಿಸಿದವರು ಮಾತ್ರ ತಿರುಕನನ್ನು ಅರ್ಥಮಾಡಿಕೊಳ್ಳಬಲ್ಲರು ಎಂಬುದನ್ನು ಸಮರ್ಥಿಸುವಾಗ, ಕವಿ ಕವನದುದ್ದಕ್ಕೂ, ತನ್ನ ಸ್ವತಂತ್ರ ಗಾದೆಗಳನ್ನೇ ಬಳಸಿದಂತೆ ತೋರುತ್ತದೆ. ಆ ಗಾದೆಗಳಾದರೆ, ಸಾಮಾಜಿಕ ಪರಿಸರದಿಂದಲೇ ಪ್ರೇರಿತವಾದವುಗಳು. ಉದಾಹರಣೆಗೆ ಒಂದೆರಡು ನೋಡಬಹುದು:- 'ನಾಡಾಡಿ ಗತ್ತೆಗೆ ಹಾಳುಗೋಡೆಯೇ ನೆರಳು; ಬೀಡಾಡಿ ನಾಯಿಗೆ ಬೀದಿಗಾವಲಿ ನೀರು; ಕಾಡುವ ಕಾಗೆಗೆ ತಿಪ್ಪೆಯಂಜಲು ಕೂಳು, ಗತಿಗೆಟ್ಟ ವಿಧವೆಗೆ ನೀರಿನ ತಳ ತವರು. ಇತ್ಯಾದಿ. 'ಚತುರೋಕ್ತಿ ಮತ್ತು ಇತರ ಕವನಗಳಲ್ಲಿರುವ ಬೇಂದ್ರೆಯವರ ಕೆಲವು ರಸಿಕೋಕ್ತಿಗಳು. ನಾಟುನುಡಿ. ಗಾದೆಮಾತು, ಸಾಮತಿ ಸೂಕ್ತಿಗಳಿಗೆ ಇರಬಹುದಾದ ಭಾವ ಶ್ರೀಮಂತಿಕೆ ಪಡೆದಿವೆ:- 'ನೆತ್ತೀಮ್ಯಾಲೆ ಕಣ್ಣಿದ್ದವರಿಗೆ ಗ್ಯಾದಿ ಆಗತದ ಪ್ರಕಾಶ, ಸುಳ್ಳಿಗೆ ಸಾವುಬೇಕು. ಕಳ್ಳಿಗೆ ನೀವು ಬೇಕು. ಮುಖಾನ ಇಲ್ಲಾ ಮುಗ್ಯಾಕ? ಮೈನ ಇಲ್ಲಾ ಡೂಗ್ಯಾಕ? ಮುತ್ತಿಗ್ಯಾಕ ಬಂಗಾರದ ಒರಿ. ನಾತಾಹಿಡೀಬೇಕು. ಜಿಗುಟು ಇದ್ದರ ಜಿಗಿಬೇಕು. ಒಗಟ ಇದ್ದರ ಒಡೀಬೇಕು-ಇತ್ಯಾದಿ.

ದೇಸೀ ಗಾದೆಗಳು, ಬೇಂದ್ರೆಯವರ ಗಾದೆಗಳಾದಂತೆ, ಬೇಂದ್ರೆ ಗಾದೆಗಳು ದೇಶೀಗಾದೆಗಳಾಗಿ ಕಾಲಾಂತರದಲ್ಲಿ ಜನ ಮನದಲ್ಲಿ ಬೆರೆತುಹೋಗಿರುವುದನ್ನು ಗುರುತಿಸುವುದು ಕಷ್ಟ. ಜನಪದ ಗಾದೆಗಳಿಂದ ಬೇಂದ್ರೆಯವರು ಅದೆಂಥ ಸತ್ವವನ್ನು

ಹೀರಿಕೊಂಡು, ಅದೆಷ್ಟು ಪರಿಣಾಮಕಾರಿಯಾದ ಜನಹೃದಯಕ್ಕೆ ಮುಟ್ಟುವಂಥ 'ಭಾವಗೀತ'ಪ್ರಕಾರವನ್ನು ರೂಪಿಸಿಕೊಂಡರು ಎಂಬುದು ಸತ್ಯವಾದಂತೆ, ಜನತಾಂತರ ದೃಷ್ಟಿಯುಳ್ಳ ಬೇಂದ್ರೆಯವರು, ಸಾವಿರಾರು ಗಾದೆಗಳಂಥ ಮಾತುಗಳನ್ನು ಸೃಷ್ಟಿಸಿ, ಜನತೆಗೆ ನೀಡಿರುವುದು ಅಷ್ಟೇ ಸತ್ಯ. ಹೀಗೆ, ಇವೆರಡರ ಹಾಸುಹೊಕ್ಕಾದ 'ಭಾವಗೀತ' ಸಾಹಿತ್ಯ, ವಿಶಾಲಾರ್ಥದಲ್ಲಿ ಜನಪದಸಾಹಿತ್ಯ-ಜನಪದದಿಂದ, ಜನಪದರಿಗಾಗಿ ಸೃಷ್ಟಿಯಾದ ಸಾಹಿತ್ಯ ಎನ್ನಲಡ್ಡಿಯಿಲ್ಲ. ಅದಕ್ಕಾಗಿಯೇ ಗಾದೆಗಳ ಬಗೆಗೆ ಇಷ್ಟೊಂದು ವ್ಯಾಪಕವಾಗಿ ಪ್ರಸ್ತಾಪ ಮಾಡಲಾಗಿದೆ.

೬) ಒಗಟು: ಹೇಳಬೇಕಾದುದನ್ನು ನೇರವಾಗಿ ಹೇಳದೆ ಪ್ರತಿಮೆಗಳ ಅಥವಾ ಸಂಕೇತಗಳ ಸಹಾಯದಿಂದ ಗೂಢಾರ್ಥದಲ್ಲಿ ಹೇಳುವುದೇ 'ಒಗಟು' ಅಥವಾ 'ಬೆಡಗು'. ಯಾವುದನ್ನು ಹಲವಾರು ಮಾತುಗಳಲ್ಲಿ ಬಿಚ್ಚಿ ಹೇಳಬಹುದಿತ್ತೋ, ಅದನ್ನು ಕಡಿಮೆ ಮಾತುಗಳಲ್ಲಿ ಮುಚ್ಚಿ ಹೇಳುವುದೇ ಇದರ ವೈಶಿಷ್ಟ್ಯ. ಸರಳವಲ್ಲದ ತುಂಬ ಕ್ಲಿಷ್ಟವಾದ, ಆದರೂ ತನ್ನದೇ ಚೆಲುವು-ಚಮತ್ಕಾರಗಳ, ಜನಪದ ಭಾಷೆಯ ವಿಶೇಷರೂಪವಿದು. ಈ ಭಾಷಾವೈಶಿಷ್ಟ್ಯವನ್ನು ಬೇಂದ್ರೆಯವರು ಗಮನಿಸಿದ್ದು ಹಾಗೂ ಅದನ್ನು ಅಲ್ಲಲ್ಲಿ ಸಮರ್ಥವಾಗಿ ಬಳಸಿದ್ದೂ ಒಂದು ವಿಶೇಷ.

'ಒಂದು ವೃಕ್ಷದ ಮೇಲೆ ಎರಡು ಪಕ್ಷಿ
ಅರಿವ ನುಣ್ಣುವದೊಂದು
ಮರವ ನುಂಗುವದೊಂದು
ಇದು ಅದಕೆ, ಅದು ಇದಕೆ ಸಾಕ್ಷಿ'

-ಕನಕ (ಶ್ರೀ ಮಾತಾ)

'ಇದು ಜನಪದ ಒಗಟು ಮಾದರಿ. ಒಗಟು ರೂಪವೇ ಈ ಕವಿತೆಯ ರಚನೆಯಲ್ಲಿದೆ. ವಾಚ್ಯಾರ್ಥದಲ್ಲಿ ಅಸ್ಪಷ್ಟವಾದ ವಿರುದ್ಧ ಮತ್ತು ಅಸಾಧ್ಯವಾದ ಚಿತ್ರ ನೀಡುವ ಒಗಟು ರೂಪದ ಕವಿತೆ, ಸೂಚ್ಯಾರ್ಥದಲ್ಲಿ ಮಾತ್ರ ನೇರ ಅರ್ಥ ಬಿಂಬಿಸುತ್ತದೆ. 'ಇವು ಗೂಢಾರ್ಥದ ಜೊತೆಗೆ, ಪ್ರಾಸಾನುಪ್ರಾಸ, ಅಲಂಕಾರಗಳನ್ನು ಸೇರಿಸಿಕೊಂಡು ಜನಪ್ರಿಯ ಜನಪದ ರೂಪಗಳಾದುದರಿಂದ, ಆ ಮಾದರಿಯ ಹೊದಿಕೆಯನ್ನು ಬೇಂದ್ರೆಯವರು, ಶರಣರಂತೆ ಬಳಸಿಕೊಂಡಂತೆ ತೋರುತ್ತದೆ. ಒಗಟು ರೂಪದ 'ಭಾಷೆ' ಮತ್ತು 'ರೀತಿ'ಗಳಿಂದ ಹೆಚ್ಚು ಪ್ರಭಾವಿತರಾದ ಶ್ರೀಬೇಂದ್ರೆಯವರು. ಅದನ್ನು ಭಾವಗೀತೆಗಳಲ್ಲಿ ಪ್ರಯೋಗಿಸಿ ಸಾಹಿತ್ಯ ಶಕ್ತಿಯನ್ನು ವೃದ್ಧಿಸಿಕೊಂಡಿದ್ದಾರೆ.

ಅಟ್ಟೀಮ್ಯಾಲ ಅಟ್ಟಿ
ತ್ಯಾಪಿ ಮ್ಯಾಲ ತ್ಯಾಪಿ
ಕಟ್ಟಿದ್ದ ಕಟ್ಟಿ, ಒಟ್ಟಿದ್ದ ಒಟ್ಟಿ
ಧರ್ಮ ಕಟ್ಟಿಸ್ತು ಗುಡಚಾಪಿ
ಕಾಲಾಗಿನ ಮೆಟ್ಟು, ಕಾಲಾಗಿದ್ದವು ? ಅದ್ಯಾಕಿ
ಆದೇಮನಿ, ಆದೇಧನಿ
ಆದರ ಒಳಗಿದಲಿಲ್ಲ ಒಳಗಿನ ಧನಿ
ಕಣ್ಣು ಕಳಕೊಂಡವರ್ಹ್ಯಾಂಗ
ಇವರ ಮನಿಗೀ ಬರತಿಸ್ತು ....

—ಮುಗ್ಧಿನ ಶಾಪ (ಮುಯ್ಯಾಗಾವ)

ಬೇಂದ್ರೆಯವರ ಈ ಕವಿತೆಯ ಜೊತೆಗೆ, ಜನಪದ ಒಗಟೊಂದನ್ನು ಸಮೀಕರಿಸಿದಾಗ, ಅವೆರಡರ ರಚನೆ ಹಾಗೂ ಕಾಲ್ಪನಿಕ ಲೋಕದಲ್ಲಿಯೇ ಗೂಢಾರ್ಥ ಲಭ್ಯವಾಗಿ ತಮ್ಮ ಸಾರ್ಥಕತೆಯನ್ನು ಸೂರೆಗೊಳ್ಳುವವು ನೋಡಿ:

ಕಂಬ
ಕಂಬದ ಮೇಲೆ ಡಿಂಬ
ಡಿಂಬದ ಮೆಲೆ ಬಾಗೂರು
ಬಾಗೂರು ಮೇಲೆ ಮೂಗೂರು
ಮೂಗೂರು ಮೇಲೆ ಕಣ್ಣೋಗರ
ಕಣ್ಣೋಗಾರದ ಮೇಲೆ ಕರಿಗುಡ್ಡ
ಕರಿಗುಡ್ಡದ ಮೇಲೆ ಕುರಿಹಿಂಡು ಮೇಯ್ತಾವ

ಮೇಲಿನವುಗಳಲ್ಲಿಯ ಕಾಲ್ಪನಿಕ ಅರ್ಥ ಬೇರೆ ಬೇರೆ ಇದೆ. ಆದರೆ ಅವುಗಳ ರಚನೆ ಮಾತ್ರ ಒಂದೇ. 'ಅವ್ವನ ಸೀರಿ ಮಡಿಚಲಾರೆ, ಅಪ್ಪನ ರೊಕ್ಕ ಎಣಿಸಲಾರೆ (ಅವ್ವನ ಸೀರಿ-ಸಂಚಿಯು') ಈ ಜನಪದದ ಒಗಟಿನಿಂದಲೇ 'ಅವ್ವನಸೀರಿ' -ಕವನ ಆರಂಭಗೊಳ್ಳುತ್ತದೆ. ಕವಿತೆಯ ಮುಂದಿನ ಸಾಲುಗಳಾದ - ಗಾಳಿಗಂಬಾ ನಿಲಿಸಲಾರೆ, ಕಾಣಿಕೆ ತುಂಬಾ ಸಲೀಸಲಾರೆ ....ಬಿತ್ತಿದ್ದೆಲ್ಲ ಸಾಯುವದಂತೆ, ಸತ್ತಿದ್ದೆಲ್ಲ ಮಾಯವಾದಂತೆ .. .. ಕೂಡ ಒಗಟು ಮಾದರಿಯಲ್ಲಿದ್ದುದು ಗಮನಾರ್ಹ.

"ಬಹುಶಃ, ಶಿವಶರಣರ ನಂತರ ಕನ್ನಡವನ್ನು ಇಷ್ಟೊಂದು ಮುದ್ದಿ, ನಾದಿ, ನಾದಮಯವಾಗಿಸಿ ಮಣಿಸಿದಂತೆ, ಮಿಡು

ಚೆನ್ನದಂತೆ, ಸವಿಜೊನ್ನದಂತೆ ಹದವನ್ನೇ ಪದವಾಗಿ ಇಷ್ಟೊಂದು ಬೆಡಗಿನ ಒಡಪುಗಳನ್ನು ಲೋಕಕ್ಕೆ ನೀಡುವ ಕಾವ್ಯಕಾಯಕ ಇನ್ನಾವ ಭಕ್ತನೂ ಮಾಡಿರಲಾರ."[೩೮] ಎಂದು ಗೌರೀಶ ಕಾಯ್ಕಿಣಿಯವರು ಉದ್ಗಾರವೆತ್ತಿದ್ದು ಪರಿಶೀಲನಾರ್ಹ.

೯. ಅಲಂಕಾರ

ಅಲಂಕಾರಗಳಿಲ್ಲದ ಸಾಹಿತ್ಯವೇ ಇಲ್ಲ. ಕಾವ್ಯಾಲಂಕಾರಗಳು, ಜನಪದ ಪದ್ಯ ಸಾಹಿತ್ಯದಲ್ಲಿಯಂತೆ ಬೇಂದ್ರೆ ಭಾವಗೀತೆಗಳಲ್ಲಿಯೂ ವಿಶಿಷ್ಟ ಬಗೆಯಲ್ಲಿ ಬಳಕೆಗೊಂಡಿವೆ. ಜನಪದ ಸಾಹಿತ್ಯದಲ್ಲಿ ಕಂಡುಬರುವ. ಉಪಮಾ. ಅರ್ಥಾಂತರನ್ಯಾಸ, ಸ್ವಭಾವೋಕ್ತಿ. ರೂಪಕ. ದೃಷ್ಟಾಂತ ಮೊದಲಾದ ಅಲಂಕಾರ ಗಳಲ್ಲದೆ. ಪ್ರತಿಮೆಗಳನ್ನೂ ಬೇಂದ್ರೆಯವರು ತುಂಬ ಸಹಜವಾಗಿಬಳಸುತ್ತಾರೆ. ಉಪಮಾ-ರೂಪಕಾದಿಗಳು ಅವರ ಸುತ್ತಲಿನ ಪರಿಸರದಿಂದ ಸಾಮಗ್ರಿ ಪಡೆದು ಭಾವಗೀತೆಗಳಲ್ಲಿ ಬಳಕೆಗೊಂಡಿವೆ. ಹೀಗಾಗಿ. ಬೇಂದ್ರೆಯವರು ಬಳಸುವ ಅಲಂಕಾರ ಸಾಮಗ್ರಿಗಳೆಲ್ಲ ಗ್ರಾಮೀಣರಿಗೆ ಹೊರಗಿನವಾಗಿ ಕಾಣುವುದೇ ಇಲ್ಲ; ಎಲ್ಲವೂ ಚಿರಪರಿಚಿತ. ಸಾಮಾಜಿಕ ವಿಷಯಗಳನ್ನಲ್ಲದೆ. ಆಧ್ಯಾತ್ಮಿಕ ವಿಷಯಗಳನ್ನೂ. ಲೋಕದ ದೃಷ್ಟಾಂತಗಳ. ಮೂಲಕ ಹೇಳಿ. ಅವುಗಳ ಅನುಭವವನ್ನು ಜನಸಾಮಾನ್ಯರಿಗೂ ತಲುಪಿಸುವ ಬೇಂದ್ರೆಯವರ ಪ್ರಯತ್ನ ಸ್ವಾಗತಾರ್ಹ. ಸ್ತುತ್ಯಾರ್ಹ. ಪ್ರಸ್ತುತ ಅಲಂಕಾರಸಾಮಗ್ರಿಗಳ ಸಾರ್ಥಕ ಪ್ರಯೋಗಕ್ಕೆ ಸಹಸ್ರ ಸಹಸ್ರ

ಉದಾಹರಣೆಗಳನ್ನು ಬೇಂದ್ರೆ ಕವಿತೆಗಳಿಂದ ಸಂಗ್ರಹಿಸಬಹುದು.
ವಿಷಯದ ವಿಸ್ತಾರದ ಭಯ, ಇದನ್ನು ಕೈಬಿಡುವಂತೆ ಮಾಡಿದೆ.)
ಗರತಿಹಾಡಿನಲ್ಲಿ ಪ್ರಸ್ತಾಪಿತವಾದ ಕೆಲವು ಉಪಮಾನಗಳು ಮತ್ತು
ಪ್ರತಿಮೆಗಳು-ಇವನ್ನು ಮಾತ್ರ ಬೇಂದ್ರೆಯವರ ಕವಿತೆಗಳಿಂದ
ಪರಿಶೋಧಿಸಲಾಗಿದೆ ಇಲ್ಲಿ. ನುಚಿದಾಳ ಬಂದ್ಹಾಂಗ ಮೈದುಂಬಿ
ಕ್ಕರೆ ಬೆರೆಥಾಂಗ ಹಾಲಾಗ. ಮಾಯೆಯು ಮೈದೊಳಗ
ಿಂಥಾಂಗ. ಬಸಿರುಹೂ ತುಳುತುಲು ನಕ್ಕಾಂಗ. ಒಗ್ಗಿನ
ುಳ್ಳಿಗೆ ಸಿಕ್ಕ್ಯಾಂಗ. ಗುಜುಗುಜು ಗುಲುಗುಲು ನುಡಿದ್ಹಾಂಗ.
ೊಗ್ಗಿಗೆ ಬಾಯಲ್ಲಿ ಒಡೆದ್ಹಾಂಗ. ಹಾಡಿನ ತೆರೆತೆರೆ
ಒಡೆದ್ಹಾಂಗ. ತಾನಾಗಿ ತನನ ಬಂದ್ಹಾಂಗ. ಜೇಂಗುಟ್ಟಿ ಹಾ
ನಿ ಇಳಿದ್ಹಾಂಗ ನೆಯ್ಗೆಯೊಳಗ ನೂಲು ಹೋದ್ಹಾಂಗ ತಂಬಲ
ಾಕದ ತುಂಬ ನಕ್ಕ್ಯಾಂಗ ಕೆಂಪು ಗಿಣಿಗಡಕ ಹಣ್ಣಿನಾಂಗ. ಹಳ್ಳೀ
ಬಿಡುಗಿಹಾಂಗ. ಕಾಮಿ ಬೆಕ್ಕಿನ್ಹಾಂಗ. ಕವದೀಮ್ಯಾಲೆ ಕಸೂತಿ
ಗದ್ಹಾಂಗ. ತೆನೆಗೆ ಹಾಲು ತುಂಬಿದಂತೆ. ಮಣ್ಣಿಗೊಂಬೆ
ಳಿಗೆಲ್ಲಕೆ ಜೀವಕಳೆಯು ತುಂಬಿದಂತೆ. ಮದುವಿ ಮಗನ್ಹಾಂಗ.
ಸಿರುಟ್ಟ ಸುಂದರಿಯ ಹಂಗ -ಇವೇ ಮೊದಲಾದ ಜಾನ
ಪದೀಯ ರೀತಿಯ ಉಪಮಾನಗಳು ಬೇಂದ್ರೆಯವರ ಕಾವ್ಯಗದ್ದು
ಗೆಯನ್ನೇರಿ, ಮರುಹುಟ್ಟು ಪಡೆದವು.

ಜನಜೀವನದ ಜೊತೆ ನೇರ ಸಂಪರ್ಕವುಳ್ಳ ಬೇಂದ್ರೆ
ಯವರು ತಮ್ಮ ದೈನಂದಿನ ಅನುಭವದ ಪರಿಚಿತ ಜಗತ್ತಿನ
ತಿಮೆ; (ಗರತಿಹಾಡಿನಲ್ಲಿಯೂ ಉಕ್ತವಾದ)ಗಳನ್ನು ಹೆಕ್ಕಿತಂದು
ನ್ನಡ ಕಾವ್ಯಲೋಕದಲ್ಲಿ ಹೊಸ ಅಲೆಯನ್ನೇ ಎಬ್ಬಿಸಿದರು.
ಂದೆರಡು ಮಾತ್ರ ನೋಡಬಹುದು, ಗಿಣಿಗಡಕ ಹಣ್ಣು,
ಹುಣ್ಣಿಮೆಯ ಚಂದಿರನ ಹೆಣ, ಕವಳಿಕಂಟಿಯ ಹಣ್ಣು, ಮಲ್ಲಾಡ

ದಗಿಣೆ, ಹಳ್ಳದದಂಡ್ಯಾಗ, ಜೊಗಚಿ, ಕೇದಿಗೆಬನ, ಬಿದಿಗಿ ಚಂದ್ರಾಮ, ಗಿಣಿಓಂಡು, ... ಇತ್ಯಾದಿ. ಈ ಬಗೆಯ ಪರಿಚಿತ ಪ್ರತಿಮೆಗಳನ್ನೇ ಉಪಮಾನವಾಗಿ ಬಳಸುವುದು, ಜಾನಪದ ಕಾವ್ಯ ಮತ್ತು ಬೇಂದ್ರೆ ಕಾವ್ಯಗಳೆರಡರಲ್ಲಿಯೂ ಕಾಣುತ್ತೇವೆ.

೧೦. ಛಂದಸ್ಸು

ಜಾನಪದದ ವಿವಿಧ ಲಯಗಳನ್ನು ಬೇಂದ್ರೆಯವರು ತುಂಬ ಸುಂದರವಾಗಿ ಮತ್ತು ಬಂಧುರವಾಗಿ ಕವಿತೆಗಳಲ್ಲಿ ಬಳಸಿದ್ದಾರೆ. ವೈವಿಧ್ಯಮಯ 'ಲಯ' ದ ಬಳಕೆ, ಬೇಂದ್ರೆ ಕಾವ್ಯದ ವೈವಿಧ್ಯಕ್ಕೆ ಪ್ರಬಲಕಾರಣ. ಬೇಂದ್ರೆ ಕವಿತೆಯ ಸಾಲುಗಳು ಚಿಕ್ಕ-ದೊಡ್ಡವಿದ್ದು, ಸಾಮಾನ್ಯವಾಗಿ ಐದು ಮಾತ್ರೆಯ ಗಣಗಳುಳ್ಳವುಗಳೂ ಆಗಿ, ತಮ್ಮ 'ಲಯ'ವನ್ನು ಉಳಿಸಿಕೊಂಡು, ನಾದವನ್ನು ಹೊರಹೊಮ್ಮಿಸಬಲ್ಲವುಗಳು. ಉದಾರಹಣೆಗೆ :-

'ಸಖೀ ನಮ್ಮ ಸಖ್ಯದ ಆಖ್ಯಾನ ಕಟುಮಧುರ'
'ಕಬ್ಬಿಣದ ಕೈಕಡಗ ಕುಣಿಕೋಲು ಕೂದಲ
'ಕಂಬಳಿ ಹೊದ್ದಾಂವ ಬಂದಾನ '
'ಹಳ್ಳದ ದಂಡ್ಯಾಗ ಮೊದಲೀಗೆ ಕಂಡಾಗ '
'ಮಾಂದಳಿರ ತೋರಣ ಹೂಮಿಡಿ ಗುಡಿಗಟ್ಟಿ
'ಮಧುಮಾಸ ಹೊರಟಿತ್ತು ನಿಬ್ಬಣಕೆ '
'ಸಂಜೀಯ ಜಾವಿಗೆ ಹೊರಟೇದಿ ಬಾವಿಗೆ '
'ನನ ಕೈಯ ಹಿಡಿದಾಕಿ ಅಳುನುಂಗಿ ನಗು ಒಮ್ಮೆ'

ಐದೈದು ಮಾತ್ರೆಯ ಒಂದೇ ಗಣದಲ್ಲಿಯೇ ಹಾಡು. ತ್ರಿಪದಿ, ಸಾಂಗತ್ಯ, ಕುಣಿತವಗತ್ತು, ಕೋಲಾಟದ ಧಾಟಿ. ಜನಪದ

ಕಥನ ಕವನಗಳ ರೀತಿಯಲ್ಲಿ ಬೇಂದ್ರೆಯವರು ಕವನ ರಚನೆ ಮಾಡಿದ್ದಾರೆ. ಈ ಬಗೆಯ ಕವಿತಾ ರಚನೆಗಳಲ್ಲಿ, ಜಾನಪದ ಲಯ-ಧಾಟಿಗಳ ಒನಪು, ಒಯ್ಯಾರ, ಬಿಂಕು-ಬಿಗುಮಾನ, ಮೈಮಾಟಗಳೆಲ್ಲ ಎಂಥವರನ್ನೂ ಆಕರ್ಷಿಸುತ್ತವೆ. ದೇಸೀ ಲಾವಣಿ, ಅಕ್ಕರಛಂದ, ಸಾಂಗತ್ಯ, ತ್ರಿಪದಿ, ಮೊದಲಾದ ಕಾವ್ಯದ ಸಾಂಪ್ರದಾಯಿಕ ರೀತಿಯಲ್ಲಿಯೇ ಹಲವಾರು ಕವಿತೆಗಳನ್ನು ಬೇಂದ್ರೆಯವರು ಬರೆದುದು ಅವರು ಸಾಂಪ್ರದಾಯಿಕ ಕಾವ್ಯಜಾತಿಗಳ ಜೊತೆ ಇರಿಸಿಕೊಂಡ ಗಾಢವಾದ ನಂಟನ್ನು ಅರುಹುತ್ತದೆ. ಪ್ರಾಚೀನ ದೇಸೀ ಛಂದಸ್ಸಿಗೆ ಕಸಿಕಟ್ಟಿ, 'ಸಖೀಗೀತ'ದಲ್ಲಿ ಸುಂದರ ಲಯವನ್ನು ಸೃಷ್ಟಿಸಿದ್ದೂ ಬೇಂದ್ರೆ ಪ್ರತಿಭೆಗೆ ನಿದರ್ಶನವಾದುದು. ಇದು ಕನ್ನಡ ಕಾವ್ಯಕ್ಕೆ ಬೇಂದ್ರೆಯವರ ವಿಶಿಷ್ಟಕೊಡುಗೆ. 'ಸಖೀಗೀತದ' 'ಛಂದ' ವನ್ನು ಕುರಿತು, ಅದರ ಲಯದಲ್ಲಿಯೇ ಕವಿಗಳು ಹೀಗೆ ಹೇಳುತ್ತಾರೆ.

'ಅಕ್ಕರಛಂದವು ಸಾಂಗತ್ಯ-ಸಂಸ್ಕಾರ
ಹೊಂದಿಲ್ಲಿ ಬಂದಿದೆ ಹೊಸ ಹೊಸದು
ಅಕ್ಕರೆಯದಾಯಿತು ಅಕ್ಕರಿಗರಿಗೆಲ್ಲ
ಅಕ್ಕುಮಿಕ್ಕೆನುವಂತೆ ಕೊನೆವರೆಗು

ಬೇಂದ್ರೆ ಅವರು ಹುಟ್ಟು ಪರಿಸರ ಪ್ರೇಮಿ. ಹೀಗಾಗಿ ಪರಿಸರದ ಭಾಷೆಯಲ್ಲಿ ಅವರಿಗೆ ಸಹಜವಾಗಿಯೇ ಪ್ರೀತಿ ಅರಳಿತು. ಆ ಭಾಷಾಪ್ರೀತಿ-ಕಾವ್ಯ ಪ್ರೀತಿಯಾಗಿಯೂ ಪಲ್ಲವಿಸಿತು. ಪ್ರಕೃತಿ ಪರಿಸರವೇ ಬೇಂದ್ರೆಯವರನ್ನು 'ಕಾವ್ಯಗುರು'ವಾಗಿಸಿತು,

ಕಾವ್ಯಗಾರುಡಿಗನನ್ನಾಗಿಸಿತು. ಹಾಗಾಗಿ 'ಸಖೀಗೀತ'ದ ಬಹು ಭಾಗವೆಲ್ಲ ಜಾನಪದದ ಆವರಣದಲ್ಲಿಯೇ ಅನಾವರಣ ಗೊಂಡಿದೆ. ಅದನ್ನು ಕವಿಗಳು ಪ್ರಾಮಾಣಿಕವಾಗಿ ಒಪ್ಪಿಕೊಳ್ಳು ತ್ತಾರೆ: ಛಂದ-ಲಯ, ತಾಳಗಳನ್ನು ಪ್ರಕೃತಿಯಿಂದಲೇ ಕಲಿತಿದ್ದಾರೆ.

'ಛಂದೋಗತಿಯು ಛಂದ, ತಾಳ ಲಯದಾನಂದ
ಸ್ವಚ್ಛಂದ ಬಂಧ ಕಲಿಸಿದುವು. . . . .
'ಪಾದ ಪದ್ಧತಿಯಲ್ಲಿ ಪದ ಕೂಡ ಬರುವಾಗ
ಯಾರಾರೆ ಗುರು- ಲಘು ಎಣಿಸುವರೆ ?
ಯಾ ರಾಗವೆಂದರು ಯಾರಾಗ ಕೇಳುವರು
ಅನುರಾಗವನುಣಿಸಿ ತಣಿಸುತಿರೆ'

'ನೂರು ಮರ! ನೂರು ಸ್ವರ
ಒಂದೊಂದು ಅತಿ ಮಧುರ
ಬಂಧವಿರದ ಬಂಧುರ
ಸ್ವಚ್ಛಂದ ಸುಂದರ'

'ಸ್ವಚ್ಛಂದ ಬಂಧ' (ಜಾನಪದ ಛಂದ)ವೇ ಬೇಂದ್ರೆಯವರ 'ಕಾವ್ಯದ ಛಂದ'-ವಾದುದನ್ನು ಇಲ್ಲಿ ಅರಿಯಬಹುದು. ಬೇಂದ್ರೆ ಅವರು ಪ್ರಕೃತಿಯಿಂದಲೇ ಕವಿತೆಯ ಸ್ವಚ್ಛಂದ ಬಂಧವನ್ನು ಕಲಿತುದರಿಂದ ಅವರು 'ಪಟ್ಟಪಾಡೆಲ್ಲವೂ ಹುಟ್ಟು ಹಾಡಾಗಲು' ಸಾಧ್ಯವಾಯಿತು. ತನ್ನ ಸಹಜ ಕವಿತ್ವದ ಬಗ್ಗೆ ಕವಿಗೆ ಹೆಮ್ಮೆ-ಅಭಿಮಾನ ಕೂಡ. ಅದನ್ನು ಹೇಳಿಯೂ ಇದ್ದಾರೆ. 'ನನ್ನ ಚಿತ್ರಕ ಶಕ್ತಿ ಉತ್ಪ್ರೇಕ್ಷೆಯನೇರಿ ಬಣ್ಣಬಣ್ಣದ ಬಣ್ಣನೆಗೆ ಒಲಿದಿತು'. ಯಾವುದಕೆ ಯಾವುದು ಸರಿದೊರೆಯೆನ್ನುತ ತನ್ನ ಗೆರೆಬಣ್ಣ

ಗಳನ್ನೊರೆ ಹುಟ್ಟಿತು; ಆಗ ಕವಿಯು ಚಿತ್ರಶಕ್ತಿ (ಪ್ರತಿಭೆ). 'ಕೊಟ್ಟಿದ್ದೆ ರೂಪವು, 'ಇಟ್ಟಿದ್ದೆ ನಾಮವು' ಆಗುತ್ತದೆಂಬ ನಂಬಿಕೆ ಬೇಂದ್ರೆಯವರದು. ಕಂಡದ್ದನ್ನು ಕಂಡರಿಸುವ, ರೂಪಕಶಕ್ತಿಯ ತಂತ್ರವನ್ನು ಕವಿ ಪ್ರಕೃತಿಯಿಂದಲೇ ಸಿದ್ಧಿಸಿಕೊಂಡಿದ್ದಾನೆಂದು ತೋರುತ್ತದೆ. ಬೇಂದ್ರೆಯವರ ಒಟ್ಟು ಪ್ರತಿಭಾಶಕ್ತಿ ಅವರ ಕಾವ್ಯದ' ದೇಸೀ ಛಂದ ನವನಾಗಬಂಧ' ದಲ್ಲಿ ಕಾಣಿಸಿಕೊಳ್ಳುತ್ತದೆ.

೧೧. ಕೊನೆಯ ಮಾತು

ಬೇಂದ್ರೆಯವರ ವ್ಯಕ್ತಿತ್ವ ಮತ್ತು ಶಕ್ತಿತ್ವಗಳ ಕಥೆ ಹೀಗಿರುವುದರಿಂದ, ಅವರಿಗೂ ಜಾನಪದಕ್ಕೂ ಇವರು ಹೊಕ್ಕುಳ ಬಳ್ಳಿಯ ನಂಟನ್ನು ಗುರುತಿಸುವಲ್ಲಿ ವಿದ್ವಾಂಸರು ಪರಸ್ಪರ ಭಿನ್ನಾಭಿಪ್ರಾಯಗಳಿಗೆ ಒಳಗಾದಂತೆ ತೋರುತ್ತದೆ. 'ಗೌರೀಶ ಕಾಯ್ಕಿಣಿಯವರು "ಜನವಾಣಿ ಬೇರು ಕವಿವಾಣಿ ಹೂವು" -ಅಂದರು ಬಿ.ಎಂ. ಶ್ರೀ. ಅಂದರೆ, ಬೇಂದ್ರೆ ಅವರಲ್ಲಿ ಈ ಬೇರು ಬೇರಲ್ಲ, ಹೂವು ಬೇರಲ್ಲ. ನೇರ ಬೇರಿಗೇ ಹೂವು ಅರಳಿವೆ. ಇಲ್ಲಿ ಜನಪದ ಸತ್ವವನ್ನೆಲ್ಲ, ಹೀರಿಕೊಂಡು ಬೇರಿಗೆ ಪರಿಮಳ ಕೊನರಿದೆ"-[೩೯] ಎಂದು ಅಭಿಪ್ರಾಯಿಸಿದರೆ; ಚಂದ್ರಶೇಖರ ಕಂಬಾರರು- ಬೇಂದ್ರೆಯವರ "ಜನಪದ ಪ್ರೀತಿ ಎಷ್ಟು ದಟ್ಟವಾಗಿದೆಯೆಂದರೆ, ಜನಪದ ಕಾವ್ಯಕ್ಕೂ ಇವರ ಕಾವ್ಯಕ್ಕೂ ವ್ಯತ್ಯಾಸವೇ ಉಳಿಯುವುದಿಲ್ಲ. ಸಾಲದ್ದಕ್ಕೆ ಜನಪದ ಕವಿಯ ಮಿತಿಗಳೆಲ್ಲ ಅವರ ಕಾವ್ಯಗಳಲ್ಲೂ ಪುನರಾವರ್ತಿಸುತ್ತವೆ. ಅದೇ ಮುಗ್ಧ ಉತ್ಸಾಹ, ಅದೇ ತೆರೆದುಕೊಂಡ ಬೆರಗುಗಣ್ಣು. ಪ್ರಾಥಮಿಕ ಅವಸ್ಥೆಗಳಿಂದಾಗಿ ಅವರ ಕಾವ್ಯ ಹೆಚ್ಚೆಂದರೆ ಜನಪದ ಹಾಡಾಗುತ್ತದೆ, 'ಅದಕ್ಕಿಂತ ಹೆಚ್ಚಲ್ಲ'-[೪೦] ಎನ್ನುವ ಬಾಲಿಶ

ಮಾತುಗಳನ್ನು ಆಡಿದ್ದಾರೆ. ಕನ್ನಡ ವಿಮರ್ಶಕರಲ್ಲಿ ಒಬ್ಬರಾದ. ಡಾ. ಗಿರಡ್ಡಿ ಗೋವಿಂದರಾಜ ಅವರು- "ಬೇಂದ್ರೆಯವರ ಕಾವ್ಯಕ್ಕೂ ಜನಪದ ರೀತಿಯ ಕಾವ್ಯಕ್ಕೂ ಬಹಳ ವ್ಯತ್ಯಾಸವಿದೆ. ಅವರು ಜನಪದ ಸಂಸ್ಕೃತಿಗೆ ಹತ್ತಿರವಾಗಿದ್ದು ಹೊರಗೆ ನಿಂತು. ಅದರಾಚೆಗಿನ ಎತ್ತರಗಳನ್ನು ನೋಡಬಲ್ಲವರಾಗಿದ್ದಾರೆ. ಒಂದು ಕಡೆಯಿಂದ ನಾಗರಿಕ ಪರಂಪರೆಯಿಂದ ಸಂಗ್ರಹಿಸಿದ ಜ್ಞಾನವನ್ನು ಜಾನಪದ ಭಾಷೆಗೆ ತಂದುಕೊಡುವ ಯತ್ನವಿದ್ದರೆ, ಇನ್ನೊಂದು ಸುಸಂಸ್ಕೃತ ಭಾಷೆಗೆ ಜನಪದ ಪರಂಪರೆಯ ಸಾಮೂಹಿಕ ಜ್ಞಾನವನ್ನು ಒಯ್ಯುವ ಕೆಲಸ ಮಾಡುತ್ತಾರೆ . . . . ಜನಪದ ಹಾಗೂ ನಾಗರಿಕ ಸಂಸ್ಕೃತಿಗಳೆರಡರಿಂದಲೂ ಅವರು ಧಾರಾಳ ವಾಗಿ ತೆಗೆದುಕೊಂಡಿದ್ದಾರೆ."-[೩೧] ಎಂದು ಸರಿಯಾಗಿಯೇ ಗುರುತಿಸಿದ್ದಾರೆ ಎನ್ನಿಸಿದರೂ. ಬೇಂದ್ರೆ ಅವರು ಮೂಲತಃ ಜಾನಪದ ಬದುಕು-ಸಾಹಿತ್ಯ-ಸಂಸ್ಕೃತಿಗಳಿಂದ ಸಂಸ್ಕಾರಗೊಂಡ ವರಾದ್ದರಿಂದ. ಆ ಸಾಹಿತ್ಯ-ಸಂಸ್ಕೃತಿಯ ಮೂಲದಿಂದಲೇ ಪಡೆದದ್ದು, ಪ್ರಭಾವಿತರಾದದ್ದು ಹೆಚ್ಚು ಎನ್ನುವುದು ಸೂಕ್ತ.

ಒಟ್ಟಿನಲ್ಲಿ, ಕವಿ ಬೇಂದ್ರೆ ಅವರು ಭಾವ-ಭಾಷೆ-ಛಂದಸ್ಸು-ಲಯ, ಕೆಲವೊಮ್ಮೆ ವಸ್ತು ಕೂಡ ಜಾನಪದ ಮೂಲದಿಂದಲೇ ಪಡೆದು, ಅವನ್ನು ಮಹತ್ವದ ಉದ್ದೇಶಗಳಿಗೆ ಬಳಸಿಕೊಳ್ಳುವುದು ತುಂಬ ಗಮನಾರ್ಹ. ಇವರಂತೆ. ಜಾನಪದ ಪ್ರಜ್ಞೆಯನ್ನು ಆಧುನಿಕ ಪ್ರಜ್ಞೆಯೊಂದಿಗೆ ಮೇಳವಿಸಿ. ತನ್ನ ಕಾವ್ಯಕ್ಷೇತ್ರವನ್ನು ಹಿಗ್ಗಲಿಸಿಕೊಂಡು. ಬದುಕಿನ ಹೊಸ ಅರ್ಥ, ಹೊಸಮೌಲ್ಯ ಕಂಡುಕೊಂಡ ಇನ್ನೊಬ್ಬ ಕನ್ನಡ ಕವಿಯಿಲ್ಲ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ-ಇತರರಂತೆ. ಜನಪದ ಪರಂಪರೆ. ಸಂಸ್ಕಾರ. ಹಾಗೂ ಭಾಷೆಗಳೆಲ್ಲವನ್ನೂ

ಜನಪದ ವಲಯದಲ್ಲಿಯೇ ಸೀಮಿತಗೊಳಿಸಿ, ಅಲ್ಲಿಯೇ ತಮ್ಮ ಕಾವ್ಯದ ಸೀಮಾರೇಖೆಯನ್ನು ಗುರುತಿಸಿಕೊಳ್ಳದೆ, ತಮ್ಮ ಕಾವ್ಯದ ಕ್ಷಿತಿಜವನ್ನು ವಿಸ್ತರಿಸಿಕೊಂಡ ಶ್ರೇಯಸ್ಸು ಬೇಂದ್ರೆಯವರದು. ಜತೆಗೆ ಬೇಂದ್ರೆಯವರ ಕಾವ್ಯದ ಮೇಲಾದ ಜಾನಪದ ಪ್ರಭಾವ, ಜನಪದಕಾವ್ಯಕ್ಕೆ ಮರುಹುಟ್ಟು ನೀಡಿದ್ದು ಸಾರ್ಥಕವೆನಿಸಿದೆ. ಇವರು ತಮಗೆ ಗೊತ್ತಿರುವ ಜಾನಪದವೆಲ್ಲವನ್ನೂ ಕಾವ್ಯದಲ್ಲಿ ಇಳಿಸಬಹುದಾಗಿತ್ತು. ಹಾಗೆ ಮಾಡದೆ, ತಮಗೆ ಎಷ್ಟು ಬೇಕೊ, ಅಷ್ಟನ್ನು ಮಾತ್ರ ಪಡೆದು ಮಹಾಕವಿಯ ಸೂಕ್ಷ್ಮಪ್ರಜ್ಞೆ ಮತ್ತು ಪ್ರತಿಭೆಗಳನ್ನು ತೋರ್ಪಡಿಸಿಕೊಂಡಿದ್ದಾರೆ. ಆ ಮುಖೇನ ತಮ್ಮ ಕಾವ್ಯಮೌಲ್ಯವನ್ನು ದ್ವಿಗುಣಿತಗೊಳಿಸಿಕೊಂಡಿದ್ದಾರೆ.

ಅಡಿಟಿಪ್ಪಣಿಗಳು

೧. ಬಿ. ಎಂ. ಶ್ರೀಕಂಠಯ್ಯ : ಗರತಿಯ ಹಾಡು-ಪ್ರಸ್ತಾವನೆ, ಪು; ೫

೨. ನಂ. ತಪಸ್ವೀಕುಮಾರ : ಜಾನಪದ ಅಧ್ಯಯನದ ಸಂಕ್ಷಿಪ್ತ ಇತಿಹಾಸ:ಪ್ರಸ್ತಾವನೆ: ಪು : ೧

೩. ದೇ. ಜವರೇಗೌಡ : ಜಾನಪದ ಅಧ್ಯಯನ : ಪು : ೧

೪. ಸಿಂಪಿ ಲಿಂಗಣ್ಣ : ಚಿನ್ನದ ಬೆಳಸು : ಪು : ೧೦

೫. ಎಸ್.ಜಿ. ಇಮ್ರಾಪುರ : ಜಾನಪದ ಸಾಹಿತ್ಯದರ್ಶನ (ಭಾಗ: ೧) ಪು : ೪೯

೬. ಸಿಂಪಿ ಲಿಂಗಣ್ಣ : ಚಿನ್ನದ ಬೆಳಸು ಪು : ೧೦೨

೭. ಅಂಬಿಕಾತನಯದತ್ತ : ಗರಿ: ಮುನ್ನುಡಿ, ಪು: ೬

೮. ಚಂದ್ರಶೇಖರ ಕಂಬಾರ : ನಮ್ಮ ಜಾನಪದ: ಪು : ೭೧

೯. ಅಂಬಿಕಾತನಯದತ್ತ : ಮತ್ತೆ ಶ್ರಾವಣಾ ಬಂತು: ಪು : ೧೯.

೧೦. ಬುದ್ದಣ್ಣ ಹಿಂಗಮಿರೆ (ಸಂ) : ಇಳಿದು ಬಾ ತಾಯಿ ಪು : ೫೧೩-೫೧೪

೧೧. ಅಂಬಿಕಾತನಯದತ್ತ : ಮತ್ತೆ ಶ್ರಾವಣಾ ಬಂತು: ಪು:೫೪

೧೨. ಚಂದ್ರಶೇಖರ ಕಂಬಾರ : ನಮ್ಮ ಜಾನಪದ ಪು : ೭೩

೧೩. ಕೀರ್ತಿನಾಥ ಕುರ್ತಕೋಟಿ : ಯುಗಧರ್ಮ ಹಾಗೂ ಸಾಹಿತ್ಯದರ್ಶನ ಪು: ೫೬

೧೪. ಹಲಸಂಗಿ ಗೆಳೆಯರು (ಸಂ) : ಗರತಿಯ ಹಾಡು : ಪು : ೧೧೫

೧೫. ಹಲಸಂಗಿ ಗೆಳೆಯರು (ಸಂ) : ಗರತಿಯ ಹಾಡು : ಪು : ೫೪

೧೬. ಹಲಸಂಗಿ ಗೆಳೆಯರು (ಸಂ) : ಗರತಿಯ ಹಾಡು : ಪು : ೮೮

೧೭. ಬಿ.ಎಸ್. ಗದ್ದಗಿಮಠ : ಕನ್ನಡ ಜಾನಪದ ಗೀತೆಗಳು : ಪು : ೪೦

೧೮. ಹಲಸಂಗಿ ಗೆಳೆಯರು (ಸಂ) : ಗರತಿಯ ಹಾಡು : ಪು : ೧೨೮

೧೯. ಹಲಸಂಗಿ ಗೆಳೆಯರು (ಸಂ) : ಗರತಿಯ ಹಾಡು : ಪು : ೫೫

೨೦. ಅಂಬಿಕಾತನಯದತ್ತ : ಮತ್ತೆ ಶ್ರಾವಣಾ ಬಂತು: ಪು : ೧೦-೧೧

೨೧. ಅಂಬಿಕಾತನಯದತ್ತ : ಮತ್ತೆ ಶ್ರಾವಣಾ ಬಂತು: ಪು : ೫೫

೨೨. ಸಿಂಪಿ ಲಿಂಗಣ್ಣ . ಪಿ. ಧೂಲಾ (ಸಂ) : ಜೀವನ ಸಂಗೀತ : ಪು : ೪

೨೩. ಜಿ. ಎಸ್. ಶಿವರುದ್ರಪ್ಪ : ನವೋದಯ. ಪು : ೧೫೯

೨೪. ಸಿ.ಕೆ.ನಾವಲಗಿ : ವಚನಸಾಹಿತ್ಯದಲ್ಲಿ ಜಾನಪದ ಅಂಶಗಳು (ಅಪ್ರಕಟಿತ-ಮಹಾಪ್ರಬಂಧ) ಪು.೪೨೫

೨೫. ಶಂ.ಬಾ. ಜೋಶಿ : : ಕಂನುಡಿಯ ಹುಟ್ಟು : ಪು : ೧೦೧

೨೬. ಸಿ.ಕೆ. ನಾವಲಗಿ : ವಚನ ಸಾಹಿತ್ಯದಲ್ಲಿ ಜಾನಪದ ಅಂಶಗಳು (ಅಪ್ರಕಟಿತ -ಪ್ರಬಂಧ) ಪು:೪೪೦

೨೭. ಎಂ. ಎಂ. ಕಲಬುರ್ಗಿ : ಮಾರ್ಗ (ಸಂ: ಎರಡು)ಪು : ೪೫೨

೨೮. ಗೌರೀಶ ಕಾಯ್ಕಿಣಿ : ಕಂಪಿನ ಕರೆ : ಪು : ೯೬

೨೯. ಗೌರೀಶ ಕಾಯ್ಕಿಣಿ : ಕಂಪಿನ ಕರೆ : ಪು : ೫೨-೫೩

೩೦. ಚಂದ್ರಶೇಖರ ಕಂಬಾರ : ಜಾನಪದ-ಪು : ೭೪

೩೧. ಗಿರಡ್ಡಿ ಗೋವಿಂದರಾಜ : ಜನಪದ ಕಾವ್ಯ : ಪು : ೬೪-೬೫

***

ಉಪನ್ಯಾಸ ಗ್ರಂಥಮಾಲೆಯ
ಕೆಲವು ಪ್ರಕಟನೆಗಳು

---

೧ ಉತ್ತರ ಕನ್ನಡದ ಆಧುನಿಕ ಕನ್ನಡ ಕಾವ್ಯ
—ಎಂ. ಎನ್. ಪ್ರಭು

೨ ಜನಪದ ಹಾಸ್ಯ —ಎಸ್. ಬಿ. ಶೀಲವಂತಮಠ

೩ ಜಾನಪದ ಹಾಡುಗಳಲ್ಲಿ ನರಗುಂದ ಬಾಬಾಸಾಹೇಬ
—ಸೋಮಶೇಖರ ಇಮ್ರಾಪೂರ

೪ ಜನಪದ ಗೀತೆಗಳಲ್ಲಿ ಶೃಂಗಾರ —ಗುರುಪಾದ ಫಿವಾರಿ

೫ ಜಾನಪದದಲ್ಲಿ ಆರ್ಥಿಕ ವಿಚಾರಗಳು
—ಮಹಾಂತೇಶ ಎಸ್ ಗುಬ್ಬೇವಾಡ

೬ ಗರತಿಯ ಹಾಡುಗಳಲ್ಲಿ ಕೌಟುಂಬಿಕ ಜೀವನ ಚಿತ್ರಣ
—ದೇವೇಂದ್ರಕುಮಾರ ಹಕಾರಿ

೭ ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ
—ಬಸವರಾಜ ಮಲಶೆಟ್ಟಿ

೮ ಜನಪದ ತ್ರಿಪದಿಗಳಲ್ಲಿ ಜೀವನ ಮೌಲ್ಯ
—ಎಂ. ಬಿ. ಹೂಗಾರ

೯ ಜನಪದ ಕಾವ್ಯದಲ್ಲಿ ಪ್ರಣಯ ಚಿತ್ರಣ
—ಬಸವರಾಜ ಸಬರದ

೧೦ ಹಬ್ಬಗಳ ಜಾನಪದ ಹಾಡುಗಳು —ಎಂ. ಎನ್. ವಾಲಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ